(MR. SPEAKER.)

the motion can withdraw it only by the leave of the House. Till that stage is reached, a member who has given notice is entitled to withdraw and no permission is necessary for him to withdraw.

In the present case, Sri Puttaswamy was exercising his undoubted right in withdrawing. He has also explained that the newspaper has published a correction. I need not have brought it to the notice of the House but I did so because the matter had been originally raised in the House.

BUDGET FOR 1955-56—DEMANDS FOR GRANTS.

Sri J. MOHAMED IMAM (Jagalur).—I quite agree that it is a matter of understanding among the members as to the procedure to be adopted and we have adopted the procedure. Sir, today, subject to the approval of the Leader of the House, I take up the 'Forest' and 'Printing and Stationery.' The other Demands may be deleted, if it is acceptable to the Leader of the House and the other Members.

Sri K. HANUMANTHAIYA (Leader of the House).—That can be done Sir.

Mr. SPEAKER.—Does the House agree to this procedure ?

MEMBERS.—Yes.

DEMAND NO. 4—FOREST.
10. FOREST.

Sri B. HUTCHE GOWDA (Turuvekere).—I oppose the demand.

Mr. SPEAKER.—I will move the Demand first and then you can speak.

Motion moved :

"That a sum not exceeding Rs. 44,30,000 be granted to the Government to defray the charges which will come in course of payment during the year ending 31st Day of March 1956, in respect of 'Forest'."

*ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈ ಇಲಾಖೆಯಲ್ಲಿ ವರ್ಷೇ ವರ್ಷೇ ಉತ್ಪತ್ತಿ ಕಡಮೆಯಾಗುತ್ತಿದೆ; ಖರ್ಚು ಜಾಸ್ತಿಯಾಗುತ್ತಿದೆ. ಇದರ ಆಡಳಿತ ನೋಡಿದರೆ ಈಚೀಚೆಗೆ ರಾಜ ಮಹಾರಾಜರುಗಳಿಗೆ ಮತ್ತು ಚಕ್ರವರ್ತಿಗಳಿಗೆ ಷಿಕಾರಿ ನಡೆಸತಕ್ಕ ಇಲಾಖೆಯಾಗಿ ಪರಿಣಮಿಸುತ್ತಿದೆ. ಈ ಇಲಾಖೆಯುವರು 30 ಲಕ್ಷ ಎಕರೆಗಳ ಕಾಡು ಪ್ರದೇಶವನ್ನು ಇಟ್ಟುಕೊಂಡಿದ್ದಾರೆ. ಈ ವರ್ಷದ ಉತ್ಪತ್ತಿ 86 ಲಕ್ಷ ರೂಪಾಯಿಗಳಾಗಿದ್ದರೆ, ಮುಂದಿನ ವರ್ಷ 44 ಲಕ್ಷ ರೂಪಾಯಿಗಳಿಗೆ ಅಂದಾಜಾಗಿದೆ. ಅದೇ ನಮ್ಮ ಪಕ್ಕದ ಪ್ರಾಂತ್ಯವಾದ ಕೊಡಗು ದೇಶವನ್ನು ನೋಡುವುದಾದರೆ, ಅದು ನಮ್ಮ ಸಂಸ್ಥಾನದ 40ನೇ ಒಂದು ಭಾಗದಷ್ಟಿದ್ದರೂ, ನಮ್ಮ ಉತ್ಪತ್ತಿ ಅದರ ಉತ್ಪತ್ತಿಯ ಅರ್ಧಕ್ಕಿಂತ ಕಡಮೆಯಾಗಿದೆಯೆಂದು ಹೇಳಬಹುದು. ಅಲ್ಲದೆ ನಮಗೆ ಬರುವ 41 ಲಕ್ಷ ರೂಪಾಯಿಗಳಲ್ಲಿ 35 ಲಕ್ಷ ರೂಪಾಯಿಗಳು ಕೇವಲ ಗಂಧದ ಮರಗಳಿಂದಲೇ. ಅಲ್ಲಿಗೆ ನಿವ್ವಳ ನಮ್ಮ ಉತ್ಪತ್ತಿ 6,20,000 ರೂಪಾಯಿಗಳು ಮಾತ್ರ.

ಅಲ್ಲದೆ, ಇತರ ಉತ್ಪತ್ತಿ—ಖರ್ಚು ಯಾವರೀತಿ ನಡೆಯುತ್ತಿದೆಯೆಂಬುದನ್ನು ಹೇಳುತ್ತೇನೆ. ಕಾಗದದ ಕಾರ್ಖಾನೆಗೆ 1952-53 ರಲ್ಲಿ ಸರಬರಾಜುಮಾಡಿದ ಬಿದಿರು 1,72,410 ರೂಪಾಯಿಗಳದು. ಇದನ್ನು ಸಪ್ಲೈಮಾಡುವುದಕ್ಕೆ ಮಾಡಿರುವ ಖರ್ಚೇ 76,000 ರೂಪಾಯಿಗಳು. 1953-54 ರಲ್ಲಾದರೋ ಎರಡು ಲಕ್ಷ ರೂಪಾಯಿಗಳ ಖರ್ಚಾಗಿ ಕೇವಲ 45,000 ರೂಪಾಯಿಗಳ ಉಳಿತಾಯವಾಗಿದೆ. 1954-55ರಲ್ಲಿ ಇನ್ನೂ ಕಡಮೆ. 1,55,000 ರೂಪಾಯಿಗಳ ಬಿದಿರು ಸರಬರಾಯಿ ಮಾಡಲಾಗಿದೆ. ಅಷ್ಟನ್ನು ಸಪ್ಲೈ ಮಾಡುವುದಕ್ಕೆ 1,20,000 ರೂಪಾಯಿಗಳು ಖರ್ಚಾಗಿವೆ. ಅಲ್ಲಿಗೆ 35,000 ರೂಪಾಯಿಗಳ ಉತ್ಪತ್ತಿ ಈ ವರ್ಷ. 1955-56ರ ಪರಿಸ್ಥಿತಿಯೂ ಆಶಾದಾಯಕವಾಗಿಲ್ಲ. 2,55,000 ರೂಪಾಯಿಗಳ ಬಿದಿರನ್ನು ಒದಗಿಸುವುದಕ್ಕೆ 2,10,000 ರೂಪಾಯಿ ಖರ್ಚಾಗಿ, 45,000 ರೂಪಾಯಿ ನಿವ್ವಳ ಉತ್ಪತ್ತಿ.

ಹೀಗೆಯೇ, ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಷಯವನ್ನು ತೆಗೆದುಕೊಂಡರೆ, 1955-56, 8,50,000 ರೂಪಾಯಿಗಳ ಸೌದೆಯನ್ನು ಕೊಡುವುದಕ್ಕಾಗಿ 8 ಲಕ್ಷ ರೂಪಾಯಿ ಖರ್ಚಾಗಿದೆ. 1954-55ರಲ್ಲೂ ಯಥಾಪ್ರಕಾರ 8½ ಲಕ್ಷ ರೂಪಾಯಿಗಳ ಮರ ಸಪ್ಲೈಮಾಡಿ ಕೇವಲ 50,000 ರೂಪಾಯಿಗಳ ಆದಾಯ ಪಡೆದಿದ್ದಾರೆ. 1953-54ರಲ್ಲಾದರೂ 7,64,000 ರೂಪಾಯಿಗಳ ಮರ ಒದಗಿಸಿದೆ, 41,000 ರೂಪಾಯಿಗಳ ಆದಾಯ ಹೊಂದಿದ್ದಾರೆ. 1952-53ರಲ್ಲಿ ಸುಮಾರು 92,000 ರೂಪಾಯಿಗಳ ಆದಾಯ ಬಂದಿದೆ.

ಈ ಪ್ರಕಾರ ನಮ್ಮ ಕಾಡಿನ ಮರಗಳನ್ನು ಇಷ್ಟು ಹೆಚ್ಚು ಹೆಚ್ಚಿಗೆ ಕೊಟ್ಟು ಅದರ ಸಾಗಾಣಿಕೆ ಖರ್ಚೇ ವಿಪರೀತವಾಗಿ ನಮಗೆ ಬರುತ್ತಿರುವ ಆದಾಯ ಬಹಳ ಶೋಚನೀಯವಾಗಿದೆ. ಗಂಧದ ಮರದಲ್ಲಿ ಬರತಕ್ಕ 33 ಲಕ್ಷ ರೂಪಾಯಿಗಳು ಕೂಡ ಉಳಿಯುವುದೇ ಬಹಳ ಕಷ್ಟವಾಗಿದೆ.

ಇದೇ ರೀತಿ ಮರಗಳ ಮಾರಾಟದಿಂದ ಬಂದಿರುವ ದುಡ್ಡು ಆಶಾದಾಯಕವಾಗಿಲ್ಲ. 1953-54 ರಲ್ಲಿ 22 ಲಕ್ಷ ರೂಪಾಯಿಗಳನ್ನು ಮರಗಳ ಮಾರಾಟದಿಂದ ಹೊಂದಿದ್ದಾರೆ. ಆದರೆ ಈ ಮರಗಳನ್ನು ಕಡಿಯುವುದಕ್ಕೆ ಮಾಡಿರುವ ಖರ್ಚು 22 ಲಕ್ಷ ರೂಪಾಯಿಗಳಿಗೆ ಬಂದಿದೆ. 1953-54 ರಲ್ಲಿ ನೋಡುವುದಾದರೆ, 10 ಲಕ್ಷ

ರೂಪಾಯಿಗಳ ಉತ್ಪತ್ತಿಯಿದೆ. 1954-55 ರಲ್ಲಿ 39 ಲಕ್ಷದ 27 ಸಾವಿರ ರೂಪಾಯಿಗಳ ಉತ್ಪತ್ತಿಯಲ್ಲಿ ಗಂಧದಮರದ ಉತ್ಪತ್ತಿ ಕಳೆದರೆ 6 ಲಕ್ಷದ 23 ಸಾವಿರ ರೂಪಾಯಿ ಉಳಿಯುತ್ತದೆ. ಇಷ್ಟೊಂದು ಕಾಡನ್ನಿಟ್ಟು ಕೊಂಡು, ಸಿಬ್ಬಂದಿಗಾಗಿ ಇಷ್ಟು ಹೆಚ್ಚಿಗೆ ಖರ್ಚುಮಾಡಿ 6 ಲಕ್ಷ ರೂಪಾಯಿಗಳನ್ನು ಸಂಪಾದಿಸಬೇಕೇ! ಇಂಥ ಇಲಾಖೆ ಏಕಿರಬೇಕೋ ಗೊತ್ತಿಲ್ಲ. ಭದ್ರಾವತಿಗೆ ಸಪ್ಲೈ ಮಾಡಬೇಕೆಂದರೆ, ಅವರಿಗೇ ಒಂದು ಕಾಡನ್ನು ಬಿಟ್ಟು ಕೊಟ್ಟು ಅವಶ್ಯಕವಾದ ಷರತ್ತುಗಳನ್ನು ವಿಧಿಸಿ ನಾವು ಈ ಉತ್ಪತ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ವಿಲ್ಲವೇ?

ಇದೇ ರೀತಿ ಸೀನಿಯೊರೇಜ್ ಮಾಡಿಕೊಂಡಿರುವ ವಿಷಯವನ್ನೂ ಸಭೆಯಮುಂದೆ ಎಷ್ಟೋಸಾರಿ ತಂದಿದ್ದೇವೆ. ಮರವನ್ನು ಅರ್ಧಾಣೆ, ಒಂದಾಣೆಗೆ ಕೊಟ್ಟು ಕಂಪೆನಿಗೆ ಲಾಭ ಮಾಡಿಕೊಡುತ್ತಿದ್ದಾರೆ. ಇಲಾಖೆಯ ದೊಡ್ಡ ದೊಡ್ಡ ಆಫೀಸರುಗಳು ರಿಟೈರ್ ಆಗುವ ಹೊತ್ತಿಗೆ ತಕ್ಕ ಅನುಕೂಲ ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ. ಆಫೀಸರುಗಳು ರಿಟೈರ್ ಆದ ತಕ್ಷಣ ಈ ಕಂಪೆನಿಗೆ ಸೇರಿಕೊಂಡು ಬಿಡುವುದನ್ನು ನೀವು ನೋಡಿರಬಹುದು. ಈ ರೀತಿ ಮರಗಳನ್ನು ಕಡಿದು ಕಂಪೆನಿಗೆ ಅಡಿಗೆ $1\frac{1}{2}$ ಆಣೆಯಂತೆ, ನಾಲ್ಕಾಣೆಯಂತೆ ಕೊಡುತ್ತಿರುವ ನೀತಿ ಸರಿಯಲ್ಲ.

ಆಮೇಲೆ Sandalwoodನ್ನು ಕೆಲವು private persons ಗೆ ಮಾರಾಟ ಮಾಡಿದ್ದಾರೆ. ಇದರಿಂದ 1955-56 ಕ್ಕೆ 4 ಲಕ್ಷದ 60 ಸಾವಿರ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಈ ಬಾಬಿನಲ್ಲಿ ಆಗತಕ್ಕ ಮೋಸಗಳನ್ನು ಸಭೆಯಮುಂದೆ ಅನೇಕ ಸಾರಿ ತಂದಿದ್ದೇವೆ. ಆದರೂ ತಾವು ಏನೂ ಮಾಡಿಲ್ಲ. ಟೆಂಡರ್ ಮೇಲೆ 50-60 ಟನ್ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಅವರು ತೆಗೆದುಕೊಂಡಿರುವುದೇ ಇಲ್ಲ. ಇಲಾಖೆಯವರು ಟೆಂಡರ್ ಕೊಟ್ಟಂತೆ ಕೊಟ್ಟು ಪರ್ಮಿಟ್ ಕೊಟ್ಟಂತೆ ಮಾಡುತ್ತಾರೆ.

ಈ ಪ್ರಕಾರ ಈ ಇಲಾಖೆಯಲ್ಲಿ ಹಣ ಎಷ್ಟರಮಟ್ಟಿಗೆ ದುರ್ವ್ಯಯವಾಗುತ್ತಿದೆಯೆಂದು ಹೇಳುವಹಾಗಿಲ್ಲ. ಮರಗಳನ್ನು ಕಡಿದು ಸಾಗಿಸುವುದಕ್ಕೆ ಕೊಡತಕ್ಕ ದುಡ್ಡು ಅಲ್ಲಿಂದ ಬರತಕ್ಕ ದುಡ್ಡಿಗೆ ಸರಿಹೋಗುತ್ತದೆ. ಕೊನೆಗೆ ಫಾರೆಸ್ಟ್ ಇಲಾಖೆಯಲ್ಲಿರುವ ಎಲ್ಲ ಮರಗಳನ್ನೂ ಮಾರಿದರೂ ಬಹುಶಃ establishmentಗೇ ಸಾಕಾಗುವುದಿಲ್ಲವೆಂದು ಹೇಳಬಹುದು. ಆಡಳಿತ ದಕ್ಷತೆ ವರ್ಷೇ ವರ್ಷೇ ಕಡಮೆಯಾಗುತ್ತಿರುವುದನ್ನು ಇದರಿಂದಲೇ ಅರ್ಥ ಮಾಡಿಕೊಳ್ಳಬಹುದು. ಇಂಥ ಇಲಾಖೆಯನ್ನು ಏಕೆ ಇಟ್ಟುಕೊಳ್ಳಬೇಕೋ ಗೊತ್ತಿಲ್ಲ.

ಟಿಂಬರ್ ವಿಚಾರದಲ್ಲಿ ಸರ್ಕಾರಿ ಏಜೆನ್ಸಿಯ ಮೇಲೆ ಸಾಗಾಣಿಕೆ ಮಾಡುವುದಕ್ಕೆ 1952-53 ರಲ್ಲಿ 22 ಲಕ್ಷ ರೂಪಾಯಿಗಳಿದ್ದುದು, 1954-55 ರಲ್ಲಿ 23 ಲಕ್ಷದ 80 ಸಾವಿರ ರೂಪಾಯಿಗಳಾದರೂ, ಖರ್ಚು 24 ಲಕ್ಷದ 75,000 ರೂಪಾಯಿಗಳು. ಈ ರೀತಿ ಪ್ರತಿಯೊಂದು ಭಾಗದಲ್ಲೂ ಈ ಇಲಾಖೆಯಲ್ಲಿ ಉತ್ಪತ್ತಿಗೆ ಸರಿಯಾಗಿ ಅಥವಾ ಇನ್ನೂ ಹೆಚ್ಚಿಗೆ ಖರ್ಚು ಹೆಚ್ಚಾಗಿರುವಂತೆ ಕಾಣಬರುತ್ತದೆ.

ಹೀಗೆ ಇರುವುದು ಇದು ಒಂದೇ ಬಾಬಲ್ಲ. ಇದೇ ರೀತಿಯಾಗಿ ಹೇಳಬೇಕಾದಂಥ ಬಾಬುಗಳು ಇನ್ನೂ ಸಾವಿರಾರು ಇವೆ. ಈ ಮೈನರ್ ಫಾರೆಸ್ಟ್ ಪ್ರಾಡ್ಯೂಸ್ ಬಾಬಿನಲ್ಲಿ 65 ಸಾವಿರ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. ಆದರೆ ಉತ್ಪತ್ತಿ ಏನು ಅನ್ನುವುದು ಮಾತ್ರ ಕಂಡುಬರುತ್ತಿಲ್ಲ. ಹೀಗೆಯೇ ಯಾವ ಬಾಬಿನಲ್ಲಿ ನೋಡಿದರೂ ಎಲ್ಲಾ ಫೇಲ್ಯೂರೇ ಆಗುತ್ತಿದೆ. ಒಂದು ವರ್ಷಕ್ಕೆ ಸರ್ಕಾರದವರ 4 ಲಕ್ಷ 49 ಸಾವಿರದ 632 ಕ್ಯುಬಿಕ್ ಫೀಟ್ ನಾಟವನ್ನು ಮಾರಾಟಮಾಡಿದ್ದಾರೆ. ಇದರಲ್ಲಿ 210 ಘನ ಅಡಿ ಪೋಲುಗಳನ್ನೂ, 4,361 ಘನ ಅಡಿಯ ಬಲ್ಲಿ ಪೋಲುಗಳನ್ನೂ 390 ಘನ ಅಡಿ ತ್ಯಾಗದ ಪೋಲುಗಳನ್ನು ಮಾರಾಟ ಮಾಡಿದ್ದರಿಂದ ಏನೂ ಲಾಭಬರಲಿಲ್ಲವೆಂದು ಹೇಳುವುದಾದರೆ ಅಂಥ ಮಾರಾಟವನ್ನೇತಕ್ಕೆ ಮಾಡಬೇಕು ಎಂದು ಕೇಳುತ್ತೇನೆ. ಅಂಥ ಮಾರಾಟ ಮಾಡುವುದಕ್ಕಿಂತ ಆ ಮರಗಳನ್ನೆಲ್ಲಾ ಹಾಗೆಯೇ ಕಾಡಿನಲ್ಲಿ ಬಿಟ್ಟು ಬಿಡುವುದೇ ಲೇಸೆಂದು ಹೇಳುತ್ತೇನೆ. ಇನ್ನು ಆ ಕೆ.ಜಿ.ಎಫ್‌ಗೆ ಸರಬರಾಯಿ ಮಾಡತಕ್ಕಂಥ ಟಿಂಬರ್ ವಿಚಾರದಲ್ಲಿ ಆ ರೇಟನ್ನು ಇಲ್ಲಿಯವರೆಗೂ ಬದಲಾವಣೆಮಾಡಿದ್ದಾರೋ ಅಥವಾ ಆ ಹಳೆಯ ರೇಟಿನಲ್ಲೇ ಇನ್ನೂ ಸರಬರಾಯಿ ಮಾಡುತ್ತಿದ್ದಾರೋ ಅದು ನನಗಂತೂ ಗೊತ್ತಿಲ್ಲ. ನಾನು ಈ ವಿಚಾರದಲ್ಲಿ ನಮ್ಮ ಸರ್ಕಾರಕ್ಕೊಂದು ಮಾತನ್ನು ಹೇಳಬೇಕಾಗಿದೆ. ಇವರಿಗೆ ಈ ಅರಣ್ಯಗಳ ಆಡಳಿತ ಹೇಗೆ ನಡೆಸಬೇಕು, ಇದರಿಂದ ಹೇಗೆ ಲಾಭ ಸಂಪಾದನೆ ಮಾಡಬೇಕು ಅನ್ನುವ ವಿಚಾರ ಅಷ್ಟು ತಿಳಿಯದೆ ಹೋದರೆ ತಮ್ಮ ಪಕ್ಕದಲ್ಲಿರತಕ್ಕಂಥ ಸಣ್ಣ ರಾಜ್ಯವಾದ ಕೊಡಗಿಗಾದರೂ ಹೋಗಿ ಅವರ ವ್ಯವಹಾರದೊಡನೆ ಹೋಲಿಸಿ ತಮ್ಮ ವ್ಯವಹಾರವನ್ನು ಇಲ್ಲಿ ಹೇಗೆ ನಡೆಸಬೇಕೆಂಬುದನ್ನಾದರೂ ಕಲಿತುಕೊಂಡು ಬರಬೇಕಾಗಿರುತ್ತೆಂದು ನನಗೆ ಅನ್ನಿಸುತ್ತಿದೆ. ನಮ್ಮ ಮಾನ್ಯ ಮಂತ್ರಿಗಳು ಯಾವ ಯಾವ ಬಾಬಿನಲ್ಲಿ ಹೇಗೆ ಉತ್ಪತ್ತಿ ಖೋತಾ ಆಗುತ್ತಿದೆ, ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ, ಅವುಗಳಿಂದ ಬರತಕ್ಕ ಉತ್ಪತ್ತಿಯೇನು, ಮೊದಲು 18 ಲಕ್ಷ ಆದಾಯ ಬರುತ್ತಿದ್ದ ಕಡೆ ಈ ದಿವಸ 6 ಲಕ್ಷಕ್ಕೆ ಇಳಿಯಲು ಕಾರಣವೇನು ಎಂಬುದನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಇದಕ್ಕೆ ಮುಖ್ಯ ಕಾರಣ ಇಲಾಖೆಯ ಅಧಿಕಾರಿಗಳಲ್ಲಿ ದಕ್ಷತೆ ಇಲ್ಲದಿರುವುದು ಮತ್ತು ವಿಶೇಷವಾಗಿ ಲೀಕೇಜ್ ಆಗುತ್ತಿರುವುದು. ಈ ಎರಡರಿಂದ ಉತ್ಪತ್ತಿ ಕಡಮೆಯಾಗಿದೆ. ಅನೇಕ ಬಾಬುಗಳಲ್ಲಿ ಉತ್ಪತ್ತಿ ಮಾತ್ರ ಹೆಚ್ಚದೆ ಖರ್ಚು ಬಾಬುಗಳು ಮಾತ್ರ ಹೆಚ್ಚುತ್ತಿವೆ. ಇನ್ನು ಅರಣ್ಯವನ್ನು ಬೆಳೆಸತಕ್ಕ ಬಾಬಿನಲ್ಲಿ ಒಂದು ಯೋಜನೆಯಿಲ್ಲ, ಒಂದು ಕ್ರಮವಿಲ್ಲ. ಎಷ್ಟೋ ಕಾಡುಗಳಲ್ಲಿ ಮರಗಳೇ ಇರುವುದಿಲ್ಲ. ಆದಾಗ್ಯೂ ಅದನ್ನು ಹೆಸರಿಗೆ ಮಾತ್ರ ಅರಣ್ಯವೆಂದು ಕರೆಯುತ್ತಿದ್ದಾರೆ. ತಾವು ಕಾಡನ್ನು ಬೆಳೆಸುವುದಾಗಿ ಹೇಳುತ್ತ 5-6 ವರ್ಷಗಳಿಂದ ಹೇರಳವಾಗಿ ಜಮೀನನ್ನು ಇಟ್ಟುಕೊಂಡಿದ್ದಾರೆ; ಆದರೆ ಅಲ್ಲಿ ಇಲ್ಲಿಯವರೆಗೆ ಒಂದು ಗಿಡವನ್ನಾದರೂ ಬೆಳಸಿಲ್ಲ. ಇಂಥಾ ಪ್ರದೇಶಗಳನ್ನೆಲ್ಲಾ ಏತಕ್ಕೆ ಫಾರೆಸ್ಟ್ ಎಂದು ಕರೆಯುತ್ತಿದ್ದಾರೋ ಅದರ ಅರ್ಥವೇ ಗೊತ್ತಾಗುತ್ತಿಲ್ಲ, ಒಟ್ಟಿನಲ್ಲಿ ನಾನು ಸರ್ಕಾರದವರಿಗೆ ಇಷ್ಟು ಹೇಳಬೇಕೆಂದಿದ್ದೇನೆ—ಈ ದಿವಸ ನೀವು ಸೀನಿಯೋರೇಜ್ ಪ್ರಕಾರ ಟಿಂಬರ್ ಕೊಟ್ಟುಕೊಂಡು ಹೋಗುತ್ತಿರುವುದರಿಂದ ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಹಾಳಾಗುತ್ತಿದೆ ಅದನ್ನು ಸರ್ಕಾರದವರು ಕೂಡಲೆ ತಪ್ಪಿಸಬೇಕು. ಇನ್ನು ಭದ್ರಾವತಿಯ ಕಾರ್ಖಾನೆಗೆ ಸೌದೆ ಸರಬರಾಯಿ ಮಾಡತಕ್ಕ ವಿಚಾರದಲ್ಲಿ ಕೂಡ ಬಹಳ ಲುಕ್ಸಾನಾಗುತ್ತಿದೆ. ತಾವು ಈ ದಿವಸ ಅವರಿಗೆ ಹೀಗೆ ಲುಕ್ಸಾನಿನಲ್ಲಿ ಮಾರಾಟ ಮಾಡುವುದಕ್ಕೆ ಬದಲಾಗಿ ಒಂದು ನಿರ್ದಿಷ್ಟವಾದ ಪ್ರದೇಶವನ್ನೇ ಅವರಿಗೆ ಹಾಕಿಕೊಟ್ಟರೆ ಬಹಳ ಅನುಕೂಲವಾಗಬಹುದೆಂದು ನನಗೆ ತೋರುತ್ತಿದೆ. ತಿಂಗಳಿಗೆ 5 ಸಾವಿರ ಟನ್ ಕಟ್ಟಿಗೆ ಕೊಟ್ಟಾ

(ಶ್ರೀ ಬಿ. ಹುಚ್ಚೇಗೌಡ.)

ಗಲೂ 2½ ಲಕ್ಷ ರೂಪಾಯಿಗಳು; ತಿಂಗಳಿಗೆ 8 ಸಾವಿರ ಟನ್ ಕಟ್ಟಿಗೆ ಕೊಟ್ಟಾಗಲೂ 2½ ಲಕ್ಷ ರೂಪಾಯಿಗಳೆಂದರೆ ಏನಾಯಿತು? ಈ ಪ್ರತಿಯೊಂದು ಬಾಬನ್ನೂ ತಾವು ಪರಿಶೀಲನೆ ಮಾಡಿದರೆ ಪ್ರತಿಯೊಂದರಲ್ಲೂ ನಮಗೆಷ್ಟು ಲುಕ್ಸಾನಾಗುತ್ತಿದೆ ಅನ್ನುವುದು ಕಂಡುಬರುತ್ತಿದೆಯೇ ಶಿವಾಯಿ ಲಾಭ ಒಂದರಲ್ಲೂ ಕಾಣುತ್ತಿಲ್ಲ. ತಾವು 22 ಲಕ್ಷ ರೂಪಾಯಿಗಳನ್ನು ದುಡಿಯಲು 23 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಈ ಬಗ್ಗೆ ಮೊನ್ನೆತಾನೆ ಶ್ರೀ ಟಿ. ಸಿ. ಬಸಪ್ಪನವರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಸರ್ಕಾರದವರು ನಾವು ಏನು ಹೇಳಿದರೂ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಹೋಗಲಿ. ಅವರ ಪಕ್ಷದ ಸದಸ್ಯರೇ ಹೇಳಿದಾಗ್ಯೂ ಅವರು ಅದಕ್ಕೆ ಗಮನಕೊಡದೆಹೋದರೆ ನಾವಿನ್ನೇನುಮಾಡುವುದಕ್ಕಾಗುತ್ತದೆ? ನಾವು ಇಷ್ಟೊಂದು ವಿಚಾರಗಳನ್ನು ಹೀಗೆ ಹೇಳುತ್ತಿರುವಾಗ ನಾವು ಹೇಳುವುದೆಲ್ಲಾ ಸರಿಯೇ ಅಥವಾ ತಪ್ಪೇ ಅನ್ನತಕ್ಕದ್ದನ್ನೂ ಕೂಡ ವಿಮರ್ಶೆ ಮಾಡುವುದಕ್ಕೆ ಮಂತ್ರಿಗಳು ಪ್ರಯತ್ನಪಡದೆ ಇದ್ದರೆ ಅದಕ್ಕೆ ನಾನಿನ್ನೇನು ಮಾಡಬೇಕು ಅನ್ನುವುದೇ ತಿಳಿಯದಾಗಿದೆ. ಗಂಧದ ಮರದಿಂದ ನಮಗೀಗ ಬಹಳ ಲುಕ್ಸಾನಾಗಿದೆ. ಅದನ್ನು ತಾವು ಹಾಗೆಯೇ ರಿಸರ್ವ್ ಮಾಡಿಕೊಂಡು ಇತರರಿಗೆ ಸರಿಯಾದ ಬೆಲೆಗೆ ಮಾರಾಟ ಮಾಡಿದ್ದರೆ ಸರ್ಕಾರಕ್ಕೆ ಎಷ್ಟೋ ದುಡ್ಡು ಬರುತ್ತಿತ್ತು. ಆದರೆ ಹೀಗೆ ಮಾಡುತ್ತಿರುವುದು ಸರಿಯಾದದ್ದಲ್ಲ—ಯಾದದ್ದಲ್ಲ—ಇದನ್ನೆಲ್ಲಾ ಬೇಗ ಸರಿಪಡಿಸಬೇಕು; ಅರಣ್ಯ ಬಾಬಿನಿಂದ ಹೆಚ್ಚು ಆದಾಯ ಬರುವಂತೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ನಾನು ಈ ಫಾರೆಸ್ಟ್ ಇಲಾಖೆಯ ಆಡಳಿತದ ಬಗ್ಗೆ ಕೆಲವು ಖೋತಾ ಸೂಚನೆಗಳನ್ನು ಕಳುಹಿಸಿದ್ದೆನು. ಅದರ ಬಗ್ಗೆ ಕೆಲವು ವಿವರಣೆಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದೆನು.

Mr. SPEAKER.—You wanted some information the other day.

Sri T. C. BASAPPA.—I had requested the Minister to give me some information. Till now I have not been furnished with the information.

Dr. R. NAGAN GOWDA (Minister for Agriculture)—I have asked for that information. I have not got it. I will be able to supply it as soon as I get it.

ಶ್ರೀ ಟಿ. ಸಿ. ಬಸಪ್ಪ.—ಹೀಗೆ ಮಿನಿಸ್ಟರುಗಳ ಮಾತಿಗೇ ಕೆಳಗಿನ ಅಧಿಕಾರಿಗಳು ಉತ್ತರ ಕಳುಹಿಸಲಿಲ್ಲ ಅಂದ ಮೇಲೆ ಇನ್ನು ಅವರು ನಮ್ಮ ಮಾತುಗಳಿಗೆ ಎಷ್ಟರ ಮಟ್ಟಿಗೆ ಬೆಲೆ ಕೊಡುತ್ತಾರೆ ಅನ್ನುವುದು ಇದರಿಂದಲೇ ವೇದ್ಯವಾಗುತ್ತದೆ. ಆದರೆ ಈ ಫಾರೆಸ್ಟಿನ ಇಲಾಖೆಯ ಅಂಕಿಅಂಶಗಳು ಸರಿಯಾಗಿ ನನಗೆ ಸಿಕ್ಕದೆ ಇರುವುದರಿಂದ ನಾನೀಗ ಆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮತ್ತೆ ಕೆಲವು ವಿಚಾರಗಳನ್ನು ಮಾತ್ರ ನಾನೀಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಸರ್ಕಾರದವರು ಈ ದಿವಸ ರೈತನ ವಿಚಾರದಲ್ಲಿ ಕಂದಾಯವನ್ನು ವಸೂಲ್ಮಾಡುವಾಗ ಮತ್ತು ವ್ಯಾಪಾರಗಾರರಿಂದ ಟ್ಯಾಕ್ಸ್‌ನ್ನು ವಸೂಲ್ಮಾಡುವಾಗ ಬಹಳ ಕಟ್ಟುನಿಟ್ಟಿನಿಂದ ಬಹಳ ನಿಷ್ಠೂರವಾಗಿ ವಸೂಲ್ಮಾಡುತ್ತಾರೆ. ಇವುಗಳ ಬಗ್ಗೆ ಕಾನೂನು ಪ್ರಕಾರ ಇರುವ ವಸೂಲಾತಿ ಕ್ರಮಗಳನ್ನು ಕಡ್ಡಾಯವಾಗಿ ಜಾರಿಗೆ ತಂದಿದ್ದೀರಿ. ಹಾಗೆ ವಸೂಲ್ಮಾಡುವುದೂ ನ್ಯಾಯವಾದದು ಮತ್ತು ಒಳ್ಳೆಯದು. ಆದರೆ ಅದೇ ರೀತಿಯಾಗಿ ಸರ್ಕಾರದ ಅಧಿಕಾರಿಗಳು ತಮಗೆ ಕೊಟ್ಟಿರುವ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಾಗ ತಪ್ಪು ನಡೆದಿದ್ದಲ್ಲಿ ತಾವೇಕೆ ಅವರಿಗೆ ದಯಾ ದಾಕ್ಷಿಣ್ಯಗಳನ್ನು ತೋರಿಸುತ್ತಿದ್ದೀರೋ ಅದು ನನಗೆ ಗೊತ್ತಾಗುತ್ತಿಲ್ಲ. ರೈತನ ಬಗ್ಗೆ ತೋರಿಸತಕ್ಕ ನಿರ್ದಾಕ್ಷಿಣ್ಯವನ್ನೇ ಈ ಅಧಿಕಾರಿಗಳ ವರ್ತನೆಯ ಬಗ್ಗೆ ತಾವೇಕೆ ತೋರಿಸುವುದಿಲ್ಲ? ಆದರೆ ಈಗ ನನ್ನ ಗಮನಕ್ಕೆ ಬಂದಿರತಕ್ಕಂಥ ಈ ಅರಣ್ಯ ಇಲಾಖೆಯ ಕೆಲವು ಲೋಪದೋಷಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಹಿಂದೆ ನನ್ನ ಬಡ್ಜೆಟ್ ಭಾಷಣದ ಕಾಲದಲ್ಲಿ ಈ ಬಗ್ಗೆ ಅವಕಾಶವಿಲ್ಲವಾದ್ದರಿಂದ ಕೇವಲ ಒಂದೆರಡು ಮಾತುಗಳನ್ನು ಮಾತ್ರ ಆಗ ತಿಳಿಸಿದ್ದೆ. ಆದರೆ ಈಗ ಸಕಾಲ ಬಂದಿರುವುದರಿಂದ ಕೆಲವು ವಿಚಾರಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ಹಿಂದೆ ಶಿವಮೊಗ್ಗ ಸರ್ಕಲ್‌ನಲ್ಲಿ ಭದ್ರಾವತಿ ಕಾರ್ಖಾನೆಗೆ ಸೌದೆ ಸಪ್ಲೈ ಮಾಡತಕ್ಕ ಕಂಟ್ರಾಕ್ಟರುಗಳಿಗೆ ಮುಂಗಡವಾಗಿ ಹಣ ಕೊಡತಕ್ಕ ಸಂಬಂಧದಲ್ಲಿ ಒಬ್ಬರಿಗೆ 10 ಸಾವಿರ ರೂಪಾಯಿಗಳವರೆಗೆ ಮಾತ್ರ ಕೊಡಬಹುದೆಂದು ನಿಗದಿಮಾಡಿದ್ದಾರೆ. ಈಗ ಆ ನಿಗದಿ ಮಾಡಿದ್ದು ಮೀರಿ ಒಬ್ಬೊಬ್ಬರಿಗೆ ಮುಂಗಡವಾಗಿ ಕೊಟ್ಟಿರತಕ್ಕ ಹಣ ಒಂದು ಲಕ್ಷದವರೆಗೂ ಹೊರಟು ಹೋಗಿದೆ. ಹೀಗೆ ಮನಬಂದಂತೆ ಹಣವನ್ನು ಮುಂಗಡವಾಗಿ ಕೊಟ್ಟುಬಿಟ್ಟು, ಈ ದಿವಸ ಅದನ್ನು ವಸೂಲ್ಮಾಡುವುದಕ್ಕೆ ಸಾಧ್ಯವಿಲ್ಲ, ಅದನ್ನು ರೈಟ್‌ಆಫ್ ಮಾಡಿಬಿಡಿ ಎಂದು ಮನವಿಗಳು ಸರ್ಕಾರಕ್ಕೆ ಮೇಲ್ಪಟ್ಟ ಫಾರೆಸ್ಟ್ ಅಧಿಕಾರಿಗಳಿಂದ ಶಿಫಾರಸ್ಸಾಗಿ ಬಂದಿರುತ್ತವೆಯೆಂದು ಕೇಳುತ್ತೇನೆ. ಕಾನೂನು ಪ್ರಕಾರ ಆ ಅಧಿಕಾರಿಗಳು ಅಡ್ವಾನ್ಸ್ ಕೊಟ್ಟಮೇಲೆ ಅದನ್ನು ವಸೂಲ್ಮಾಡತಕ್ಕ ಜವಾಬ್ದಾರಿ ಕೂಡ ಆ ಅಧಿಕಾರಿಗಳ ಮೇಲೆಯೇ ಇರುತ್ತದೆ ಎಂದು ಕಾನೂನಿನಲ್ಲೇ ಬರೆದಿದೆ. ಹೀಗೆ ಕಾನೂನಿರುವಾಗ ಯಾರು ಎಷ್ಟೆಷ್ಟು ಮೊಬಲಗನ್ನು ಮುಂಗಡವಾಗಿ ಕೊಟ್ಟಿದ್ದಾರೋ ಅಷ್ಟನ್ನು ಅವರು ವಸೂಲ್ಮಾಡದೆ ಇರುವಾಗ ಅವರ ಮೇಲೆ ಸರ್ಕಾರದವರು ಕಡ್ಡಾಯವಾಗಿ ಏಕೆ ಕ್ರಮವನ್ನು ಕೈಕೊಳ್ಳಬಾರದು? ಅವರಿಂದ ಆ ಹಣವನ್ನು ವಸೂಲ್ಮಾಡತಕ್ಕ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಈ ತಹಲ್‌ವರೆಗೂ ಕೈಗೊಳ್ಳದೆ ಇರುವುದರಿಂದ ಈ ದಿವಸ ಪ್ರತಿಯೊಬ್ಬರ ಕೇಸಿನಲ್ಲೂ 40 ಸಾವಿರ, 50 ಸಾವಿರ ಹೀಗೆ ಮುಂಗಡವಾಗಿ ಕೊಟ್ಟಿದ್ದ ಹಣವನ್ನು ರೈಟ್‌ಆಫ್ ಆಗಬೇಕೆಂದು ಕೇಳಿದ್ದಾರೆ. ಸರ್ಕಾರಕ್ಕೆ ಆ ರೀತಿ ಮನವಿಗಳು ಕೂಡ ಬಂದಿರುತ್ತವೆ. ಆದರೆ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಂದ ಏನು ಕಾರಣದಿಂದ ಹೀಗೆ ಇಲ್ಲಿಯವರೆಗೂ ಆ ಹಣವನ್ನು ವಸೂಲ್ಮಾಡದೆ ಕೈಬಿಟ್ಟಿದ್ದಾರೆ ಅನ್ನುವುದೇ ತಿಳಿಯದಾಗಿದೆ. ಈಗ ಅವರಿಂದ ಈ ಹಣ ವಸೂಲಾಗುವುದಿಲ್ಲ, ಆದುದರಿಂದ ಅವರಿಗೆ ಏನೋ ಒಂದು 5 % ಟೋಕನ್ ಫೈನ್ ಹಾಕಿದಹಾಗೆ ಮಾಡಿ ಬಾಕಿ ಹಣವನ್ನು ರೈಟ್‌ಆಫ್ ಮಾಡಬೇಕೆಂದು ಕೇಳಿರುವುದು ತುಂಬಾ ವ್ಯಥೆಯಾಗುವಂಥ ವಿಚಾರ. ಹಾಗೆ ಹಣವನ್ನು ಮುಂಗಡವಾಗಿ ಕೊಟ್ಟಿದ್ದ ಕೆಲವು ಅಧಿಕಾರಿಗಳು ಬಹಳ ಕಷ್ಟಪಟ್ಟು ಅದನ್ನೆಲ್ಲಾ ವಸೂಲ್ಮಾಡಿದ್ದಾರೆ. ಹೀಗೆ ಸತ್ಯದಿಂದ ಕೆಲಸಮಾಡತಕ್ಕಂಥ ಅಧಿ

ಕಾರಿಗಳೂ ಕೆಲವರಿದ್ದಾರೆ. ಕೆಲವು ಅಧಿಕಾರಿಗಳು ಮನಸ್ಸೋಚ್ಛೆ ಕಾನೂನಿಗೆ ಮೀರಿ ಹಣವನ್ನು ಮುಂಗಡ ವಾಗಿ ಕೊಟ್ಟು—ಅನೇಕ ವರ್ಷಗಳಾದರೂ ಅದನ್ನು ವಸೂಲ್ಮಾಡದೆ ತಮ್ಮ ಜವಾಬ್ದಾರಿಯೇನೆಂಬುದನ್ನೂ ಕೂಡ ಆಲೋಚನೆ ಮಾಡದೆ ಈ ದಿವಸ ಆ ಹಣವನ್ನೆಲ್ಲಾ ರೈಟ್‌ಆಫ್ ಮಾಡಿಬಿಡಬೇಕೆಂದು ಕೇಳುತ್ತಿರುವುದು ಸರ್ವಥಾ ನ್ಯಾಯವಲ್ಲ. ಅಧಿಕಾರಿಗಳು ಮಾಡಿದ ಕೈ ತಪ್ಪಿಗಾಗಿ ಸರ್ಕಾರದವರು ಹಣವನ್ನೇ ಬಿಟ್ಟುಬಿಡ ಬೇಕೆ? ಹೀಗೆಲ್ಲಾ ಮಾಡುವುದು ಸರಿಯಾದ್ದಲ್ಲ. ಹೀಗೆ ಯಾವ ಯಾವ ಅಧಿಕಾರಿಗಳು ಕಾನೂನನ್ನು ಉಲ್ಲಂಘನೆಮಾಡಿ ನಡೆದಿದ್ದಾರೋ ಅಂಥವರಿಂದ ಸರ್ಕಾರದವರು ಆ ಮೊಬಲಗನ್ನೆಲ್ಲಾ ಕಡ್ಡಾಯ ವಾಗಿ ವಸೂಲ್ಮಾಡಿಯೇ ತೀರಬೇಕೆಂದು ನಾನು ಸರ್ಕಾರದವರಿಗೆ ಒತ್ತಾಯಪಡಿಸುತ್ತೇನೆ. ಹೀಗೆ ಸರ್ಕಾರದವರು ಈ ಮೊಬಲಗನ್ನು ನಿರ್ದಾಕ್ಷಿಣ್ಯವಾಗಿ ವಸೂಲ್ಮಾಡದೆ ಹಾಗೆ ಒಂದು ಟೋಕನ್ ಫೈನ್ ತೆಗೆದುಕೊಂಡರೆ ಸರ್ಕಾರದವರೇ ಮುಂದೆಬರತಕ್ಕ ಅಧಿಕಾರಿಗಳಿಗೆಲ್ಲಾ ಈ ಒಂದು ದಾರಿಯನ್ನು ಹಾಕಿ ಕೊಟ್ಟಹಾಗೆ ಆಗುತ್ತದೆ. ಮುಂದಕ್ಕೆ ಅನೇಕರು ಇದರ ಅನುಕೂಲವನ್ನು ಹೊಂದಲು ಅವಕಾಶವಾಗ ಬಹುದು. ದಯವಿಟ್ಟು ಇಂಥಾದ್ದಕ್ಕೆಲ್ಲಾ ದಾರಿ ಮಾಡಿಕೊಡಬೇಡಿ ಎಂದು ನಾನು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

Mr. SPEAKER.—Any precedent created?

Sri T. C. BASAPPA.—I am afraid of that. They will create a precedent now. Therefore, I want to avoid it.

ಸ್ವಾಮಿ, ನಾನು ಈ ಹಿಂದೆ ಆಗಲೆ ನನ್ನ ಬಡ್ಜೆಟ್ ಭಾಷಣದಲ್ಲಿ ಹೇಳಿದಹಾಗೆ, ಸ್ಲೀಪರ್ಸ್ ಸಪ್ಲೈಮಾಡ ತಕ್ಕಂಥ ವಿಚಾರವನ್ನು ಈ ಫಾರೆಸ್ಟ್ ಇಲಾಖೆಯವರು ಇಟ್ಟುಕೊಂಡಿರುತ್ತಾರೆ. ಶಿವಮೊಗ್ಗ ಸರ್ಕಲ್ಲಿನಲ್ಲಿ ಈ ಸ್ಲೀಫರ್ಸ್‌ಗಳನ್ನು ಸರಬರಾಯಿ ಮಾಡತಕ್ಕ ಬಗ್ಗೆ ಎಲ್ಲಾ ಡಿವಿಜನ್‌ಗಳಿಗೂ ಆ ಕೆಲಸವನ್ನು ಹಂಚದೆ ಒಂದೇ ಒಂದು ಡಿವಿಜನ್ನಿಗೆ ಮಾತ್ರ ಆ ಕೆಲಸವನ್ನು ಕೊಟ್ಟಿದ್ದಾರೆ. ಬಾಕಿ ಡಿವಿಜನ್‌ಗಳವರು ಸಪ್ಲೈ ಮಾಡು ವುದಕ್ಕೆ ಸಿದ್ಧವಾಗಿದ್ದರೂ ಅವುಗಳಿಗೆ ಅವಕಾಶಕೊಡದೆ ಆ ಕೆಲಸವನ್ನೆಲ್ಲಾ ಒಂದೇ ಒಂದು ಡಿವಿಜನ್ ಇಟ್ಟು ಕೊಂಡು ಅವುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಹಾಗೆ ಸರಬರಾಯಿ ಮಾಡಿದ ಕೆಲವು ಸ್ಲೀಪರ್ಸ್‌ಗಳನ್ನು ಮೀಟರ್‌ಗೇಜಿಗೆ ಸರಿಬರಲಿಲ್ಲವೆಂದು ಹಿಂದಕ್ಕೆ ಕಳುಹಿಸಿ ದರೆ ಅವುಗಳನ್ನೇ ಸ್ವಲ್ಪ ಕತ್ತರಿಸಿ ನ್ಯಾರೋಗೇಜಿಗೆ ಸಪ್ಲೈ ಮಾಡುತ್ತಾರೆ. 9″ × 6″ ಸೈಜಿನ ಒಂದು ತುಂಡನ್ನು ಕತ್ತರಿಸಲು ಅಥವಾ ತುಂಡು ಹಾಕಲು ಬೇರೆ ಡಿವಿಜನ್‌ನವರು 2 ಆಣೆ ರೇಟನ್ನು offer ಮಾಡಿದ್ದರೂ ಅದನ್ನು ಶಿವಮೊಗ್ಗ ಕನ್ಸರ್‌ವೇಟರ್ ಅವರು ತಳ್ಳಿಹಾಕಿ ಒಂದೊಂದು ತುಂಡಿಗೂ ಒಂದು ರೂಪಾಯಿನ ಪ್ರಕಾರ ಕಟ್ ಮಾಡುವುದಕ್ಕೆ ಕೊಟ್ಟಿದ್ದಾರೆ. ಇದರ ಅರ್ಥವನ್ನು ನಾವು ಏನೆಂದ ಹೇಳಬೇಕು? ಹೀಗೆಲ್ಲಾ ಹಣ ದುರುಪ ಯೋಗವಾಗುತ್ತಿರುವುದರ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಆ ಹಣ ವನ್ನು ವಸೂಲ್ಮಾಡುವುದು, ಮತ್ತು ಈ ಅನ್ಯಾಯ ಗಳನ್ನು ತಡೆಗಟ್ಟತಕ್ಕದ್ದು ಅವರ ಧರ್ಮ ಮತ್ತು ಆದ್ಯ ಕರ್ತವ್ಯವಲ್ಲವೇ ಎಂದು ಕೇಳುತ್ತೇನೆ. ಈ ಎಲ್ಲಾ ವಿಚಾರಗಳ ಬಗ್ಗೆಯೂ ಸರ್ಕಾರದವರು ಕೂಡಲೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕೆಂದು ಒತ್ತಾಯಪಡಿಸುತ್ತೇನೆ. ಮೊನ್ನೆ ತಾನೆ ನಾನು ಈ ಸಂಬಂಧವಾಗಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆನು. ಅದಕ್ಕೆ ಮಾನ್ಯ ಮಂತ್ರಿಗಳು ಸಾಕಷ್ಟು ವಿಚಾರಗಳನ್ನು ತಿಳಿಸಲಿಲ್ಲ. ಈಗ ನಾನು ಸರ್ಕಾರದವರ ಗಮನಕ್ಕೆ ಮತ್ತೊಂದು ಮುಖ್ಯ ವಿಚಾರವನ್ನು ತರಬೇಕಾಗಿದೆ. ಇಪ್ಪತ್ತೈದು ಸಾವಿರ ಅಡಿ ನಾಟಾವನ್ನು ಅರಣ್ಯದ ಮಧ್ಯಭಾಗದಿಂದ ಹೊರ ಗಡೆಗೆ ಸಾಗಿಸಲು 32 ಮೈಲಿ ಫಾಸಲಗೆ ಅಡಿ ಒಂದಕ್ಕೆ ಹತ್ತೂವರಾಣೆ, ಹನ್ನೊಂದೂವರಾಣೆಗೆ ಟೆಂಡರ್ ಬಂದಿರುವಾಗ 22 ಮೈಲಿ ಫಾಸಲೆಯಲ್ಲಿರತಕ್ಕ ನಾಟಾ ಸಾಗಿಸಲು ಅಡಿ ಒಂದಕ್ಕೆ 14 ಆಣೆ, ಒಂದು ರೂಪಾಯಿ ಅಮಾನಿ ಮೂಲಕ ರೇಟ್ ಕೊಡಲು ಕಾರಣವೇನು?

1-30 P.M.

ಅದರಲ್ಲಿಯೂ ಹಿಂದೆ ಎಂದೂ ಕಂಟ್ರಾಕ್ಟ್ ಕೆಲಸ ಮಾಡದೇಯಿರುವವರನ್ನು ಕರೆಯಿಸಿ ಅವರಿಗೆ ಹೆಚ್ಚಿನ ದರದಮೇಲೆ ಕೊಡುವುದಕ್ಕೆ ಕಾರಣವೇನು? ಯಾವ ಯಾವ ಅಧಿಕಾರಿಗಳು ಈ ರೀತಿ ಹೆಚ್ಚಾಗಿ ಕೊಟ್ಟಿ ದ್ದಾರೋ ಅವರಿಂದ ಹಣವನ್ನು ವಸೂಲು ಮಾಡಿದರೆ ಇತರರು ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ; ಹಾಗಿಲ್ಲದಿದ್ದರೆ ಸುಮ್ಮನೆ ಒಂದು token ಆಗಿ ಜುಲ್ಮಾನೆ ಹಾಕಿಬಿಟ್ಟರೆ ಪ್ರಯೋಜನವಿಲ್ಲ. ಆದುದ ರಿಂದ ಈ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದು ಕೊಳ್ಳಬೇಕು. ಕೆಲವು ಉದಾಹರಣೆಗಳನ್ನು ಬೇಕಾ ದರೆ ಕೊಡುತ್ತೇನೆ. ನರಸಿಂಹರಾಜಪುರದ ಪಕ್ಕದಲ್ಲಿ ವಿದ್ಯುಚ್ಛಕ್ತಿ ಲೈನ್ ಹಾಕುವುದಕ್ಕೆ ಕೆಲವು ಮರಗಳನ್ನ ಕಡಿಸುತ್ತಿದ್ದರು, ಇದು ನರಸಿಂಹರಾಜಪುರಕ್ಕೆ ಕೇವಲ ಎಂಟು ಮೈಲಿ ದೂರದಲ್ಲಿದೆ. ಅಲ್ಲಿಂದ ಮರವನ್ನು ಹೇರಿಸುವುದಕ್ಕೆ ಒಂದು ರೂಪಾಯಿನಂತೆ ಕೊಟ್ಟಿ ದ್ದಾರೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಹಾದಿ ಚೆನ್ನಾಗಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಸಿ. ಬಸಪ್ಪ.—ಇದು ಬೇರೆ ಹಾದಿ ಎಂದು ಕಾಣುತ್ತದೆ!

ಇದೇ ರೀತಿ ಎಂಟು ಹತ್ತು ಉದಾಹರಣೆಗಳನ್ನು ಕೊಡಬಲ್ಲೆ. ಬೇಕಾದರೆ ಮಾನ್ಯ ಮಂತ್ರಿಗಳ ಕೈಯಲ್ಲಿ ಕೊಡುತ್ತೇನೆ. ಈ ಬಗ್ಗೆ ಅವರು ಆದಷ್ಟು ಜಾಗ್ರತೆ ತನಿಖೆ ನಡೆಸಿ ಎಲ್ಲಿ ಜಾಸ್ತಿಯಾಗಿ ಅಮಾನಿ ರೇಟು ಕೊಟ್ಟಿದ್ದಾರೆ, ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನೋಡಿ, ಹೆಚ್ಚು ಕೊಟ್ಟಿರುವುದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲು ಮಾಡಿದರೆ, ಈ ಇಲಾಖೆ ಯಲ್ಲಿ ಯಾರೂ ಈ ತರಹ ಅನೀತಿಯುತವಾಗಿ ಕೆಲಸ ಮಾಡುವುದು ತಪ್ಪಿ ನ್ಯಾಯ ಹುತ್ತು ಉತ್ಪತ್ತಿ ಜಾಸ್ತಿ ಯಾಗುವುದರಲ್ಲಿ ಅಭ್ಯಂತರವಿಲ್ಲ.

1954-55ರಲ್ಲಿ ಭದ್ರಾವತಿ ಕಾಗದದ ಕಾರ್ಖಾನೆಗೆ ಬೊಂಬು ಸರಬರಾಯಿಮಾಡುವ ಬಗ್ಗೆ ಟೆಂಡರ್ ಕರೆ ದರು; ಒಬ್ಬ ಹೊಸ ಕಂಟ್ರಾಕ್ಟರು ಕಡಮೆ ಟೆಂಡರ್ ಕೊಟ್ಟಿದ್ದ. ಆದರೂ ಆತನಿಗೆ ಕೊಡದೆ, ಹಿಂದೆ ಮುಂಗಡವಾಗಿ ಕೊಟ್ಟಿದ್ದ ಹಣವನ್ನು ವಸೂಲುಮಾಡ ಬೇಕೆಂದು ಜಾಸ್ತಿ ರೇಟು ಕೊಟ್ಟಿದ್ದ ಹಳೆಯ ಕಂಟ್ರಾ ಕ್ಟರಿಗೇ ಆ ಕೆಲಸವನ್ನು ಕೊಟ್ಟಿದ್ದಾರೆ. ಹೊಸಬನ ಟೆಂಡರ್ ಒಪ್ಪಲಿಲ್ಲ. ಹಣ ಮುಂಗಡವಿದೆ ಎಂದು ಜಾಸ್ತಿ ದರದ ಟೆಂಡರನ್ನು ಒಪ್ಪುವುದು ಯಾವ ನ್ಯಾಯ? ಮುಂಗಡ ಕೊಟ್ಟಿದ್ದ ಹಣವನ್ನು ಬೇರೆ ಕ್ರಮಗಳಿಂದ ವಸೂಲು ಮಾಡಬಹುದಾಗಿತ್ತು. ಹೀಗೆ ಮಾಡಿದರೆ, ಅಡ್ವಾನ್ಸ್ ತೆಗೆದುಕೊಂಡಿ ದ್ದರೆ, ತಾನು ಜಾಸ್ತಿ ರೇಟಿಗೆ ಟೆಂಡರ್ ಹಾಕಿ

(ಶ್ರೀ ಟಿ. ಸಿ. ಬಸಪ್ಪ.)

ದರೂ ತನಗೇ ಸಿಕ್ಕುತ್ತದೆಂದು ಅಭಿಪ್ರಾಯ ಬರುವುದಿಲ್ಲವೆ? ಬೇಕಾದಷ್ಟು ಮುಂಗಡವನ್ನು ಶಿವಮೊಗ್ಗ ಸರ್ಕಲಿನಲ್ಲಿ ಕೊಟ್ಟಿದ್ದಾರೆ. ಈಹೊತ್ತಿನವರೆಗೆ ಎಷ್ಟು ಮುಂಗಡವಿದೆ, ಯಾವ ಯಾವ ಅಧಿಕಾರಿ ಎಷ್ಟೆಷ್ಟು ಮುಂಗಡ ಕೊಟ್ಟಿದ್ದಾರೆ ಎಂಬ ಬಗ್ಗೆ ಒಂದು ಪಟ್ಟಿಯನ್ನೊದಗಿಸಿದರೆ ಒಳ್ಳೆಯದು. ಮುಂಗಡ ಕೊಟ್ಟರೆ, ಇದರಿಂದ ಯಾವ ಅಧಿಕಾರಿ ಮುಂಗಡ ಕೊಡುತ್ತಾರೋ ಆತನನ್ನು ಅಲ್ಲೇ ಇಡುವುದಕ್ಕನುಕೂಲವಾಗುತ್ತದೆ. ಮುಂಗಡ ಕೊಡುವುದರಲ್ಲಿ ಕೆಲವು ದುರುಪಯೋಗ ಕ್ರಮಗಳೂ ನಡೆಯುತ್ತಿವೆ. ಅಲ್ಲಿಯೇ ಖಾಯಂ ಇರಲು ಈ ತರಹ ಮುಂಗಡಗಳನ್ನು ಕೊಟ್ಟು ಹೆಚ್ಚು ಬಾಕಿಯನ್ನು ತೋರಿಸುತ್ತಾರೆ. ಆದುದರಿಂದ ಈ ಮುಂಗಡ ಕೊಡುವ ಪದ್ಧತಿಯನ್ನೇ ನಿಲ್ಲಿಸಬೇಕೆಂದು ಸರ್ಕಾರದಲ್ಲಿ ನನ್ನ ಮನವಿ. ಹಿಂದೆ ಮುಂಗಡ ಕೊಡುವ ಪದ್ಧತಿಗೆ ಆವಶ್ಯಕವಿತ್ತು. ಏಕೆಂದರೆ ಆಗ ಬೊಂಬನ್ನು ಸರಬರಾಜು ಮಾಡುವುದು ಕಷ್ಟವಾಗಿತ್ತು, ಯಾರೂ ಮುಂದೆ ಬರುತ್ತಿರಲಿಲ್ಲ. ಈಗ ಅಂಥ ಕಷ್ಟವೇನೂ ಇಲ್ಲ. ಬೇಕಾದರೆ ತಾವೇ ಮುಂಗಡ ಕೊಟ್ಟು ಸೌದೆ ಬೊಂಬು ಸರಬರಾಯಿ ಮಾಡಲು ಸಿದ್ಧವಾಗಿದ್ದಾರೆ ಅನೇಕರು. ಈ ರೀತಿ ಮಾಡಲು ಮುಂದೆ ಬರುತ್ತಿರುವಾಗ ಈಗ ಏಕೆ ಮುಂಗಡ ಕೊಡಬೇಕು?

ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಶಿವಮೊಗ್ಗ ಸರ್ಕಲ್ ಆಫೀಸು ಏಕಿರಬೇಕು? ರೆವಿನ್ಯೂ ಇಲಾಖೆಯಲ್ಲಿ ರೆವಿನ್ಯೂ ಕಮಿಷನರಿದ್ದಾರೆ, ಒಂದೊಂದು ಜಿಲ್ಲೆಗೂ ಡೆಪ್ಯುಟಿ ಕಮಿಷನರಿದ್ದಾರೆ. ಹಾಗೆಯೇ ಇಲ್ಲಿ ಚೀಫ್ ಕನ್ಸರ್ವೇಟರು ಮತ್ತು ಡಿವಿಜನ್‌ಗಳಿವೆ. ಇವಲ್ಲದೆ ಫೋರೆಸ್ಟ್ ಆಫೀಸಿನ ಹಾಗಿರುವ ಕನ್ಸರ್ವೇಟರ್ ಆಫೀಸೊಂದೇಕೆ ಶಿವಮೊಗ್ಗದಲ್ಲಿರಬೇಕು? ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿದ್ದರೇ ಸಾಕು. ಈ ಕನ್ಸರ್ವೇಟರ್ ಆಫೀಸನ್ನು ತೆಗೆದುಹಾಕುವುದರಿಂದ ಅನುಕೂಲವಾಗುತ್ತದೆ, ಹಾಗೂ ಉಳಿತಾಯವೂ ಆಗುತ್ತದೆ. ಟೆಂಡರ್ ಕನ್ಫರ್ಮ್ ಆಗಬೇಕಾದರೆ, ರೇಟ್ ಕನ್ಫರ್ಮ್ ಆಗಬೇಕಾದರೆ ಈಗ ಕನ್ಸರ್ವೇಟರ್ ಆಫೀಸಿನಲ್ಲಿ ಆಗುತ್ತಿದೆ. ಇದರಲ್ಲಿ ಸ್ವಲ್ಪ ಅನುಮಾನವಿದೆ. ಇದಕ್ಕೆ ಬದಲು ಚೀಫ್ ಕನ್ಸರ್ವೇಟರ್ ಆಫೀಸಿನಲ್ಲಿ ಆದರೆ ಅನುಕೂಲ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಒಬ್ಬ ಅಧಿಕಾರಿಯನ್ನಿಟ್ಟು, ಲೋಪದೋಷಗಳೆಲ್ಲಿವೆ, ಎಷ್ಟಿವೆ, ಯಾರು ಯಾರಿಂದ ಹಣವನ್ನು ವಸೂಲು ಮಾಡಬೇಕು ಎಂಬುದನ್ನೆಲ್ಲಾ ವಿಮರ್ಶಿಸಬೇಕು. ಈ ಕೆಲಸವನ್ನು ಸರ್ಕಾರದವರು ಜಾಗ್ರತೆ ಮಾಡುತ್ತಾರೆಂದು ನಂಬಿದ್ದೇನೆ.

*Sri S. SRINIVASA IYENGAR (T.-Narsipur).—Sir, in Talkad Town, huge sand dunes have been built up for the last so many years. These sand dunes were growing and the sand dunes that have developed already have covered the old town, and therefore a new town has been built in Talkad, T.-Narsipur Taluk. To prevent further damage, the Forest Department planted the plantations on the dunes. The plantations have been raised very nicely. But, now it pains me very much to see that destruction has commenced unchecked. I, therefore, request the Government to issue instructions to the department concerned to see that damage is not done and afforestation is increased.

Sir, at present, the forest area of the State forms 16 per cent of the total area. This falls short of the standard of 25 per cent for India. The schemes sanctioned for afforestation will not enable the Forest area to come up to the prescribed minimum even in ten years. Even this year, out of an expenditure of 44 lakhs, the Government have provided a petty sum like 1·46 lakhs for afforestation of barren areas. I submit that this provision is very inadequate and we will not be in a position to reach the standard even in another 20 years to come. Destruction of the forest is rapid while afforestation is not keeping pace with the destruction.

Sir, already many Hon'ble Members have referred to a good lot of arrears due on the part of people to Government remaining unrecovered. A large portion of it has to be written off. That is the fact. It is very necessary that we should know how much is due to Government from these. Further, it is necessary that Government should not encourage those who are defaulters to Government in getting further extension of lease or renewals. I am informed that certain contractors of Gundlupet area, even though defaulters, have been issued licences for the subsequent year also for the supply of fuel to Bangalore and Mysore Cities. If that is so, I want to know why they did it. There must be some policy. I urge upon the Government to devote greater attention on afforestation and immediate collection of arrears.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, ನಮ್ಮ ಮೈಸೂರು ಡಿವಿಜನ್ನಿನಲ್ಲಿ ಫಾರೆಸ್ಟ್ ಇಲಾಖೆಯವರು ಎಂಟು ಡಿಪೋಗಳನ್ನಿಟ್ಟಿದ್ದಾರೆ. ಇವುಗಳ ಜೊತೆಗೆ ಮದರಾಸಿನವರು ನಂಜನಗೂಡಿನಲ್ಲಿ ಒಂದು, ಮೈಸೂರಿನಲ್ಲಿ ಒಂದು ಡಿಪೋ ಇಟ್ಟಿದ್ದಾರೆ. ಒಟ್ಟು ಹತ್ತಾಯಿತು. ಜೊತೆಗೆ ಕೊಡಗಿನವರು ಹುಣಸೂರಿನಲ್ಲಿ ಒಂದು ಡಿಪೋ ಇಟ್ಟಿದ್ದಾರೆ, ಇದೂ ಸೇರಿದರೆ ಹನ್ನೊಂದಾಯಿತು. ನಮ್ಮ ಸರ್ಕಾರದವರು ಮೈಸೂರು ಡಿವಿಜನ್ನಿನಲ್ಲಿ 2,25,000 ಘನ ಅಡಿಗಳಷ್ಟು ಟಿಂಬರ್ ಮಾರಾಟ ಮಾಡುತ್ತಿದ್ದಾರೆ. ಇದರ ಜೊತೆಗೆ ಮದರಾಸಿನಿಂದ

ಬರುವುದು, ಕೊಡಗಿನಿಂದ ಬರುವುದು ಪ್ರತಿ ವರ್ಷವೂ ಮಾರಾಟವಾಗುತ್ತಿದೆ. ಈ ಮಾರಾಟದಿಂದ ನಮ್ಮ ಟಿಂಬರ್‌ಮೇಲೆ ಮದರಾಸು ಮತ್ತು ಕೊಡಗಿನಿಂದ ಬರುವ ಟಿಂಬರ್ ಪೈಪೋಟಿಯುಂಟಾಗಿ, ನಮ್ಮ ಮರಕ್ಕೆ ಹೆಚ್ಚು ಬೆಲೆ ಸಿಕ್ಕದಂತೆ ಮಾಡುತ್ತಿದ್ದಾರೆ. ಹಿಂದಿನ ಮೂರು ವರ್ಷಗಳ ಅಂಕಿ ಅಂಶಗಳನ್ನು ನೋಡಿದರೆ, ಹಿಂದೆ ಕೊಡಗಿನವರು ಎರಡು ಲಕ್ಷದ ಐವತ್ತು ಸಾವಿರ ಘನ ಅಡಿಗಳನ್ನು ಮಾರುತ್ತಿದ್ದರು, ಮದರಾಸಿನವರೂ ಮಾರುತ್ತಿದ್ದರು. ಅದೇ ಈ ವರ್ಷ ಏಳು ಲಕ್ಷ ಅಡಿಗಳನ್ನು ಮಾರುತ್ತಿದ್ದಾರೆ. ಇದರಿಂದ ನಮ್ಮ ಸರ್ಕಾರ ನಮ್ಮ ಟಿಂಬರ್‌ನಿಂದ ಎಷ್ಟು ಆದಾಯವನ್ನು ನಿರೀಕ್ಷೆ ಮಾಡುತ್ತಿದ್ದರೋ ಅಷ್ಟು ಹಣವನ್ನು ಹೊಂದಲು ಸಾಧ್ಯವಾಗಿಲ್ಲ. ಹೊರಗಿನವರ ಪೈಪೋಟಿಯಿಂದ ನಮ್ಮ ಟಿಂಬರಿನ ಬೆಲೆ ಕಡಮೆಯಾಗುತ್ತಿದೆ. ಏಳು ಏಳೂವರೆ ಲಕ್ಷ ಅಡಿಗಳಷ್ಟು ಮರ ನಮ್ಮ ಮೈಸೂರು ದೇಶಕ್ಕೆ ಬೇಕಾಗಿಲ್ಲ. ನಮ್ಮ ಮಲೆನಾಡಿನಿಂದ ಇಷ್ಟು ಬರುತ್ತದೆ. ಆದಕಾರಣ ಹೊರಕ್ಕೆ ಬೇಕಾದಷ್ಟು ಕಳುಹಿಸುತ್ತಿದ್ದೇವೆ. ನಮ್ಮ ಎಲ್ಲಾ ಟಿಂಬರನ್ನೂ ಹೊರಗಡೆ ಮಾರ್ಕೆಟ್ಟಿಗೆ ಕಳುಹಿಸುತ್ತಿದ್ದೇವೆಯೋ ವಿನಾ ಎಲ್ಲವನ್ನೂ ಇಲ್ಲಿ ನಾವು ಉಪಯೋಗಿಸುತ್ತಿಲ್ಲ. ಈಗ ನನಗೆ ಗೊತ್ತಿರುವ ಹಾಗೆ ಹುಣಸೂರಿನಲ್ಲಿರುವ ಕೊಡಗಿನ ಡಿಪೋವಿನಲ್ಲಿ ಹಿಂದೆ ಎರಡು ಲಕ್ಷ ಅಡಿ ಮಾರುತ್ತಿದ್ದುದು ಈಗ ಏಳು ಲಕ್ಷಕ್ಕೆ ಏರಿದೆ. ಅಲ್ಲದೆ ಆ ಡಿಪೋವನ್ನು ಅಲ್ಲಿಂದ ಮೈಸೂರು ನಗರಕ್ಕೆ ತರುವುದಕ್ಕೆ ಸರ್ಕಾರದವರನ್ನು ಕೇಳುತ್ತಿದ್ದಾರೆಂದು ವರ್ತಮಾನ ಕೇಳುತ್ತಿದ್ದೇನೆ. ಅವರು ಹೇಳುವ ಕಾರಣ, ಹುಣಸೂರಿನಲ್ಲಿರುವುದು ರೈಲ್ವೆ ಷೆಡ್ಡಿಗೆ ದೂರವಾಗುತ್ತದೆ ಎಂಬುದು. ಇನ್ನೊಂದು ಕಾರಣ, ಈಗ ನಮ್ಮ ಸರ್ಕಾರಕ್ಕೆ ಮೂವತ್ತು ಸಾವಿರ ರೂಪಾಯಿ ಸೇಲ್ಸ್‌ಟ್ಯಾಕ್ಸ್ ಬರುತ್ತಿದೆ, ಮೈಸೂರಿಗೆ ವರ್ಗಾಯಿಸಿದರೆ ಇದರ ಜೊತೆಗೆ ಆಕ್ಟ್ರಾಯಿ ಕೂಡ ಬರುತ್ತದೆ, ಇದರಿಂದ ನಮ್ಮ ಸರ್ಕಾರಕ್ಕೆ ಲಾಭವಾಗುತ್ತದೆ, ಇದಕ್ಕೆ ಒಪ್ಪಿಕೊಳ್ಳಬೇಕೆಂದು ಹೇಳುತ್ತಿದ್ದಾರೆಂದು ಕೇಳುತ್ತೇನೆ. ಹುಣಸೂರಿನ ಡಿಪೋ ಈಗ ರೈಲ್ವೆ ಹೆಡ್‌ಲೈನಿಗೆ 12 ಮೈಲಿ ಆಗುತ್ತದೆ. ಕೃಷ್ಣರಾಜ ನಗರದ ರೈಲ್ವೆ ಸ್ಟೇಷನ್ನಿಗೆ ಬರಬೇಕು. ಈಗ ಮೈಸೂರಿನ ಹತ್ತಿರ ವರ್ಗಮಾಡಬೇಕೆಂದಿರುವ ಸ್ಥಳಕ್ಕೂ ರೈಲ್ವೆ ಲೈನಿಗೂ ಇರುವ ದೂರ ನಾಲ್ಕು ಮೈಲಿ ಕಡಮೆ ಆಗುತ್ತದೆ. ಆದುದರಿಂದ ಇದು ಸರಿಯಾದ ಕಾರಣವಲ್ಲ. ಅಲ್ಲದೆ ಹುಣಸೂರಿನಲ್ಲಿ ಈ ಡಿಪೋ ಇರುವುದರಿಂದ ಅಲ್ಲಿ ಎಂಟು "Saw Mill" ಗಳು ಕೆಲಸಮಾಡುತ್ತಿವೆ. ಇದನ್ನು ಅಲ್ಲಿಂದ ವರ್ಗಮಾಡಿದರೆ ಈ ಸಾ ಮಿಲ್ಲುಗಳಿಗೆ ಅನಾನುಕೂಲವಾಗುತ್ತದೆ. ಇವುಗಳಿಗೆ ಕೆಲಸವಿಲ್ಲದೇ ಹೋಗಿ ದೊಡ್ಡ ತೊಂದರೆಯಾಗುತ್ತದೆ. ಒಂದು ವೇಳೆ ಇವುಗಳನ್ನೂ ಮೈಸೂರಿಗೇ ವರ್ಗಾಯಿಸಿದರೆ ಅಲ್ಲಿ ಈಗಾಗಲೇ ಇರುವ 14 ಮಿಲ್ಲುಗಳೊಡನೆ ಪೈಪೋಟಿ ಪ್ರಾರಂಭವಾಗಿ ಕೆಲವು ಮಿಲ್ಲುಗಳನ್ನು ಮುಚ್ಚಬೇಕಾಗುತ್ತದೆ. ಅವರು ಹೇಳುವ ಇನ್ನೊಂದು ವಾದ ಮೂವತ್ತು ಸಾವಿರ ರೂಪಾಯಿ ಸೇಲ್ಸ್‌ಟ್ಯಾಕ್ಸ್ ಬರುತ್ತದೆಂಬುದು. ಹುಣಸೂರಿನಲ್ಲಿರಲಿ ಅಥವಾ ಮೈಸೂರಿಗೆ ತರಲಿ ಈ ಮೊಬಲಗೂ ನಮಗೆ ಯಾವತ್ತು ಬಂದೇ ಬರುತ್ತದೆ, ಹೋಗುವುದಿಲ್ಲ. ಆದುದರಿಂದ ವರ್ಗಮಾಡಬೇಕು ಎಂಬುದಕ್ಕೆ ಅವರು ಹೇಳುವ ವಾದ ಸರಿಯಾಗಿಲ್ಲ. ಆಕ್ಟ್ರಾಯಿ ಮೈಸೂರು ನಗರದಲ್ಲಿ ಮಾರಿದರೆ ಬರುತ್ತದೆಯೋ ಹೊರತು ಹೊರಗೆ ಹೋಗುವುದರ ಮೇಲೆ ಸಿಕ್ಕುವುದಿಲ್ಲ. ಈಗ ಹುಣಸೂರಿನಲ್ಲಿ ಮಾರುವುದಕ್ಕೆ ಹುಣಸೂರು ಮುನಿಸಿಪಾಲಿಟಿಗೆ ಬರುತ್ತಿದೆ. ಮೈಸೂರಿಗೆ ಸಾಗಿಸುವುದರಿಂದ ಮೈಸೂರು ಮುನಿಸಿಪಾಲಿಟಿಗೆ ಬರುತ್ತದೆ, ಅಷ್ಟೆ. ಆದುದರಿಂದ ಆಕ್ಟ್ರಾಯಿ ಹೊರಟುಹೋಗುತ್ತದೆಯೆಂದು ಹೇಳುವುದು ಸರಿಯಲ್ಲ.

ನೀವು ಹಾಗೆ ಅವರಿಗೆ ಅಧಿಕಾರವನ್ನು ಕೊಡದಿದ್ದರೆ, ಅವರಿಗೆ ಮೈಸೂರಿನಲ್ಲಿ ಅವಕಾಶ ಕೊಡದೆ ಇದ್ದರೆ ತಲಚೇರಿಗೆ ಸಾಗಿಸುತ್ತೇವೆಂದು ಹೇಳುತ್ತಾರೆ. ಆದರೆ ಅದು ಸಾಧ್ಯವಿಲ್ಲ. ಯಾಕೆಂದರೆ ಕೊಡಗಿನಿಂದ ಹುಣಸೂರಿಗೆ ಕೇವಲ 30-35 ಮೈಲಿ ಫಾಸಲೆ ಇದೆ. Timber ಹುಣಸೂರಿಗೆ ಸಾಗಿಸಬೇಕಾಗಿದ್ದರೆ 35 ಮೈಲಿ ಮಾತ್ರ ಸಾಗಿಸಬೇಕು. ಆದರೆ ಅದನ್ನೇ ತಲಚೇರಿಗೆ ಸಾಗಿಸಬೇಕಾಗಿದ್ದರೆ ಕನಿಷ್ಟಪಕ್ಷ 100 ಮೈಲಿ ದೂರ ಸಾಗಿಸಬೇಕು. ಅಷ್ಟೇ ಅಲ್ಲದೆ ಅದು ಕಾಡುರಸ್ತೆ. ಕಾಡುರಸ್ತೆಯಲ್ಲಿ ಮಾಲನ್ನು 100 ಮೈಲಿ ಸಾಗಿಸುವುದು remunerative ಅಲ್ಲ. ಯಾವ ಸರ್ಕಾರದವರೂ ಸಹ ತಮ್ಮ ಮಾಲನ್ನು ಹತ್ತಿರದ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರತಕ್ಕದ್ದು ಉಚಿತವೇ ಹೊರತು ದೂರದ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದು ಸಾಧ್ಯವಿಲ್ಲ. ಅವರು ಹೇಳುವುದು ಬರೀ ಬೆದರಿಕೆಯ ಮಾತುಗಳು. ಅವರು ಸಾಗಿಸುವುದಕ್ಕೆ ಯಾಕೆ ಸಾಧ್ಯವಿಲ್ಲವೆಂದರೆ ಮೈಸೂರು ಕಡೆ 30 ಮೈಲಿ ದೂರದಲ್ಲಿ ನಾಗರ ಹೊಳೆ ಹತ್ತಿರ ಅತ್ಯಾಧುನಿಕ ಯಂತ್ರಗಳನ್ನೊಳಗೊಂಡ, ಹೆಚ್ಚು ಬಂಡವಾಳ ಹಾಕಿರುವ Saw Mill ಒಂದನ್ನು ಸ್ಥಾಪನೆ ಮಾಡಿದ್ದಾರೆ. ಅಲ್ಲಿ ಯಾವತ್ತೂ ಎಂದರೆ ಮತ್ತಿ, ಹೊನ್ನೆ, ತೇಗ, ಮತ್ತು rosewood ಇವುಗಳನ್ನೆಲ್ಲ saw ಮಾಡಿ, ಇಲ್ಲಿಗೆ ತೆಗೆದುಕೊಂಡು ಬಂದು ಹುಣಸೂರು ಡಿಪೋಗಳಲ್ಲಿ ಮಾರುತ್ತಾರೆ. ಅವರು ಹೀಗೆ ಮಾರುವುದರಿಂದ ಅವರ jungle wood ಗೆ ಒಂದು ಮಾರ್ಕೆಟ್ ಸಿಕ್ಕಿ ಹೆಚ್ಚಿನ ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅವರು ಈ ಮಾಲನ್ನು ತಲಚೇರಿಗೆ ಸಾಗಿಸಬೇಕಾದರೆ ಅದಕ್ಕೆ ಬೆಲೆ ಸಿಕ್ಕುವುದಿಲ್ಲ. ಮತ್ತು ಈ jungle wood ಖರೀದಿಯಾಗದೆ ಉಳಿದುಹೋಗಿ ಅವರು saw mills ಮುಚ್ಚಬೇಕಾಗುತ್ತದೆ. ಈ ಕಾರಣದಿಂದ ಅವರು ತಲಚೇರಿಗೆ ಸಾಗಿಸುವುದು remunerative ಅಲ್ಲ ಮತ್ತು ಆ ರೀತಿ ಮಾಡುವುದಕ್ಕೂ ಸಹ ಸಾಧ್ಯವಿಲ್ಲ.

ಮತ್ತೆ ಇನ್ನೊಂದು ವಿಚಾರವೇನೆಂದರೆ, ಅವರು ಈ jungle wood ನ್ನು ತಲಚೇರಿಗೆ ಸಾಗಿಸಿಕೊಂಡು ಹೋದರೆ ನಮ್ಮಲ್ಲಿರುವ jungle wood ಗೆ ಬೆಲೆ ಸಿಕ್ಕುತ್ತದೆ. ನಮ್ಮಲ್ಲಿರುವ jungle wood ಇವೊತ್ತು ಮಾರಾಟವಾಗುತ್ತಿಲ್ಲ. ಮಾರು ಕಟ್ಟೆಯಲ್ಲಿರುವ competition ದೆಸೆಯಿಂದ ನಾವು ಕಡಿದುಕೊಂಡು ಬಂದು ಮಾರುವುದಕ್ಕೆ ತೊಂದರೆಯಾಗಿದೆ, ಎಂದು jungle wood ಎಲ್ಲವನ್ನೂ ಅಲ್ಲಿಯೇ ಬಿಟ್ಟು ಮತ್ತಿ, rosewood, ತೇಗ, ಹೊನ್ನೆ ಇತ್ಯಾದಿ ಬೆಲೆ ಬಾಳತಕ್ಕ ಪದಾರ್ಥಗಳನ್ನು ಮಾತ್ರ ತಂದು ಆ competitive market ನಲ್ಲಿ ಮಾರುತ್ತಿದ್ದಾರೆಯೋ ಹೊರತು jungle wood ಗೆ ಮೂರುಕಾಸೂ ಉತ್ಪತ್ತಿಯಾಗುತ್ತಿಲ್ಲ. ಅವರು jungle wood ನ್ನು ಬೇರೆ ಕಡೆಗೆ ಸಾಗಿಸಿದರೆ ನಮ್ಮ jungle wood ಗೆ ಬೆಲೆ ದೊರೆತು ನಮ್ಮ ದೇಶದ ವರಮಾನ ಇದರಿಂದ ಹೆಚ್ಚುತ್ತದೆ ಎಂದು ಹೇಳಿ ನಾನು Coorg Depotವನ್ನು ಹುಣಸೂರಿನಿಂದ ಮೈಸೂರಿಗೆ ಬದಲಾಯಿಸುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಅವರು ಇನ್ನೊಂದು ಹೇಳುತ್ತಾರೆ. ಕೊಡಗಿನವರು private transaction ನಲ್ಲಿ ಒಂದು ಡಿಪೋವನ್ನು

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಖರೀದಿಗೆ ಕೊಂಡುಕೊಂಡು ಅಲ್ಲಿ ಮಾರಿದರೆ ಆಗ ನೀವು ಅಡ್ಡಿ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಾರೆ. ಅದು ಸಾಧ್ಯವೆಂದು ಭಾವಿಸುತ್ತೇನೆ. ಅವರೂ agricultural purposes ಗೆ ಕೊಟ್ಟಿರತಕ್ಕ ಜಮೀನನ್ನು ಬೇರೆ purposes ಗೆ ಉಪಯೋಗಿಸುವಾಗ ನಿಮ್ಮ ಹತ್ತಿರ ಕೇಳಬಹುದು. ನೀವು ಅದಕ್ಕೆ ಅವಕಾಶ ಕೊಡದೆ ಇರಬಹುದು. ಆದುದರಿಂದ ಅವರು ಬೇರೆ ಒಂದು ಭಾಗವನ್ನು ತೆಗೆದುಕೊಂಡು timber ಮಾರುತ್ತೇವೆಂದರೆ ಆಗ ಸರ್ಕಾರದವರು ಏನು ಮಾಡುತ್ತಾರೆ ಎಂಬ ವಾದ ಅವರು ಹೇಳಿದ್ದನ್ನು ಕೇಳಿದ್ದೇನೆ. ಹಾಗೆ ಮಾಡಿದರೆ ಸರ್ಕಾರದವರಿಗೆ ಅದನ್ನು ತಡೆಗಟ್ಟುವುದಕ್ಕೆ ಅವಕಾಶವಿದೆ. Coorg Depot ಅವರು ತಮ್ಮ ದೇಶದ ಉತ್ಪತ್ತಿಯನ್ನು 2,07,000 ದಿಂದ 7 ಲಕ್ಷ ರೂಪಾಯಿಗಳಿಗೆ ಏರಿಸಿದ್ದಾರೆ. ಹೇಗಾದರೂ ನಮ್ಮ ಮಾರ್ಕೆಟ್ಟನ್ನು dull ಮಾಡಿ ತಮ್ಮ ದೇಶದ ಬೊಕ್ಕಸವನ್ನು ತುಂಬಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಅದೇರೀತಿ ನಮ್ಮ ಸರ್ಕಾರಕ್ಕೆ ದೊರೆಯುವ ಹಣ ಕಡಿಮೆಯಾಗತಕ್ಕ ಸಂದರ್ಭವಿರುವಾಗ ಅದನ್ನು ನಾವು ತಡೆಗಟ್ಟಬೇಕಾದದ್ದು ನ್ಯಾಯವಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ಅವರು ಸಂಪಾದನೆಯ ದೃಷ್ಟಿಯಿಂದ ನೋಡುವಾಗ ನಾವೂ ಸಹಾ ಅದೇ ದೃಷ್ಟಿಯಿಂದ ನಮ್ಮ ದೇಶದ ವರಮಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿ Coorg ನವರಿಗೆ ಮೈಸೂರಿನಲ್ಲಿ ಡಿಪೊ ತೆರೆಯಲು ಅವಕಾಶ ಕೊಡಬಾರದು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಎರಡನೆಯದಾಗಿ ನಮ್ಮ forest border area ದಲ್ಲಿ ಹಸಿ ಸೌದೆಯನ್ನು ತರುವುದಕ್ಕೆ ಅವಕಾಶ ಕೊಟ್ಟಿಲ್ಲ. ಅಲ್ಲೂ ಸಹ ಒಣ ಸೌದೆ ತರುವುದಕ್ಕೆ ಲೈಸೆನ್ಸ್ ಕೊಡುತ್ತೀರಿ, ಹಸಿ ಸೌದೆ ತರುವುದಕ್ಕೆ ಅವಕಾಶಕೊಡುತ್ತಿಲ್ಲ. ಈ ಸೌದೆಗೆ ಒಂದು cart-load ಗೆ ಇಷ್ಟು ಎಂದು ನಿಯಾಮಕ ಮಾಡಿದ್ದೀರಿ. ಹಾಗೆಯೇ ಲಾರಿಗಳಿಗೂ ಸಹ ಒಂದು ದರ ವಿಧಾಯಕಮಾಡಿದ್ದೀರಿ. ಆದರೆ ಕೆಲವುಕಡೆ ಮರದ ತುಂಡುಗಳನ್ನು ಕಟ್ಟಿಬಿಟ್ಟು ಎಳೆದುಕೊಂಡು ಬರತಕ್ಕ ಸಂದರ್ಭಗಳೂ ಇವೆ. ಅದಕ್ಕೆ ಊಟೆ ಎಂದು ಕರೆಯುತ್ತಾರೆ. ಇದಕ್ಕೆ ಯಾವ ದರವನ್ನೂ ನಿಗದಿಮಾಡಿಲ್ಲ. ಆದ್ದರಿಂದ ಸರಕಾರದವರು ಯೋಚನೆಮಾಡಿ ಈ ಊಟೆಗೂ ಸಹ ಒಂದು rate fix ಮಾಡತಕ್ಕದ್ದು ಅಗತ್ಯವೆಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಹಸಿಸೌದೆ ತರುವುದಕ್ಕೆ ಅವಕಾಶವಿಲ್ಲ, ಒಣಸೌದೆ ಸಿಕ್ಕುವುದಿಲ್ಲ. ಆಗ ಜನರೇನು ಮಾಡುತ್ತಾರೆಂದರೆ ನಾಲ್ಕೈದು ದಿನಗಳಿಗೆ ಮುಂಚಿತವಾಗಿ ಕಾಡಿಗೆ ಹೋಗಿ ಕಾಡನ್ನು ಕಡಿದು, ಅದನ್ನು ಒಣಗುವಂತೆ ಮಾಡಿ ಅನಂತರ ಅದನ್ನು ತೆಗೆದುಕೊಂಡು ಬರುತ್ತಾರೆ. ಈ ರೀತಿ ಮಾಡುವಾಗ ಸರ್ಕಾರದವರಿಗೆ ಹಸಿ ಸೌದೆಯನ್ನು ತರುವುದನ್ನು ತಡೆಯುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಇದಕ್ಕೆ ನನ್ನ ಸಲಹೆ ಏನೆಂದರೆ, ಒಣ ಸೌದೆಗೆ ಹೇಗೆ ಒಂದು rate fix ಮಾಡಿರುತ್ತೀರೋ ಅದೇ ರೀತಿಯಾಗಿ ಹಸಿಯ ಸೌದೆಗೂ ಒಂದು rate fix ಮಾಡಿ ಜನರಿಗೆ ಅನುಕೂಲ ಮಾಡಿಕೊಡುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡ).—ನಾನು ಈ ಅಸೆಂಬ್ಲಿ ಷುರುವಾದಲಾಗಾಯ್ತು ಇದುವರೆಗೂ distress area ದಲ್ಲಿ ಬೇಕಾಗಿರತಕ್ಕ ಸೌದೆ ಮತ್ತು ಇದ್ದಿಲಿಗೆ disafforestation ಮಾಡುವುದು ಬೇಡವೆಂದು ಕಡ್ಡಾಯವಾಗಿ, vehement ಆಗಿ ಹೇಳಿದರೂ ಸಹ ಅದು ನಿಮ್ಮ ಕಿವಿಗೆ ಬಿದ್ದಹಾಗೆ ಕಾಣುವುದಿಲ್ಲ. ತಾವೇ ಹೇಳುತ್ತೀರಿ scientific basis ನಲ್ಲಿ ಕೂಡ distress area ದಲ್ಲಿ ಮಳೆ ಇಲ್ಲದಕಾರಣ, afforestation ಇಲ್ಲದೆ ಇರುವುದರಿಂದ, green plant vegetation ಇಲ್ಲದೆ ಇರುವುದರಿಂದ, ಮಳೆ ಬರುವುದು ಕಡಿಮೆ ಎಂದು. ಹೀಗಿದ್ದರೂ ಸಹ ಇರುವ ಕಾಡನ್ನು ಯಾತಕ್ಕಾಗಿ ಕಡಿಯುತ್ತಿದ್ದೀರಿ? Scientific basis ಮೇಲೆ ಈ ಕಾರ್ಯವನ್ನು ತೆಗೆದುಕೊಳ್ಳದೆ ಇರುವುದು ಬಹಳ ಶೋಚನೀಯವಾದ ವಿಷಯವೆಂದು ತಿಳಿಯುತ್ತೇನೆ. Distress area ಆದ ಬಾಗೇಪಲ್ಲಿ, ಚಿತ್ರದುರ್ಗ, ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಫಾರೆಸ್ಟ್ ಹೆಸರಿಗೆ ಮಾತ್ರವಿದೆ, ಎಂದು ತಾವೇ ಹೇಳಿದ್ದೀರಿ. ಹೀಗೆ scant vegetation ಇದ್ದರೂ ಅಲ್ಲೆಲ್ಲ coupes ಗಳನ್ನು ಕೊಡುತ್ತಿದ್ದೀರಿ. ಇದಕ್ಕೆ ಬದಲಾಗಿ ನಗರಗಳಲ್ಲಿ ಸೌದೆಗೆ ಅಭಾವವಿರುವ ಕಡೆಗಳಲ್ಲೆಲ್ಲ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಬಳಸುವಂತೆ, ಅದರಲ್ಲೂ ಹೋಟೆಲುಗಳಲ್ಲಿ, ಏತಕ್ಕೆ ಕಡ್ಡಾಯವಾಡಬಾರದು? ವಿದ್ಯುಚ್ಛಕ್ತಿಯನ್ನು ಏತಕ್ಕೆ ಹೆಚ್ಚಿಗೆ ಕೊಡಬಾರದು? ವಿದ್ಯುಚ್ಛಕ್ತಿ ಮತ್ತು ಅರಣ್ಯ ಇಲಾಖೆ ಈ ಎರಡು portfolio ಗಳೂ ತಮ್ಮ ಕೈಯಲ್ಲಿವೆ. ಬೆಂಗಳೂರು ಪ್ರದೇಶಗಳಲ್ಲಿ coal coupes ಯಾಕೆ ಕಡಿಮೆ ಮಾಡಬಾರದು? ಈ coal coupes ಕೊಟ್ಟರೆ ಅವನು ನೂರಾರು ಎಕರೆಗಳಷ್ಟು ಕಾಡನ್ನು ಕಡಿದು ಇದ್ದಿಲು ಮಾಡಿ ಸಿಟಿಗಳಿಗೆ ಸಾಗಿಸುತ್ತಾನೆ. Forest Officer ಯಾವಾಗಲಾದರೂ ಹೋಗಿ ಕೂಪಿನವನು ಸಿಕ್ಕಾಪಟ್ಟೆ ಹೆಚ್ಚಿನ ಪ್ರದೇಶದ ಕಾಡನ್ನು ಕತ್ತರಿಸಿರುವುದನ್ನು ನೋಡಿದರೆ ನಾಮಕಾವಾಸ್ತೆ ಐವತ್ತು ರೂಪಾಯಿ ಅಥವಾ ನೂರು ರೂಪಾಯಿ ಜುಲ್ಮಾನೆ ಹಾಕುತ್ತಾರೆ; ಆದರೆ ಅಷ್ಟರಲ್ಲಿ ಅವನು ಸಾವಿರಾರು ರೂಪಾಯಿಗಳನ್ನು ಸಂಪಾದಿಸಿರುತ್ತಾನೆ. Forest Officers ಎಷ್ಟೋಸಲ deforest ಆಗಿರುವ ಕಡೆ afforest ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದ್ದಾರೆ. ಒಂದು ಕಮಿಟಿಯನ್ನು ಮಾಡಿ ಅವರಿಗೆ deforest ಮಾಡಿರುವ ಕಡೆ ಎಲ್ಲೆಲ್ಲಿ afforest ಮಾಡಿದ್ದಾರೆ ಎಂಬುದನ್ನು ತೋರಿಸಬೇಕು. ಸತ್ಯಕ್ಕೆ ದೂರವಾದ ಮಾತುಗಳನ್ನು ಅಸೆಂಬ್ಲಿಯಲ್ಲಿ ಏತಕ್ಕೆ ಹೇಳಬೇಕು? ಇದು ಮನಸ್ಸಿಗೆ ಬಹಳ ನೋವನ್ನುಂಟುಮಾಡುತ್ತದೆ. ನಿಮಗೆ group majority ಇರುವುದರಿಂದ ನೀವು ಏನು ಹೇಳಿದರೂ ಸಹ ನಿಮ್ಮ ಮಾತನ್ನು ನಾವು ಕೇಳಬೇಕಾಗಿದೆ. ನಾವು ಹೇಳಿದ್ದಕ್ಕೆ ಮಾತ್ರ ನೀವು ಯಾಕೆ ಬೆಲೆ ಕೊಡುವುದಿಲ್ಲ? ನೀವು group majority ಯಲ್ಲಿರುವುದರಿಂದ ಹೀಗೆ ಮಾಡುತ್ತೀರೆಂದು ಹೇಳಬೇಕಾಗಿದೆ.

ಅಧ್ಯಕ್ಷರು.—ಅವರ ಪಾರ್ಟಿಯವರು ಹೇಳಿದ್ದಕ್ಕೆ ಬೆಲೆ ಕೊಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಸರ್ಕಾರದವರು ಮಾಡುತ್ತಿರುವ ಅನ್ಯಾಯವನ್ನು ತೋರಿಸಿದ್ದೇನೆ. ಅವರು ಮಾಡಿದರೆ ಮಾಡಲಿ, ಬಿಟ್ಟರೆ ಬಿಡಲಿ. That goes to his credit or discredit. ಇಷ್ಟು ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ನನ್ನ ಕತ್ತರಿ ನಿರ್ಣಯವೂ ಸಹ ಇದೇ ಸರ್ಕಾರದ afforestation ನೀತಿಯನ್ನು ಕುರಿತದ್ದಾಗಿದೆ. ಈ

ಅರಣ್ಯ ಇಲಾಖೆಯ ಆಡಳಿತ ವೈಖರಿಯ ವಿಷಯದಲ್ಲಿ ಪ್ರಸ್ತಾವನೆ ಮಾಡುತ್ತ afforestation ನೀತಿಯನ್ನು ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಸರ್ಕಾರದವರು ಕೈಗೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಏಕೆಂದರೆ, ಈ ಹೊತ್ತಿನ ದಿವಸ ಮಾನವ ಜೀವನದ ವಿಕಾಸ ಅಥವಾ ಬೆಳವಣಿಗೆ ಸೃಷ್ಟಿಯಲ್ಲಿರುವ ಸಸ್ಯ ಸಂಪತ್ತಿನ ಬೆಳವಣಿಗೆಯನ್ನು ಹೊಂದಿಕೊಂಡಿದೆ ಎಂಬುದು ಅನೇಕ ತಜ್ಞರೂ, ವಿದ್ವಾಂಸರೂ ಹೇಳುವ ವಿಷಯವಾಗಿದೆ. ನಶಿಸುತ್ತ ಇರತಕ್ಕ ಅರಣ್ಯ ಸಂಪತ್ತನ್ನು ಊರ್ಜಿತಗೊಳಿಸುವುದು ಅತ್ಯಾವಶ್ಯಕವಾದಂಥ ಕಾರ್ಯಕ್ರಮಗಳಲ್ಲಿ ಒಂದಾಗಿರಬೇಕು. ಆದರೆ ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಕೈಗಾರಿಕೆಗಳಲ್ಲಿ ಕೆಲವು ಕಡೆಗಳಲ್ಲಿ ವಿಶೇಷವಾಗಿ ಅರಣ್ಯ ಸಂಪತ್ತಿನ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಭದ್ರಾವತಿ ಕಾರ್ಖಾನೆಯೊಂದನ್ನೇ ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಾದರೆ ಲಕ್ಷಾಂತರ ಟನ್ ಇದ್ದಿಲು, ಕಟ್ಟಿಗೆ ವಗೈರೆ ಮಲೆನಾಡಿನ ಅರಣ್ಯಗಳಿಂದ 25-30 ವರ್ಷಗಳಿಂದ ಸರಬರಾಜು ಆಗಿ ಮಲೆನಾಡಿನಲ್ಲಿ ಕಾಡು ದೂರಕ್ಕೆ ಹೋಗಿ ವಿರಳವಾಗುತ್ತಿದೆ. ಮಳೆ ಸರಾಸರಿ 40 ಅಂಗುಲ, 60 ಅಂಗುಲ, 80 ಅಂಗುಲ ಹೀಗೆ ಆಗುತ್ತಿದ್ದ ಕಡೆಗಳಲ್ಲಿ 20 ಅಂಗುಲ-30 ಅಂಗುಲ ಆಗಿದೆ ಎಂದು ಹೇಳುತ್ತೇನೆ. 20 ವರ್ಷಗಳ ಹಿಂದಿನ ಲೆಕ್ಕ ಮತ್ತು ಇಂದಿನ ಲೆಕ್ಕಗಳನ್ನು ಹೋಲಿಕೆಮಾಡಿ ನೋಡಿದರೆ ಕ್ರಮ ಕ್ರಮವಾಗಿ ಕಡಿಮೆಯಾಗುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗೆ ಈ ಒಂದು ಅನುಭವದಿಂದ ಇದನ್ನು ಮುನ್ನೆಚ್ಚರಿಕೆಯನ್ನಾಗಿ ಭಾವಿಸಿಕೊಳ್ಳಬೇಕಾದದ್ದು ಅತ್ಯಗತ್ಯ. ಈ ಅರಣ್ಯಗಳಲ್ಲಿ ಒಂದು ಗಿಡವನ್ನು ಕಡಿದರೆ ಮೂರು ಗಿಡಗಳನ್ನು ನೆಡುವಂತಹ ನೀತಿಯನ್ನು ಅನುಸರಿಸಬೇಕು. ಹೀಗೆ ಮಾಡಬೇಕೆಂದು ಹೇಳುವಾಗ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಸರ್ಕ್ಯುಲರ್ ಮುಖಾಂತರ, ಅಥವಾ ಮೆಮೊ ಕೊಟ್ಟು ಜವಾಬ್ದಾರಿ ವಹಿಸಿದರೆ ಸಾಲದು. ಅರಣ್ಯಗಳಲ್ಲಿ ಮುಖ್ಯವಾಗಿ ಗಿಡಗಳನ್ನು ನೆಟ್ಟು ಕಾಪಾಡಿ, ಅವುಗಳ ಬೆಳವಣಿಗೆಗೆ ಸಹಾಯಕವಾಗತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಮಾಡಬೇಕು ಮತ್ತು ಅವರಲ್ಲಿ ಆಸಕ್ತಿ ಎಷ್ಟರಮಟ್ಟಿಗಿರುತ್ತದೆಯೋ ಅಷ್ಟರಮಟ್ಟಿಗೆ ಆ ಕಾರ್ಯ ಯಶಸ್ವಿಯಾಗಿ ನಡೆಯುತ್ತದೆಂಬುದನ್ನು ಮರೆಯಬಾರದು. ಸರ್ಕಾರದವರು ಕೊಡತಕ್ಕ ಅಂಕಿ ಅಂಶಗಳನ್ನು ಪರೀಕ್ಷೆಮಾಡುವುದಕ್ಕೋಸ್ಕರ ಒಂದು ಸಮಿತಿ ನೇಮಕವಾಗಬೇಕು ಮತ್ತು ಎಷ್ಟು ಗಿಡಗಳನ್ನು ನೆಟ್ಟಿದ್ದಾರೆ ಎಂಬುದನ್ನು ತನಿಖೆ ಮಾಡುವಂತಹ ಅವಕಾಶವಿರಬೇಕು, ಅದು ಬಹಳ ಒಳ್ಳೆಯದೆಂದು ಹೇಳುತ್ತೇನೆ. ಅಲ್ಲದೆ ಪರೀಕ್ಷೆ ಮಾಡುವಾಗ, ಕೆಲಸಗಾರರಿಗೆ ಆ ಕೆಲಸದಲ್ಲಿ ಹೆಚ್ಚಾದ ಆಸಕ್ತಿ ಬರುವಂತ ಒಂದು prize bonus, ಇಂತಿಷ್ಟು ಗಿಡಗಳನ್ನು ನೆಟ್ಟರೆ ಇಷ್ಟು ಎಂದು ಯಾವುದಾದರೂ ಒಂದು ರೀತಿಯಲ್ಲಿ ಪರಿಹಾರ ಅವನಿಗೆ ಸಲ್ಲುವಂತೆ ಒಂದು ಯೋಜನೆ ಮಾಡಬೇಕು. ಈ ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ 25 ವರ್ಷಗಳ ಕೆಳಗೆ ಎಷ್ಟು ಇತು, ಈಗ ಮಲೆನಾಡಿನಲ್ಲಿ ಅದು ಏನಾಗಿದೆ ಎಂಬುದನ್ನು ತೆರೆದ ಕಣ್ಣಿನಿಂದ, ವಿಮರ್ಶಾತ್ಮಕ ಬುದ್ಧಿಯಿಂದ, ಚಿಕಿತ್ಸಕ ಬುದ್ಧಿಯಿಂದ ಸರ್ಕಾರದವರು ನೋಡಿ, ಈ ಅರಣ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಏನೇನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನೆಲ್ಲ ಕೈಗೊಳ್ಳದೆ ಇದ್ದರೆ ಅನರ್ಥವಾದೀತು, ಎಂದು ಮಾತ್ರ ಹೇಳಿ ನಾನು ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಫಾರೆಸ್ಟ್ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ನಾನು 6 ಕತ್ತರಿ ನಿರ್ಣಯಗಳನ್ನು ಕಳುಹಿಸಿದ್ದೇನೆ. ಆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕಿಂತ ಮುಂಚೆ ಈ ಅರಣ್ಯ ಇಲಾಖೆಯ ಆಡಳಿತ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ನಾನು ಮೂರನೆ ಸಾಲಿನಲ್ಲಿ ಒಂದು interpellation ಕಳುಹಿಸಿದ್ದೆ. ನಮ್ಮ ಸಂಸ್ಥಾನದಲ್ಲಿ ಈ ಅರಣ್ಯ ಇಲಾಖೆ technical ಇಲಾಖೆಯಾದರೂ ಕೂಡ ಒಂದು routine department ಆಗಿದೆ ಎಂಬುದು ಒಂದು ವಿಷಯ. ಎರಡನೆಯದು ನಮ್ಮ ಮೈಸೂರು ಸಂಸ್ಥಾನದಲ್ಲಿ forest survey ನಡೆದು ಸುಮಾರು 50 ವರ್ಷಕ್ಕೆ ಮೇಲೆ ಆಯಿತು ಎಂದು ಕೇಳಿದ್ದೇನೆ. ನಮ್ಮ ದೇಶದಲ್ಲಿ ಎಲ್ಲಾ ಕಡೆಯೂ ಯಥೇಚ್ಛವಾಗಿ ಅರಣ್ಯವಿತ್ತು. ನಮ್ಮ ಶ್ರೀಮಾನ್ ಹುಚ್ಚೇಗೌಡರು ಹೇಳಿದ ಹಾಗೆ, ಈ ಇಲಾಖೆ ಬರುತ್ತ ಬರುತ್ತ ಅಧೋಗತಿಗೆ ಇಳಿಯುತ್ತ ಇರುವುದು ತುಂಬ ವಿಷಾದಕರ. ಇದು ಸರ್ಕಾರದ ತಪ್ಪೋ ಅಥವಾ ಸರ್ಕಾರದವರ ಆಡಳಿತ ದಕ್ಷತೆಯನ್ನು ನೋಡಿ ಅಧಿಕಾರಿಗಳು ತೆಗೆದುಕೊಂಡಿರತಕ್ಕ undue advantage ಆಗಿದೆಯೋ ಎಂಬುದನ್ನು ತಾವೇ ಯೋಚನೆಮಾಡಬೇಕೇ ಹೊರತು ಅದನ್ನು ಒತ್ತಿ ಹೇಳುವುದಕ್ಕೆ ಇಷ್ಟವಿಲ್ಲ. ಯಾಕೆಂದರೆ ನಾನು ಇಲಾಖೆಯ ಅಧಿಕಾರಿಗಳಲ್ಲಿ ಕೆಲವರ ಹತ್ತಿರ ಮಾತನಾಡಿದ್ದೇನೆ. ಇದನ್ನು technical department ಆಗಿ ಭಾವಿಸಿ, ಯಾವ ಯಾವ ಗಿಡಗಳನ್ನು ಯಾವರೀತಿ ಅಭಿವೃದ್ಧಿಗೆ ತರಬೇಕು ಎಂದು ಅವುಗಳ conservation ಗೋಸ್ಕರ ಒಂದು ಪಾಂಚವಾರ್ಷಿಕ ಯೋಜನೆಯನ್ನು ಮಾಡಬೇಕು. ಹಿಂದೆ ಇದ್ದ ಸರ್ಕಾರದವರು ಗಿಡಗಳನ್ನು ಅಭಿವೃದ್ಧಿ ಮಾಡಲು ಕೆಲವು ಕೂಪ್‌ಗಳನ್ನು ಮಾಡಿ, ಅಲ್ಲಿ ಒಂದೊಂದು ಜಾತಿಯ ಮರಗಿಡಗಳನ್ನು ಬೆಳೆಸಲು ಒಬ್ಬೊಬ್ಬ ಅಧಿಕಾರಿಗೆ ಜವಾಬ್ದಾರಿ ಕೊಟ್ಟು, ಅವು ಬದುಕಲಿ, ಸಾಯಲಿ ಆ ಕೆಲಸವನ್ನು ಮಾಡಿಸುತ್ತಿದ್ದರು. ಆಗ ಗಿಡಗಳನ್ನು ಚೆನ್ನಾಗಿ ಬೆಳೆಸುತ್ತಿದ್ದರು. ಆದರೆ ಕೆಲವು ಅಧಿಕಾರಿಗಳು ನಿಜವಾಗಿಯೂ ಕೂಡ ಅರಣ್ಯಗಳು ಯಾವ ಯಾವುವು ಸೇರಿವೆ, ಅವುಗಳ ಬೌಂಡರಿ ಏನು ಅನ್ನುವುದನ್ನೆಲ್ಲ ನೋಡಿದ್ದಾರೆಯೋ ಎಂಬ ಅನುಮಾನ ನನಗೆ ಬರುತ್ತಿದೆ. ಈ ವಿಚಾರವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

2 P.M.

ಪದೇ ಪದೇ ಹೇಳುತ್ತಾ ಇದ್ದೇನೆ, ಈ ಫಾರೆಸ್ಟು ಬಹಳ ಮುಖ್ಯವಾದ ವಿಷಯ, ದೇಶದ ಹಿತದೃಷ್ಟಿಯಿಂದ ಇದನ್ನು ಸರ್ವೇ ಮಾಡಬೇಕು, ಒಂದು ಟೆಕ್ನಿಕಲ್ ಅಡ್ವೈಸ್ ತೆಗೆದುಕೊಳ್ಳಬೇಕು ಎಂದು. ನಮ್ಮಲ್ಲಿ ಸರಿಯಾದ ಆಫೀಸರುಗಳಿಲ್ಲದೆ, ಅವರಿಗೆ ಯೋಗ್ಯತೆ ಇಲ್ಲದೇ ಇದ್ದರೆ ಬೇರೆಯವರನ್ನು ಕರೆಸಿ ಟೆಕ್ನಿಕಲ ಅಡ್ವೈಸ್ ತೆಗೆದುಕೊಂಡು ಅಭಿವೃದ್ಧಿ ಪಡಿಸಬೇಕು, ಫಾರೆಸ್ಟ್ ಉತ್ಪನ್ನವನ್ನು ಜಾಸ್ತಿ ಮಾಡಬೇಕೆಂದು ಪದೇ ಪದೇ ಒತ್ತಿ ಹೇಳುತ್ತಾ ಇದ್ದೇನೆ ಇದುವರೆಗೂ ಗಮನ ಕೊಟ್ಟಿಲ್ಲದೇ ಇರುವುದು ಕಂಡುಬರುತ್ತಾ ಇದೆ

ಎರಡನೆಯದಾಗಿ ಶ್ರೀಮಾನ್ ಹುಚ್ಚೇಗೌಡರು ಬಹಳ ವಿಷಾದದಿಂದ ವ್ಯಕ್ತಪಡಿಸಿದರು. Advance ಕೊಡತಕ್ಕ ವ್ಯವಸ್ಥೆಯನ್ನು ನಾನೂ ಕೂಡ ಸರಿ[illegible]ನಲ್ಲಿ ಇದ್ದು ನೋಡಿದ್ದೇನೆ. ಫಾರೆಸ ಆಫೀಸ[illegible] ಎಕ್ಸಿಕ್ಯೂಟಿವ್ ಆಫೀಸರು..ಳು ಯಾವರೀತಿ ಮಾಡುತ್ತಾ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಇದ್ದಾರೆ ಎಂಬುದನ್ನು ಕಾದು ನೋಡುತ್ತಾ ಇದ್ದೇನೆ. ಕೆಲವರು ಆಫೀಸರುಗಳನ್ನು ಸರಿಮಾಡಿಕೊಂಡು ಅದನ್ನೇ ಒಂದು ಬಿಸಿನೆಸ್ ಮಾಡಿಕೊಂಡು ನಡೆಸುತ್ತಾ ಇದ್ದಾರೆ. ಈಗ ರೆವಿನ್ಯೂ ಇಲಾಖೆಯಲ್ಲಿ ತಕಾವಿ ಲೋನು, ಲ್ಯಾಂಡ್ ಇಂಪ್ರೂವ್‌ಮೆಂಟು ಲೋನು ವಗ್ಯೆರೆ ಲೋನುಗಳನ್ನು ಕೊಟ್ಟರೆ ಅವರು ಪೂರ್ತಿಯಾಗಿ ಹಣ ವಾಪಸು ಕೊಡಬೇಕು, ಕೊಡದೇ ಇದ್ದರೆ ಯಾರು ಮಂಜೂರು ಮಾಡುತ್ತಾರೋ ಅವರ personal liability ಇರುತ್ತದೆ ಎಂದು ಮಾಡಿದ್ದೀರಿ. ಒಂದು ವೇಳೆ ಅವರ ಸರ್ವೀಸ್‌ನಲ್ಲಿ ಆ ಸಾಲ ಬರದಿದ್ದರೆ ಅವರ ಪೆನ್ಷನ್‌ನಲ್ಲೂ ಕೂಡ ಕೊಟ್ಟು ಆ ಸಾಲ ತೀರಿಸಬೇಕೆಂದು ನಿಗದಿಮಾಡಿದ್ದೀರಿ. ಅವರು ಲಕ್ಷ ಗಟ್ಟಲೆ ಎರಡು—ಲಕ್ಷ, ಮೂರು ಲಕ್ಷ, ನಾಲ್ಕು ಲಕ್ಷ—ಅಡ್ವಾನ್ಸ್ ಕೊಟ್ಟು, ಅದು ಬರದೇ, ಅವರು ಡಿಫಾಲ್ಟರ್ಸ್ ಆದರೆ ಅದನ್ನು ಅಲ್ಲಿಗೇ ಬಿಟ್ಟು ಬಿಟ್ಟು ವಸೂಲುಮಾಡದೆ, ಬೇರೆಯವರಿಗೆ ಹೊಸಬರಿಗೆ ಕನ್‌ಸೆಷನ್ ಕೊಟ್ಟು, ಅಡ್ವಾನ್ಸ್ ಕೊಡುತ್ತಾ ಇದ್ದಾರೆ. ಈ ರೀತಿ ಲೈಯಬಲಿಟಿ ಜಾಸ್ತಿ ಆಗುತ್ತಾ ಇದೆಯೇ ಹೊರತು ಸರ್ಕಾರಕ್ಕೆ ಉತ್ಪನ್ನ ಆಗುತ್ತಾ ಇಲ್ಲ. ಇದನ್ನು ಖಂಡಿತವಾಗಿಯೂ ಕೂಡ ನಮ್ಮ ಮಿನಿಸ್ಟರ್ ರವರು ಪರಿಶೀಲನೆಮಾಡಬೇಕು ಎಂದು ಹೇಳಿ ಇಲ್ಲಿ ನಾನು ತಿಳಿಸುತ್ತೇನೆ. ಪರ್ಸೆಂಟೇಜ್ ಆಫ್ ಫಾರೆಸ್ಟ್ ಬಹಳ ಕಮ್ಮಿ ಜಮೀನು ಕೊಡುವುದಕ್ಕಾಗುವುದಿಲ್ಲ ಎಂಬ ತತ್ವ ಇಟ್ಟುಕೊಂಡಿದ್ದಾರೆ. ನಿಜ. ಅದರೆ ಅಡ್ಮಿನಿಸ್ಟ್ರೇಷನ್ ಯಾವ ರೀತಿ ನಡೆಯುತ್ತಾ ಇದೆ, ದಕ್ಷತೆಯಿಂದ ನಿಜವಾಗಿಯೂ ನಡೆಯುತ್ತಾ ಇದೆಯೇ, ಉತ್ಪನ್ನ ಇದೆಯೇ, ಇದು ದೇಶಕ್ಕೆ ಎರಡನೇ ಉತ್ಪನ್ನ ಆ ಮಟ್ಟದಲ್ಲಿ ಬರುತ್ತಾ ಇದೆಯೇ ಎಂಬ ವಿಚಾರದಲ್ಲಿ ಮಿನಿಸ್ಟರ್‌ರವರು ಗಮನಕೊಡುತ್ತಾ ಇದ್ದಾರೆಯೇ ಎನ್ನುವುದು ಬಹಳ ಅನುಮಾನವಾಗಿದೆ. ಅವರು ಫಾರೆಸ್ಟ್‌ನಲ್ಲಿ ನಿಪುಣರು, ಅವರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ಫಾರೆಸ್ಟ್ ಯಾವ ರೀತಿ ಅಭಿವೃದ್ಧಿಪಡಿಸಬೇಕು, ಅಡ್ಮಿನಿಸ್ಟ್ರೇಷನ್ ಯಾವರೀತಿ ನಡೆಸಬೇಕು ಎಂಬುದು ಅವರಿಗೆ ಗೊತ್ತಿರುವುದರಿಂದ ಇದನ್ನು ಇಲ್ಲಿಗೇ ಬಿಡುತ್ತೇನೆ.

ಮೂರನೆಯದಾಗಿ ಫಾರೆಸ್ಟ್ ಇಲಾಖೆಯಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಪ್ರಾತಿನಿಧ್ಯ ಇಲ್ಲ ಎಂದು ಪದೇ ಪದೇ ಸರ್ಕಾರದವರ ಮುಂದೆ ಹೇಳುತ್ತಾ ಇದ್ದೇವೆ. ಇಲ್ಲಿಯವರೆಗೂ ಕೂಡ.

Mr. SPEAKER.—That refers only to Public Service Commission.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ವಿಚಾರದಲ್ಲಿ ಅಲ್ಲ. ನಾನು ಅರಿಕೆಮಾಡುತ್ತೇನೆ.
ಪಬ್ಲಿಕ್ ಸರ್ವೀಸ್ ಕಮಿಷನ್ ವಿಚಾರ ಹೇಳುವುದಿಲ್ಲ. ಇಲಾಖೆಯಲ್ಲಿ ಯಾವರೀತಿ ನಡೆಯುತ್ತಾ ಇದೆ ಎಂಬುದನ್ನು ಹೇಳುತ್ತೇನೆ. ಇದು ಟೆಕ್ನಿಕಲ್ ಡಿಪಾರ್ಟ್‌ಮೆಂಟು ಎಂದು, ಮೊದಲೇ ಹೇಳಿದೆ.

Mr. SPEAKER.—The Minister as such will not recruit people. That question will go before the Public Service Commission; they call for applications and even the concerned Minister is also not consulted.

ಶ್ರೀ ಎಂ. ಚಿಕ್ಕಲಿಂಗಯ್ಯ.—Appointing authority, Unit Officer. ಆ ವಿಚಾರದಲ್ಲಿ ಚರ್ಚೆ ಆಗಿರುವುದು ತಮ್ಮ ಗಮನಕ್ಕೆ ಬಂದಿದೆ. ಒಂದು ಉದಾಹರಣೆ ಹೇಳುತ್ತೇನೆ. ಹರಿಜನರ ವಿಚಾರದಲ್ಲಿ ಫಾರೆಸ್ಟ್ ರೇಂಜರ್ ಆಗಿ ಒಬ್ಬರೇ ಒಬ್ಬರು ಇದ್ದಾರೆ. ಇನ್ನೊಬ್ಬ ಆಫೀಸರನ್ನು ತೆಗೆದುಕೊಳ್ಳುವಾಗ, ಮಾನಪ್ಪ ಎಂಬವರನ್ನು ತೆಗೆದುಕೊಂಡಿದ್ದಾರೆ. ಆತನಿಗೆ ಕ್ವಾಲಿಫಿಕೇಷನ್ ಇಲ್ಲ. ಬರೆಯುವುದಕ್ಕೂ ಕೂಡ ಬರುವುದಿಲ್ಲ. ಹಿಂದೆ ಒಂದು ಸಾರಿ ಆತನಿಗೆ ಕೆಲಸ ಕೊಡಕೂಡದು ಎಂದು ನಿಲ್ಲಿಸಿದ್ದರೂ ಕೂಡ ಈ ಮಾನ್ಯ ಮಂತ್ರಿಗಳು ಬಂದಮೇಲೆ—ಅವರಿಗೆ ಸರಿಯಾಗಿ ಗೊತ್ತಿಲ್ಲ,—ಒಂದು ದಿವಸದಲ್ಲಿ ಆರ್ಡರ್ ಆಗಿ ಅದೇ ದಿವಸ ಚಾರ್ಜ್ ತೆಗೆದುಕೊಳ್ಳಬೇಕಾದರೆ ಯಾವರೀತಿ ಆಗಿರಬೇಕು ಎಂಬುದನ್ನು ತಾವೇ ಯೋಚಿಸಬಹುದು. ಕ್ವಾಲಿಫೈಡ್ ಅಪ್ಲಿಕೆಂಟ್ಸ್ ಇದ್ದೂಕೂಡ ಹೀಗೆ ಆಗಿದೆ. ಟೆಕ್ನಿಕಲ್ ಪೀಪಲ್, ಎಸ್.ಎಸ್.ಎಲ್.ಸಿ., ಇಂಟರ್ ಪಾಸ್ ಆದವರು ಇದ್ದಾರೆ. ಟ್ರೈನಿಂಗ್ ಆಗಿರುವುದಿಲ್ಲ. ಸೀನಿಯಾರಿಟಿ ಇರುತ್ತದೆ. ಅಂಥವರನ್ನು ಹೊರಗಡೆ ಕಳುಹಿಸಿ, ಸ್ಕಾಲರ್‌ಷಿಪ್ ವಗ್ಯೆರೆ ಕೊಡುವುದರ ಮೂಲಕ ಟ್ರೈನಿಂಗ್ ಕೊಡಿಸಿ ಆ ಮೂಲಕ ಅವರನ್ನು ಗೆಜೆಟೆಡ್ ರ್‍ಯಾಂಕ್‌ನಲ್ಲಿ ಫಿಕ್ಸ್ ಅಪ್ ಮಾಡಿ ಎಂದು ಕೇಳುತ್ತಾ ಇದ್ದೇನೆ. ಡೆ ಹ ರಾ ಡೂ ನ್ ಮುಂತಾದ ಕಡೆಗಳಿಗೆ ಕಳುಹಿಸಿ ತರಬೇತು ಮಾಡಬಹುದು. ಇದನ್ನು ಪದೇ ಪದೇ ಒತ್ತಾಯಪಡಿಸುತಾ ಇದ್ದೇವೆ. ನಾವು ಹೀಗೆ ಹೇಳುತ್ತಾ ಇರುವುದಕ್ಕೆ ಕಾರಣ ಎಸ್.ಎಸ್.ಎಲ್.ಸಿ., ಇಂಟರ್‌ಮೀಡಿಯಟ್, ಬಿ.ಎ.ಪಾಸ್‌ಮಾಡಿರುವವರು ಇಲಾಖೆಯಲ್ಲಿದ್ದರೆಅವರಿಗೆ ಮುಂದೆ ಪ್ರಮೋಷನ್ ಕೊಡುವುದಕ್ಕೆ ಶಂಕೆ ಇದ್ದ ಪಕ್ಷದಲ್ಲಿ ಅವರನ್ನು ಬೇರೆ ಕಡೆಗಳಿಗೆ ಹೈಯರ್ ಸ್ಟಡೀಸ್‌ಗೆ ಕಳುಹಿಸಿ ಆ ಮೂಲಕ ಉತ್ತೇಜನ ಕೊಡಬೇಕು. ಹಾಗೆ ಮಾಡಲು ತಾವು ಗಮನಕೊಡದಿದ್ದರೆ ನಾವು ಏನು ಮಾಡಬೇಕು ಎಂಬುದನ್ನು ತಾವೇ ಯೋಚನೆಮಾಡಿ.

ಆಮೇಲೆ ಜಮೀನು ವಿಚಾರ. ಮಾನ್ಯ ಮಂತ್ರಿಗಳು ಜಮೀನುಕೊಡುವುದಕ್ಕಾಗುವುದಿಲ್ಲ, ಏನು ಬೇಕಾದರೂ ಮಾಡಿ ಎಂದು ಹೇಳುತ್ತಾರೆ. ನಾನು ನೋಡಿದ್ದೇನೆ; ಬರೀ ಕುರುಚಲು ಗಿಡ. ಗಂಧ, ತೇಗ, ಹೊನ್ನೆ ಮುಂತಾದುವುಗಳಿದ್ದ ಪಕ್ಷದಲ್ಲಿ ಅವುಗಳನ್ನು ಕೊಡುವಹಾಗಿಲ್ಲ. ಹರಿಜನರಿಗೆ ಈಗ ಗೋಮಾಳ ಇಲ್ಲ, ಆಕಾರ ಕಂಡ ಭೂಮಿ ಇಲ್ಲ, ಫಾರೆಸ್ಟ್ ಡೇಟ್‌ರಿಸರ್ವ್ಸ್ ಮತ್ತು ಗೋಮಾಳ ಇವು ಒಂದೊಂದಕ್ಕೂ reservation ಆರ್ಡರ್ ಇದೆ. ಫಾರೆಸ್ಟ್‌ನಲ್ಲಿ ಇರತಕ್ಕ ಜಮೀನಿನಲ್ಲಿ ಎಲ್ಲಿ ಮರ ಇರುತ್ತದೆ ಅದನ್ನು ಪ್ರಿಸರ್ವ್‌ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಅಂಥದನ್ನು ಬಿಟ್ಟು ಬೇರೆ ಕಡೆ ಕಲ್ಟಿವೇಷನ್‌ಮಾಡಿ ಅಭಿವೃದ್ಧಿಪಡಿಸಿ, ಬೇಡ ಎಂದು ಹೇಳುವುದಿಲ್ಲ. ಬೇರೆಯವರಿಗೆ 20, 30, 50 ಎಕರೆ ಜಮೀನು ಕೊಡುವುದಕ್ಕೆ ಆಗುತ್ತದೆ. ಉದಾಹರಣೆಗೆ ಬಸವನಹಳ್ಳಿ ಫಾರೆಸ್ಟು ಇದೆ. ಅಲ್ಲಿ 50 ಎಕರೆಯಿಂದ 100 ಎಕರೆವರೆಗೂ ಕೊಟ್ಟಿದ್ದಾರೆ. ಕಷ್ಟಪಟ್ಟು ಕೆಲಸ ಮಾಡುವವರು ಯಾರು ಆದಿಕರ್ಣಾಟಕರು ಇದ್ದಾರೋ ಅವರಿಗೆ ಒಂದು ಎಕರೆ, ಎರಡು ಎಕರೆ ಜಮೀನು ಕೊಡಿ ಎಂದರೆ ಫಾರೆಸ್ಟ್ ಇಲಾಖೆಯವರು ಜಮೀನು ಕೊಟ್ಟಿಲ್ಲ. ಹೀಗೆ ಪ್ರತಿಯೊಂದರಲ್ಲೂ ಸಹ ಅವರಿಗೆ ಆಗುತ್ತಿದೆ. ಹೆಂಚುಗಳು, ಯಾವುದು ಕೇಳಿದರೂ ಕೊಡುವುದಿಲ್ಲ. ಹೀಗಿರುವಾಗ ಇತರರಿಗೆ 100 ಎಕರೆ ಹೇಗೆ ಬಂತು! ಸ್ವಲ್ಪ ಯೋಚನೆಮಾಡಿ. ನಾವು law abiding people. ಒಂದು ಎಕರೆ ಜಮೀನು ಮಾಡಬೇಕಾದರೂ ಬಹಳ ಕಷ್ಟ. ಸರ್ಕಾರದ ಆರ್ಡರ್‌ಆಗಿ ಜಮೀನ ಸಿಕ್ಕಬೇಕಾದರೆ ಪ್ರಾಣ ಹೋಗುತ್ತದೆ. ಬೇಕಾದರೆ ತಾವೇ ವೆರಿಫೈ

ಮಾಡಿ. ಬಸವನಹಳ್ಳಿ ಫಾರೆಸ್ಟ್‌ನಲ್ಲಿ ಆ ರೀತಿ ಆಗಿದೆಯೋ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಿ. ಒಂದು ಸಮಿತಿಯನ್ನಾದರೂ ಮಾಡಿ, ಯಾವ ಯಾವ ಜಮೀನನ್ನು ರಿಸರ್ವ್‌ಮಾಡಬೇಕು, ಯಾವ ಯಾವ ಜಮೀನು ವ್ಯವಸಾಯಕ್ಕೆ ನಾಲಾಯಕ್ಕಾಗಿದೆ, ಯಾವ ಯಾವ ಜಮೀನು ಲಾಯಕ್ಕಾಗಿದೆ ಎಂಬುದನ್ನು ಪರಿಶೀಲನೆಮಾಡಿ ವಿಲೇವಾರಿಮಾಡುವುದು ಸೂಕ್ತ ಎಂದು ತಿಳಿದುಕೊಂಡಿದ್ದೇನೆ.

ಸ್ವಾಮಿ, ಸೀನಿಯಾರೇಜ್ ಎಂದು ಹೇಳಿ ಫಾರೆಸ್ಟು ಇಲಾಖೆಯಲ್ಲಿ ಇದೆ. ಮಲೆನಾಡಿನಲ್ಲಿ ಷೆಡ್ಯೂಲ್‌ಕ್ಯಾಸ್ಟ್‌ನವರಿಗೆ ಮಾಫೀ ಲೈಸೆನ್ಸ್ ಕೊಡುತ್ತಾ ಇದ್ದೀರಿ. 30 ರೂಪಾಯಿ ಮೊದಲು ಕೊಡುತ್ತಾ ಇದ್ದದ್ದು 50 ರೂಪಾಯಿ ಮಾಡಿದರು. ಈಗ 100 ರೂಪಾಯಿಗೆ ಹೆಚ್ಚಿಸಬೇಕೆಂದು ಸರ್ಕಾರದವರು ಕೇಳುತ್ತಾ ಇದ್ದಾರೆ. 100 ರೂಪಾಯಿ ಮಾಡಬೇಕಾಗಿದ್ದರೆ ಜನಗಳಿಗೆ ಸುಲಭವಾಗುವ ರೀತಿಯಲ್ಲಿ ಮಾಡಬೇಕು. ಮಲೆನಾಡಿನಲ್ಲಿ ಹರಿಜನರಿಗೆ ಆ ರೀತಿ ಮಾಡಿ ಸಹಾಯ ಮಾಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರ, ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಟಿಂಬರ್‌ಡಿಪೋ ಪ್ರಾರಂಭ ಮಾಡಬೇಕೆಂದು ಪದೇ ಪದೇ ಹೇಳುತ್ತಾ ಇದ್ದೇವೆ. ಈಗ ಮೈಸೂರು ಜಿಲ್ಲೆಯಲ್ಲಿ, ನಂಜನಗೂಡಿನಲ್ಲಿ ಮತ್ತು ಇನ್ನೂ ಕೆಲವು ಕಡೆಗಳಲ್ಲಿ ಫಾರೆಸ್ಟ್ ಡಿಪೋ ತೆಗೆದಿದ್ದೀರಿ. ಅಲ್ಲಿ ಈ ಜಂಗಲ್‌ವುಡ್ ಎಷ್ಟೆಷ್ಟು ಬೇಕಾಗುತ್ತದೆ ಎಂಬುದನ್ನು ನೋಡಿಕೊಂಡು ಸ್ಟಾಕ್ ಮಾಡಿ, ಜನಗಳಿಗೆ ಕೊಡುತ್ತೀರಿ. ಅದೇ ರೀತಿ ಎಲ್ಲೆಲ್ಲಿ ಟಿಂಬರ್ ಸುಲಭವಾಗಿ ಸಿಕ್ಕುವುದಿಲ್ಲವೋ ಅಲ್ಲೆಲ್ಲಾ ಒಂದೊಂದು ಡಿಪೋಗಳನ್ನು ತೆಗೆದು ಅಲ್ಲಿ ಯಾವಾಗಲೂ ಟಿಂಬರ್ ಸ್ಟಾಕ್‌ಮಾಡಬೇಕೆಂದು ಹೇಳುತ್ತೇನೆ. ಇಲಾಖೆಯವರಿಗೂ ಬಹಳ ಕಷ್ಟವಾಗುವುದಿಲ್ಲ ಎಂದು ಹೇಳುತ್ತೇನೆ. ಇಷ್ಟು ಹೇಳಿ ಸಂಪೂರ್ಣವಾಗಿ ಈ ಡಿಮ್ಯಾಂಡ್‌ನ್ನು ವಿರೋಧಿಸುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಅರಣ್ಯ ದೇಶದ ದೊಡ್ಡ ಸಂಪತ್ತು. ಈ ಸಂಪತ್ತನ್ನು ಕಾಪಾಡುವುದಕ್ಕೆ ಏರ್ಪಡಿಸಿರತಕ್ಕ ನೌಕರವರ್ಗ ಅಷ್ಟು ಸುಶಿಕ್ಷಿತವಾದ ರೀತಿಯಲ್ಲಿ ಇದನ್ನು ನೋಡುತ್ತ ಇಲ್ಲ ಎಂಬ ಅಂಶವನ್ನು ಈ ಸಭೆಯ ಮೂಲಕ ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳಬೇಕಾಗಿದೆ. ಕಾರಣ ಆ ಗಾರ್ಡುಗಳು ಆಯಾ ಪಾರೆಸ್ಟ್‌ಗಳ ಪಕ್ಕದಲ್ಲೇ ವಾಸಮಾಡುತ್ತ ಇರುತ್ತಾರೆ, ಮತ್ತು ಆಯಾ ಊರಿನವರೇ ಫಾರೆಸ್ಟ್ ಗಾರ್ಡ್‌ಗಳಾಗಿರುತ್ತಾರೆ. ಆ ಗಾರ್ಡುಗಳು ಆಯಾ ಪ್ರಾಂತದ ದನಗಳು, ಕುರಿಗಳು, ಮೇಕೆಗಳನ್ನು ಮೇಯುವುದಕ್ಕೆ ಪ್ರವೇಶಮಾಡಿಸಿ ಅದರಿಂದ ಲಾಭ ಪಡೆಯುತ್ತಾರೆ. ಸರ್ಕಾರದ ಒಂದು ಆಜ್ಞೆಗೆ ಒಳಪಟ್ಟಿರತಕ್ಕ ವಿಧಾನದಲ್ಲಿ ವ್ಯವಸ್ಥೆಮಾಡಿ ಈ ಜಾನುವಾರುಗಳನ್ನು ಮೇಯಿಸುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಬಹಳ ನಷ್ಟವಾಗುತ್ತಿದೆ. ಇವೊತ್ತಿನ ದಿವಸ ಮೈಸೂರು ಸರ್ಕಾರ ಈ ಜಂಗಲುಗಳನ್ನು ಕಾಪಾಡತಕ್ಕ ಉದ್ಯಮದಲ್ಲಿ ಪ್ರವೇಶ ಮಾಡದೇ ಹೋದ ಪಕ್ಷದಲ್ಲಿ ನಾವು ಬಹಳ ಕಷ್ಟಕ್ಕೆ ಈಡಾಗುತ್ತೇವೆ. ಅರಣ್ಯ ಸಂಪತ್ತನ್ನು ಕಳೆದುಕೊಂಡು ಬಹಳ ನಷ್ಟ ಸಂಭವಿಸತಕ್ಕ ಪರಿಸ್ಥಿತಿ ಯುಂಟಾಗುತ್ತದೆ. ಅಳಲೆಕಾಯಿ, ಹುಣಸೇಕಾಯಿ, ಸೀಗೆಕಾಯಿ ವಗ್ಯೆರೆ ಅನೇಕ ಜಂಗಲು ಸಾಮಾನುಗಳು ಇವೊತ್ತಿನ ದಿವಸ ದೇಶದ ಸಂಪತ್ತಾಗಿವೆ. ಇವುಗಳಿಂದ ಬರುತ್ತಾ ಇದ್ದ ಲಕ್ಷಾಂತರ ರೂಪಾಯಿಗಳು ಸಾಲೇ ಸಾಲು ಕಮ್ಮಿಬೀಳುತ್ತಾ ಇವೆ ಎಂಬುದನ್ನು ಈ ಸಂದರ್ಭದಲ್ಲಿ ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಸರ್ಕಾರದವರಿಗೆ ಇದರ ಲೆಕ್ಕ ಗೊತ್ತಿದೆ. ವರ್ಷೇ ವರ್ಷೇ ಲೆಕ್ಕಾಚಾರ ಮಾಡುತ್ತಾ ಬಂದರೆ ಈ ಬಾಬಿನಲ್ಲಿ ಹರಾಜಿನ ಮೊಬಲಗು ಎಷ್ಟೆಷ್ಟು ಬರುತ್ತಾ ಇತ್ತೋ ಅಷ್ಟಷ್ಟೂ ಕಮ್ಮಿ ಬರುತ್ತಾ ಇದೆ ಎಂಬುದನ್ನು ಸರ್ಕಾರದವರು ಮನಗಾಣಬೇಕು. ಅರಣ್ಯಗಳಲ್ಲಿ ಮರಗಳನ್ನು ಹಾಕಿ ತನ್ಮೂಲಕ ಮರಗಳನ್ನು ಬೆಳೆಸಲು ಲಕ್ಷಾಂತರ ರೂಪಾಯಿಗಳನ್ನು ಇಲಾಖೆಯ ಮೂಲಕ ಸರ್ಕಾರದವರು ಖರ್ಚುಮಾಡುತ್ತಾ ಇದ್ದೀರಿ. ಆ ಖರ್ಚು ಮಾಡಿದ ಮೊಬಲಗಿಗೆ ಲಾಭ ಇದೆಯೋ, ಮರಗಳು ಹುಟ್ಟಿವೆಯೋ ಅಥವಾ ಇಲ್ಲವೇ, ಎಂಬ ಲೆಕ್ಕಗಳು ವ್ಯವಸ್ಥಿತವಾದ ರೂಪದಲ್ಲಿ ವ್ಯವಸ್ಥಿತಗೊಂಡಿಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಸರ್ಕಾರದವರು ಈ ಜಂಗಲು ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ವ್ಯವಸ್ಥೆಮಾಡಬೇಕು. ಕೆಲವು ಮಾನ್ಯ ಮಿತ್ರರು ಖಾಲಿ ಬಿದ್ದಿರತಕ್ಕ ಜಂಗಲುಗಳನ್ನು ಕೊಟ್ಟು ಬಿಡಿ ಎಂದು ಹೇಳಿದರು. ಫಾರೆಸ್ಟ್ ಜಂಗಲು ಕೊಟ್ಟು ಬಿಡುವುದೂ ಒಂದೇ ಅಠಾರಾ ಕಚೇರಿ ಮುಂದೆ ಇರತಕ್ಕ, ಪಟ್ಟಣಗಳಲ್ಲಿರತಕ್ಕ ಖಾಲಿ ನಿವೇಶನಗಳನ್ನು ಕೊಟ್ಟುಬಿಡುವುದೂ ಒಂದೇ. ಏಕೆಂದರೆ ಅರಣ್ಯ ಸಂಪತ್ತು, ಬಾಕಿ ಎಕ್ಸೈಜ್ ಮತ್ತು ರೆವಿನ್ಯೂ ಮೊಬಲಗುಗಳಂತೆಯೇ ಬಹಳ ಮುಖ್ಯವಾದ ಮೊಬಲಗು ಆಗಿದೆ ಎಂದು ತಿಳಿದವನಾಗಿದ್ದೇನೆ. ಆದ್ದರಿಂದ ಸರ್ಕಾರದವರು ಈ ಫಾರೆಸ್ಟ್ ಜಮೀನುಗಳನ್ನು ವೃದ್ಧಿಮಾಡಬೇಕೇ ಹೊರತು ಯಾರಿಗೂ ಕೂಡ ವಿಲೇ ಮಾಡುವುದಕ್ಕೆ ಮನಸ್ಸು ಮಾಡಬಾರದು ಎಂದು ಈ ಸಭೆಯ ಮೂಲಕ ಒತ್ತಾಯ ಪಡಿಸುತ್ತೇನೆ.

ಪ್ರತಿಯೊಂದು ಫಾರೆಸ್ಟ್‌ನಲ್ಲೂ ಒತ್ತುವರಿಮಾಡಿಕೊಂಡು, ಒತ್ತುವರಿ ಜಮೀನುಗಳು ಲೆಕ್ಕವಿಲ್ಲದಂತೆ ಉಳುಮೆ ಆಗುತ್ತಾ ಇವೆ. ಅದನ್ನು ಸರ್ಕಾರದವರ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಅನೇಕ ಸಾರಿ ಗಂಟಂ‌ಪೆಲೇಷ್ರ ಕಳುಹಿಸಿದ್ದೇನೆ. ಫಾರೆಸ್ಟ್ ಜಂಗಲುಗಳಲ್ಲಿ ಎಷ್ಟು ಜಮೀನು ಸರ್ಕಾರದ ಅನುಮತಿ ಇಲ್ಲದೆ ಉಳುಮೆ ಆಗುತ್ತಾ ಇದೆ ಎಂಬುದಕ್ಕೆ ಇವೊತ್ತಿನವರೆಗೂ ಉತ್ತರ ಬಂದಿಲ್ಲ. ಆದ್ದರಿಂದ ಮೊದಲನೆಯದಾಗಿ ಸಂಸ್ಥಾನದ ಎಲ್ಲ ಭಾಗದಲ್ಲೂ ಇರತಕ್ಕ ಫಾರೆಸ್ಟ್‌ಗಳಲ್ಲಿ ಸರ್ಕಾರದ ಅನುಮತಿ ಇಲ್ಲದೆ ಉಳುಮೆ ಆಗತಕ್ಕ ಜಮೀನನ್ನು ಬಿಡುಗಡೆಮಾಡಿಸತಕ್ಕದ್ದು ಸರ್ಕಾರದ ಮೊದಲನೆಯ ಕರ್ತವ್ಯವಾಗಿದೆ. ಮತ್ತು ಸರ್ಕಾರದವರು ಈ ಅರಣ್ಯಗಳ ವಿಚಾರದಲ್ಲಿ ಹೆಚ್ಚಿನ ನಿಗಾವಣೆಯನ್ನು ಇಲ್ಲಿಂದ ಮುಂದೆ ಕೊಡದೇ ಹೋಗುವ ಪಕ್ಷಕ್ಕೆ ಈ ಅರಣ್ಯಗಳು ದಿನದಿನಕ್ಕೆ ನಶಿಸಿ ಹೋಗಿ ಸಂಸ್ಥಾನದಲ್ಲಿ ಮನೆಗಳಲ್ಲಿ ಅಡಿಗೆ ಮಾಡುವುದಕ್ಕೂ ಮತ್ತು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೂ ಮತ್ತು ಮನುಷ್ಯನಿಗೆ ಅತ್ಯವಶ್ಯಕವಾಗಿ ಬೇಕಾದಂಥ ಸೀಗೆಕಾಯಿ, ಹುಣಸೇಕಾಯಿ ಮತ್ತು ಇನ್ನೂ ಅನೇಕ ಸಾಮಗ್ರಿಗಳೂ ಇಲ್ಲದಂತಾಗಿ ದೇಶದ ಸಂಪತ್ತು ದಿನದಿನಕ್ಕೆ ನಶಿಸಿಹೋಗುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ಎಚ್ಚರಿಕೆಯಿಂದ ಇದ್ದು ಅವನ್ನು ಕಾಪಾಡಬೇಕು. ಪ್ರತಿ ದಿವಸ, ಪ್ರತಿ ವರ್ಷ ಖರ್ಚುಮಾಡತಕ್ಕ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿದೆಯೋ ಎಂಬುದನ್ನು ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ ದೇಶದ ಅತಿ ಮುಖ್ಯವಾದ ಈ ಅರಣ್ಯ ಸಂಪತ್ತನ್ನು ಕಾಪಾಡಬೇಕೆಂದು ಹೇಳಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ವಾಮಿ, ಮೈಸೂರಿನಲ್ಲಿ ಅತ್ಯುತ್ತಮವಾದ ಅರಣ್ಯ ಸಂಪತ್ತಿರುವುದು ಮಲೆನಾಡು ಪ್ರಾಂತ್ಯದಲ್ಲಿ; ಹಾಸನದ ಕಡೆಯೂ ಹೆಚ್ಚಾಗಿದೆ. ಕಳೆದ 15—20 ವರ್ಷಗಳಿಂದ ಯುದ್ಧ ಕಾಲದಲ್ಲಿ ಪ್ರತಿ ದಿವಸವೂ ನೂರಾರು ಲಾರಿಗಳು ಭರ್ತಿಯಾಗುವಷ್ಟು ದೊಡ್ಡ ದೊಡ್ಡ ಮರಗಳನ್ನು ಕಡಿದು ಯುದ್ಧಕಾರ್ಯಗಳಿಗಾಗಿ ಉಪಯೋಗಿಸಿದ್ದರಿಂದ ಅರಣ್ಯವೆಲ್ಲಾ ಹಾಳಾಗಿಹೋಗಿದೆ. ಇದೇ ರೀತಿಯಲ್ಲಿ ಇನ್ನು ಮುಂದೆಯೂ 15—20 ವರ್ಷಗಳವರೆಗೆ ಕಾಡಿನಲ್ಲಿರುವ ಮರಗಳನ್ನು ಕಡಿದುಹೇ ಆದರೆ, ಶ್ರೀ ಮಾಧವಾಚಾರ್‌ರವರು ಹೇಳಿದ ಹಾಗೆ, ಮೈಸೂರು ಸಂಸ್ಥಾನದಲ್ಲಿ ಮಳೆಯೇ ಬಾರದೆ ಹೋಗುವ ಹೆದರಿಕೆಯಿದೆ; ಮಲೆನಾಡಿನಲ್ಲೂ ಕೂಡ ಈ ಹೆದರಿಕೆಯಿದೆ. ಮರ ಕಡಿದ ಹಾಗೆಲ್ಲಾ ಮರಗಳನ್ನು ಹೊಸದಾಗಿ ಬೆಳೆಸುವ ಹಾಗೆ ಏರ್ಪಾಡು ಮಾಡದಿರುವುದು ಬಹಳ ಶೋಚನೀಯವಾದ ವಿಚಾರ. ಯಾವ ರೀತಿಯಿಂದಲಾದರೂ ಅರಣ್ಯ ಸಂಪತ್ತನ್ನು ಹೆಚ್ಚಿಸಲು ನಿಯೋಜಿತ ರೀತಿಯಲ್ಲಿ ಯೋಜನೆ ಮಾಡಿ ಸರ್ಕಾರದವರು ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು. ಹಾಗೆ ಮಾಡುವಾಗ ಹೆಚ್ಚಾಗಿ ಮಳೆ ಬೀಳುವ ಕಡೆ, ಭೂಮಿ ಫಲವತ್ತಾಗಿರುವ ಕಡೆ ಈ ಕೆಲಸ ಮಾಡದೆ ಬೈಲು ಸೀಮೆಯಲ್ಲಿ ಮಾಡಿ ಖರ್ಚು ಮಾಡುತ್ತೇವೆಂದರೆ ಅದರಿಂದ ವೃಥಾ ಹಣ ಖರ್ಚಾಗುತ್ತದೆಯೇ ವಿನಾ ತಕ್ಕ ಪ್ರಯೋಜನವಾಗುವುದಿಲ್ಲ. ಬೆಂಗಳೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಫಾರೆಸ್ಟ್ ರೇಂಜರು, ಗಾರ್ಡು ಮುಂತಾದವರನ್ನಿಡುವುದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಅದಕ್ಕೆ ಬದಲಾಗಿ ಮಲೆನಾಡು ಪ್ರಾಂತಕ್ಕೆ ಹೆಚ್ಚು ನಿಗಾ ಕೊಟ್ಟುದೇ ಆದರೆ ಅರಣ್ಯ ಬಹಳವಾಗಿ ಅಭಿವೃದ್ಧಿಯಾಗುತ್ತದೆ. ಈಗ ನಮ್ಮ ಮೈಸೂರು ದೇಶದಲ್ಲಿ ಸಾಕಾದಷ್ಟು ತೇಗದ ಮರಗಳಿಲ್ಲದೆ ರಂಗೂನ್, ಬರ್ಮಾ ಮುಂತಾದ ದೇಶಗಳಿಂದ ಅದನ್ನು ತರಿಸುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ಸಮೃದ್ಧಿಯಾದ ಕಾಡಿರುವಾಗ ಅಲ್ಲಿ ತೇಗದ ಮರಗಳನ್ನು ಬೆಳೆಸಲು ಏಕೆ ಏರ್ಪಾಡುಮಾಡಿಲ್ಲ? ಅಲ್ಲಿ ತೇಗದ ಮರಗಳು ಬೆಳೆಯುವುದಿಲ್ಲವೆಂದೇನಾದರೂ ಹೇಳಿದ್ದಾರೆಯೆ? ಹಾಸನ ಟೌನಿನಲ್ಲಿ ಎಂಥ ಉತ್ಕೃಷ್ಟವಾದ ತೇಗದ ಮರ ಬೆಳೆಸಿದ್ದಾರೆಂಬುದನ್ನು ತಾವು ನೋಡಿರಬಹುದು, ಅಥವಾ ಮುಂದೆ ಆ ಕಡೆ ಹೋದಾಗ ನೋಡಬಹುದು. ಡಿಸ್ಟ್ರಿಕ್ಟ್ ಆಫೀಸಿನ ಮುಂದೆ ಸೊಗಸಾದ ತೇಗದ ಮರ ಬೆಳೆಸಿದ್ದಾರೆ. ಆ ಮರಗಳು ಅಲ್ಲಿ ಚೆನ್ನಾಗಿ ಬೆಳೆಯಲು ಅವಕಾಶವಿರುವುದರಿಂದ ಹಾಸನ ಜಿಲ್ಲೆಯಲ್ಲಿ ತೇಗದ ಮರಗಳನ್ನು ಬೆಳೆಸಲು ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಹಾಸನ ಜಿಲ್ಲೆಯಲ್ಲಿ ನರ್ಸರಿ ಮಾಡಬೇಕು, ಒಳ್ಳೆಯ ಜಾತಿ ಗಿಡಗಳನ್ನು ಅಲ್ಲಿ ಸರಬರಾಜು ಮಾಡಿ ಅವನ್ನು ಬೆಳೆಸಲು ಏರ್ಪಡಿಸಬೇಕು ಎಂದು ಹೇಳಿದ ಮೇಲೆ ನರ್ಸರಿಯಾಗಿದ್ದರೂ ನಾವು ಒಳ್ಳೆಯ ಜಾತಿ ಸಸಿಗಳನ್ನು ಕೊಡಿ ಎಂದು ಕೇಳಿದಾಗ ಬೇಕಾದ ಸಸಿಗಳನ್ನು ಕೊಡುತ್ತಿಲ್ಲ. ಇದರಿಂದ ನರ್ಸರಿಯಿದ್ದರೂ ಸಾಕಷ್ಟು ಪ್ರಯೋಜನವಾಗಿಲ್ಲ. ಇಂಥ ನರ್ಸರಿಯಿರುವುದಕ್ಕಿಂತ ತೆಗೆಯುವುದು ಲೇಸು. ಇಲ್ಲವಿದ್ದರೆ ಉತ್ತಮಪಡಿಸಿ ಎಲ್ಲಾ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲೂ ಒಂದು ನರ್ಸರಿ ಏರ್ಪಡಿಸಿ ರೈತರಿಗೆ ಬೇಕಾದ ಸಸಿಗಳನ್ನೊದಗಿಸಲು ವ್ಯವಸ್ಥೆಮಾಡಬೇಕು.

ಹಿಂದೆ ಪ್ರತಿಯೊಂದು ಹಳ್ಳಿಯಲ್ಲೂ ಗುಂಡು ತೋಪುಗಳನ್ನು ಬೆಳೆಸುತ್ತಿದ್ದರು; ಅದನ್ನು ಗೋಮಾಳದಲ್ಲಿ ಬೆಳೆಸುತ್ತಿದ್ದರು. ಈಗ ಅಂಥ ಕೆಲಸ ನಿಂತು ಹೋಗಿರುವುದರಿಂದ ಹಳ್ಳಿಗರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಯಾವ ಊರಿನಲ್ಲಿ ಗೋಮಾಳವಿದೆಯೋ ಅಲ್ಲಾದರೂ ಫಾರೆಸ್ಟ್ ಗಾರ್ಡುಗಳು ಮುತುವರ್ಜಿ ವಹಿಸಿ ಪ್ರತಿಯೊಂದು ಊರಿನಲ್ಲೂ ಗುಂಡು ತೋಪನ್ನು ಬೆಳೆಸುವುದರಿಂದ ದೇಶದ ಅಭಿವೃದ್ಧಿಯಾಗಲು ಅವಕಾಶವಾಗುತ್ತದೆ. ಹಾಗೆ ಮಾಡಬೇಕಾದದ್ದು ಆವಶ್ಯಕ.

ನಮ್ಮ ಜಿಲ್ಲೆಯಲ್ಲಿ ಮಳೆಯಿಲ್ಲದೆ ಸಿಲ್ವರ್ ಮರಗಳು ಕಾಫಿ ಎಸ್ಟೇಟುಗಳಲ್ಲಿ ಸಿಕ್ಕುತ್ತಿವೆ; ಬಾಕಿ ಕಡೆ ಇಲ್ಲ. ಅದನ್ನು ಜಂಗಲು ಗಿಡಗಳೆಂದು ಹೇಳುತ್ತಾರೆ. ಆ ಗಿಡಗಳನ್ನು ಸಾಗಿಸಬೇಕಾದರೆ ಅವು ಕಂದಾಯದ ಜಮೀನಿನಲ್ಲಿರುವುದರಿಂದ ರೆವೆನ್ಯೂ ಇಲಾಖೆಯ ಅನುಮತಿ ತೆಗೆದುಕೊಂಡು ಸಾಗಿಸಬೇಕು. ಆ ಅನುಮತಿ ಪಡೆಯಬೇಕಾದರೆ ಶೇಕದಾರರು ಶ್ಯಾನುಭೋಗರುಗಳಿಗೆ ಲಂಚ ಕೊಟ್ಟು ಕೆಲಸಮಾಡಿಕೊಳ್ಳಬೇಕು, ಇಲ್ಲದಿದ್ದರೆ ಬಹಳ ನಿಧಾನವಾಗುತ್ತದೆ. ಆ ಅವಕಾಶ ದೊರೆಯಲು ಸುಮಾರು ಮೂರು ತಿಂಗಳು ಹಿಡಿಯುತ್ತದೆ. ಆಮೇಲೆ ಫಾರೆಸ್ಟ್ ಇಲಾಖೆಗೆ ಹೋಗಿ ಅಲ್ಲಿಂದ ಲೈಸೆನ್ಸ್ ಪಡೆಯಲು ಮತ್ತೆ ಮೂರು ತಿಂಗಳಾಗುತ್ತವೆ. ಇದರಿಂದ ತೊಂದರೆ ಬಹಳವಾಗಿದೆ. ಇದನ್ನು ತಪ್ಪಿಸಿ ಮರಗಳನ್ನು ತರುವುದನ್ನು ಎಲ್ಲಿ ಬೇಕಾದರೂ ನಿಲ್ಲಿಸಿ—ಬೇಕಾದರೆ ಸರ್ಕಾರದವರು ರಾಯಲ್ಟಿ ತೆಗೆದುಕೊಳ್ಳಬಹುದು—ಏನಾದರೂ ಮಾಡಿ ಲಂಚ ರುಷುವತ್ತಿಗೆ ಅವಕಾಶ ತಪ್ಪಿಸಬೇಕು. ಎರಡು ಮೂರು ವರ್ಷಗಳಿಂದಲೂ ಈ ಪ್ರಶ್ನೆಯಿರುವುದರಿಂದ ಜಾಗ್ರತೆ ಸರಿಪಡಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ ಅಧ್ಯಕ್ಷರೆ, ಅರಣ್ಯ ಸಂಪತ್ತನ್ನು ಹೆಚ್ಚಿಸುವ ವಿಚಾರದಲ್ಲಿ ಈಗಾಗಲೆ ಮಾನ್ಯ ಸಭಾ ಸದಸ್ಯರುಗಳು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನನಗಾದರೂ ಈ ಬಡ್ಜೆಟ್ ನೋಡಿ ಪ್ರತಿವರ್ಷವೂ ಅರಣ್ಯದಿಂದ ಬರುವ ವರಮಾನ ಕಡಮೆಯಾಗುತ್ತಿರುವುದನ್ನು ನೋಡಿ ತುಂಬ ವಿಷಾದವಾಗುತ್ತಿದೆ. ಮಲೆನಾಡಿನಲ್ಲಿರುವ ಅರಣ್ಯ ಸಂಪತ್ತನ್ನು ಮತ್ತು ಅದರ ವರಮಾನವನ್ನು ಹೆಚ್ಚಿಸಲು ತುಂಬ ಅವಕಾಶವಿದ್ದರೂ ಸರ್ಕಾರ ಈ ರೀತಿಯಾದ ಉದಾಸೀನ ಮನೋಭಾವವನ್ನೇಕೆ ತಾಳಿದ್ದಾರೋ ಗೊತ್ತಿಲ್ಲ. ಅರಣ್ಯದಲ್ಲಿ ಈಗಾಗಲೆ ಕಳ್ಳ ಸಾಗಾಣಿಕೆ ಜಾಸ್ತಿಯಾಗಿದೆ. ಕಳೆದ ಸಾಲಿನಲ್ಲಿ ಅಥವಾ ಎರಡು ವರ್ಷಗಳ ಹಿಂದೆ ಒಂದು ಖೋಟಾ ಮುದ್ರೆ, ಅಥವಾ ಸೀಲನ್ನು ಇಟ್ಟುಕೊಂಡು ಸಾವಿರಾರು ರೂಪಾಯಿಗಳ ಬೆಲೆ ಬಾಳುವ ನಾಟಾಗಳನ್ನು ಸಾಗಿಸುತ್ತಿದ್ದುದನ್ನು ಚಿಕ್ಕಮಗಳೂರು ಜಿಲ್ಲಾ ಅರಣ್ಯ ಇಲಾಖೆಯ ಸರ್ಕಾರಿ ನೌಕರರು ಕಂಡುಹಿಡಿದರು. ಈ ರೀತಿ ದೇಶದ ಹೊರಕೆ ಸಾಗಿಸುತ್ತಿದ್ದುದನ್ನು ದಕ್ಷತೆಯಿಂದ, ಪ್ರಾಮಾಣಿಕತನದಿಂದ ಅರಣ್ಯ ಇಲಾಖೆಯ ನೌಕರರು ಹಿಡಿದು ಪೋಲೀಸಿನವರ ವಶಕ್ಕೆ ಒಪ್ಪಿಸಿದರು. ಇದರೆ ಅದು ಏನಾಯಿತೋ ಏನೋ ಗೊತ್ತಾಗಲಿಲ್ಲ. ಹೀಗೆ ಸರ್ಕಾರದಲ್ಲಿ ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ನಿಕಟ ಸಂಪರ್ಕವಿಲ್ಲ; ಒಂದು ಕಡೆ ದಕ್ಷತೆಯಿದರೆ ಇನ್ನೊಂದು ಕಡೆ ಇಲ್ಲ. ಏಕೆ ಹೀಗಾಗಿದೆಯೋ ತಿಳಿಯದು. ಈ ರೀತಿಯಾಗಿ ಪ್ರತಿ ವರ್ಷವೂ ಎಷ್ಟು ಮರ ಕಳ್ಳಸಾಗಾಣಿಕೆಯಿಂದ ನಮ್ಮ ದೇಶಬಿಟ್ಟು ಹೊರದೇಶಕ್ಕೆ ಹೋಗುತ್ತಿದೆ ಎಂಬುದನ್ನು ಕಂಡುಹಿಡಿಯುವುದು ಸರ್ಕಾರದ ಆದ್ಯ ಕರ್ತವ್ಯ.

ಅಲ್ಲದೆ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿದ್ದರಲ್ಲಿ ಸುಮಾರು 20,700 ರೂಪಾಯಿಗಳ ಉಳಿತಾಯವಾಗಿರುವ ರೀತಿ ಕಾಣುತ್ತಿದೆ. ಏಕೆ ಈ ಹಣ ಖರ್ಚಾಗಲಿಲ್ಲವೋ ತಿಳಿಯದು. ಅರಣ್ಯ ಸಂಪತ್ತನ್ನು ವೃದ್ಧಿಪಡಿಸಲು ಸರ್ಕಾರ ಹಣ ಕೊಟ್ಟರೂ ಖರ್ಚುಮಾಡಲು ಇಲಾಖೆ ಪ್ರಯತ್ನಮಾಡದಿರುವುದು ಬಹಳ ವಿಷಾದಕರ.

ಭೂಮಿಯನ್ನು ಅರಣ್ಯದಲ್ಲಿ ಸಾಗುವಳಿಗೆ ಕೊಡಬಾರದೆಂಬ ನೀತಿಯು ಒಪ್ಪತಕ್ಕದ್ದೇ ಆದರೂ ಅರಣ್ಯ ಸಂಪತ್ತನ್ನು ಹೆಚ್ಚಿಸುವುದಾದರೆ ಅಡ್ಡಿಯಿಲ್ಲ. ಒಂದು ಕಡೆ ನೂರಾರು ಎಕರೆಗಳನ್ನು ಒತ್ತುವರಿ ಮಾಡಿ ಬಗರ್ ಹುಕುಂನಿಂದ ಸಾಗುವಳಿ ಮಾಡುವುದನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡಿಲ್ಲ. ಅಲ್ಲದೆ ಸಾಗುವಳಿದಾರರು ಪ್ರಭಾವಶಾಲಿಗಳಾದ್ದರಿಂದಲೋ ಅಥವಾ ಇತರ ಕಾರಣಗಳಿಂದಲೋ ಅಂತೂ ಜಮೀನು ಸಾಗುವಳಿ ಮಾಡುತ್ತಿರುವುದನ್ನು ಒತ್ತುವರಿ ಮಾಡಿ ಸಾಗುವಳಿ ಮಾಡುವುದನ್ನು ಪ್ರೋತ್ಸಾಹಿಸುತ್ತಾ ಇದ್ದಾರೆಯೋ ಏನೋ, ಸರ್ಕಾರದ ಬೆಂಬಲ ಅವರಿಗಿದೆಯೋ ಏನೋ ಎಂಬ ಶಂಕೆ ಬಡಜನರಲ್ಲುಂಟಾಗುತ್ತಿದೆ. ಈ ಒಂದು ನೀತಿಯಿಂದ ಅರಣ್ಯಸಂಪತ್ತು ಹೆಚ್ಚಿಸುವುದಕ್ಕೆ ಬದಲಾಗಿ ಬಗರ್ ಹುಕುಮ್ಮಿನಿಂದ ಸಾಗುವಳಿಮಾಡುವವರಿಗೆ ಪ್ರೋತ್ಸಾಹಮಾಡಲು ಅವಕಾಶ ಕೊಡದೆ ತಡೆದುದೇ ಆದರೆ ಎಷ್ಟೋ ಅನುಕೂಲವಾದೀತು. ಈ ರೀತಿ ಬಗರ್ ಹುಕುಮ್ಮಿನಿಂದ ಸಾಗುವಳಿ ಮಾಡಲು ಧೈರ್ಯವಿಲ್ಲದಿರುವ ಬಡಜನರಿಗೆ ಮರ ಗಿಡಗಳಿಲ್ಲದ, ಕಾಡಿಗೆ ಅನಕೂಲವಿಲ್ಲದ ಒಂದೆರಡು ಎಕರೆಗಳನ್ನಾದರೂ ಫಾರೆಸ್ಟ್ ಇಲಾಖೆಯಿಂದ ಬಿಟ್ಟುಕೊಡುವುದು ನ್ಯಾಯವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ಆಫೀಸು ಬೆಂಗಳೂರಿನಲ್ಲಿರುವುದರಿಂದ ಮಲೆನಾಡಿಗೆ ಬಹಳ ದೂರವಾಗಿದೆ. ರೈತನು ತನ್ನ ಜಮೀನಿನ ಸಮೀಪದಲ್ಲಿಯೇ ಮನೆಮಾಡಿ ವಾಸಿಸುವಂತೆ ಮಲೆನಾಡಿನಲ್ಲಿ ಹೆಚ್ಚು ಅರಣ್ಯ ಸಂಪತ್ತಿರುವಾಗ ಅಲ್ಲೇ ಆ ಆಫೀಸನ್ನು ಏರ್ಪಡಿಸುವುದು ಸೂಕ್ತ. ಚೀಫ್ ಕನ್ಸರ್ವೇಟರ್ ಅವರ ಜವಾಬ್ದಾರಿ ಅರಣ್ಯ ಸಂಪತ್ತನ್ನು ಹೆಚ್ಚಿಸುವುದರಲ್ಲಿ ಬಹಳವಾಗಿದೆ. ಅವರು ಮುತುವರ್ಜಿಯಿಂದ ತಮ್ಮ ಸಿಬ್ಬಂದಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಸಂಸ್ಥಾನದ ಅರಣ್ಯ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಮಾಡಿ ನಾನಾ ರೀತಿಯಲ್ಲಿ ಅಂಕಿಅಂಶಗಳನ್ನು ಶೇಖರಿಸಿ ಯಾವ ರೀತಿಯಲ್ಲಿ ಇಲಾಖೆಯ ದಕ್ಷತೆಯನ್ನು ಹೆಚ್ಚಿಸಬೇಕೆಂಬುದನ್ನು ಕಂಡುಹಿಡಿದು ಸರಿಯಾದ ರೀತಿಯಲ್ಲಿ ಈ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕಾದರೆ ಕೆಮ್ಮಣ್ಣುಗುಂಡಿ ಅಥವಾ ಶಿವಮೊಗ್ಗ ಅಥವಾ ಮಲೆನಾಡಿನ ಮುಖ್ಯ ಕೇಂದ್ರದಲ್ಲಿ ಅವರು ವಾಸಮಾಡಬೇಕಾದದ್ದು ಅವಶ್ಯಕ. ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ಯೋಚನೆಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಅಲ್ಲದೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಹಿಂದಿದ್ದ ಹಾಗೆ ಜಿಲ್ಲಾಧಿಕಾರಿಗಳ ಅಧೀನದಲ್ಲಿದ್ದರೆ ರೆವೆನ್ಯೂ ಇಲಾಖೆಯ ನಿಕಟ ಸಂಪರ್ಕ ಹೆಚ್ಚಿ ಅನುಕೂಲವಾಗುತ್ತಿದೆ. ಈಗ ಹಾಗಿಲ್ಲದಿರುವುದರಿಂದ ರೆವೆನ್ಯೂ ಇಲಾಖೆ ಒಂದು ತರಹ, ಫಾರೆಸ್ಟ್ ಇಲಾಖೆ ಒಂದು ತರಹ ವರ್ತಿಸುತ್ತಿರುವುದರಿಂದ ಅರಣ್ಯ ಇಲಾಖೆಯ ಕೆಲಸ ಸುಸೂತ್ರವಾಗಿ ನಡೆಯುತ್ತಿಲ್ಲ. ಆದ್ದರಿಂದ ಮೊದಲಿದ್ದ ಹಾಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರೂ ಕೂಡ ರೆವೆನ್ಯೂ ಇಲಾಖೆಯಲ್ಲಿದ್ದ ಡೆಪ್ಯುಟಿ ಕಮಿಷನರ ಅಧೀನದಲ್ಲಿದ್ದರೆ ರೆವೆನ್ಯೂ ಇಲಾಖೆಗೂ ಫಾರೆಸ್ಟ್ ಇಲಾಖೆಗೂ ನಿಕಟ ಸಂಪರ್ಕವುಂಟಾಗಿ ಅರಣ್ಯ ಇಲಾಖೆಯ ಆಡಳಿತ ಸರಿಯಾಗಿ ನಡೆಯುವುದೂ ಅಲ್ಲದೆ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಅನುಕೂಲವಾಗುತ್ತದೆ.

ಇನ್ನು ಒಂದೇ ಒಂದು ವಿಷಯ. ಬಡವರು ವಾಸದ ಮನೆಯನ್ನು ಕಟ್ಟಿಕೊಳ್ಳಲು ಅಥವಾ ವ್ಯವಸಾಯಕ್ಕೆ ಬೇಕಾದ ಮರಮುಟ್ಟುಗಳನ್ನು ಕಾಡಿನಿಂದ ತರಲು ಈಗಿನ ಕಾಲಕ್ಕೆ ತಕ್ಕಹಾಗೆ ಇನ್ನೂರು ರೂಪಾಯಿಗಳ ಬೆಲೆ ಬಾಳುವ ಮರಮುಟ್ಟುಗಳನ್ನು ತರಲು ಅವಕಾಶ ಕೊಡುವ ವಿಚಾರವನ್ನು ಸರ್ಕಾರದವರು ಸಹಾನುಭೂತಿಯಿಂದ ಯೋಚನೆ ಮಾಡುವುದು ಸಮಯೋಚಿತವಾಗಿದೆ. ಈಗಲಾದರೂ ಸರ್ಕಾರದವರು ಸಮಗ್ರ ಯೋಜನೆ ಮಾಡಿ ದೇಶದ ಅರಣ್ಯ ಸಂಪತ್ತನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

* ಶ್ರೀ ಎಸ್. ಪರಮೇಶ್ವರಪ್ಪ (ಸಿರುಗುಪ್ಪ).—ಬಳ್ಳಾರಿಯಲ್ಲಿ ಕ್ಷಾಮವು ಯಾವಾಗಲೂ ಇದ್ದೇ ಇದೆ, ಮಳೆ ಕಡಮೆ. ಇರುವ ಅರಣ್ಯವೂ ಹೋದರೆ ಮಳೆಯ ಅಭಾವವೂ ಇನ್ನೂ ಹೆಚ್ಚುತ್ತದೆ. ಸಾಂಡೂರು ಸುತ್ತಲೂ ಇರುವ ಪ್ರದೇಶದಲ್ಲಿ ಗಂಧದ ಕಡ್ಡಿ ಏನಿದೆಯೋ ಅದನ್ನು ಬೆಂಗಳೂರಿಗೆ ಲಾರಿಗಳಲ್ಲಿ ತರುತ್ತಿದ್ದಾರೆ. ಈ ರೀತಿಯಾಗಿ ತಂದು ಮಾರಾಟ ಮಾಡುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಂಡಿಲ್ಲ. ಫಾರೆಸ್ಟ್ ಇಲಾಖೆ ಚೀಫ್ ಕನ್ಸರ್ವೇಟರಿಗೆ ತಿಳಿಸಿದಾಗ್ಯೂ ಕೂಡ ಅದನ್ನು ತಡೆಗಟ್ಟಿಲ್ಲ. ಇದನ್ನು ತಪ್ಪಿಸಿ ಶಿವಮೊಗ್ಗಾದಲ್ಲಿ ಮಾಡಿರುವ ಹಾಗೆ ಒಂದು ಕಾರ್ಖಾನೆಯನ್ನು ಆ ಪ್ರಾಂತ್ಯದಲ್ಲ ತೆರೆದರೆ ಎಷ್ಟೋ ಉತ್ಪತ್ತಿಯಾಗುತ್ತದೆ. ಇದಕ್ಕೆ ಕೂಡಲೆ ಕಾರ್ಯ ಕ್ರಮ ಕೈಕೊಳ್ಳಬೇಕು ಎಂದು ಕೋರುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ (ಕೋರ).—ಸ್ವಾಮಿ, ತುಮಕೂರಿನಲ್ಲಿ ಸೆಂಟ್ರಲ್ ವುಡ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಇದೆ. ಅದರ ಕೆಲಸ ಪ್ರಾರಂಭವಾಗಿ ಐದಾರು ವರ್ಷವಾಯಿತು. ಮೈಸೂರು ಸೀಮೆಯಲ್ಲಿರುವ ವಿದ್ಯಾ ಸಂಸ್ಥೆಗಳಿಗೆ ಸಲಕರಣೆಯೇನುಬೇಕೋ ಅದನ್ನೊದಗಿಸಲು ಈ ಕೆಲಸ ಪ್ರಾರಂಭವಾಯಿತು. ಆಮೇಲೆ ಮೆಕ್ಯಾನೈಸ್ಡ್ ರೀತಿಯಲ್ಲಿ ಈ ಕೆಲಸಕಾರ್ಯ ಮಾಡಬೇಕೆಂದು ಹೇಳಿದರು, ಸುಮಾರು 50-60 ಸಾವಿರ ರೂಪಾಯಿಗಳ ಮೆಷಿನರಿ ಬಂತು. ಆದರೆ ಈಗ ನಾಲ್ಕು ಬೆಂಚುಗಳನ್ನು ಮಾಡುವುದು ವಿನಾ ಬೇರೆ ಕೆಲಸವಿಲ್ಲ. ಅದರ ಸಿಬ್ಬಂದಿಗೆ ಸುಮಾರು ಹತ್ತು ಸಾವಿರ ರೂಪಾಯಿಗಳ ಖರ್ಚಿದೆ. ಸರ್ಕಾರದವರು ಈ ಕಾರ್ಖಾನೆಯನ್ನು ಪ್ರಾರಂಭ ಮಾಡುವಾಗ ಏನು ಉದ್ದೇಶದಿಂದ ಮಾಡಿದ್ದರೋ ಆ ಉದ್ದೇಶವನ್ನು ಸಾಧನೆ ಮಾಡಬೇಕೆಂದಿದ್ದರೆ ಅದಕ್ಕೇನು ಸೌಲಭ್ಯ ಬೇಕೋ ಅದನ್ನೊದಗಿಸುವುದು ಒಳ್ಳೆಯದು. ಒಂದು ವೇಳೆ ಸರ್ಕಾರಕ್ಕೆ ಈ ವರ್ಕ್‌ಷಾಪಿನಿಂದ ಪ್ರಯೋಜನವಿಲ್ಲವೆಂದು ಕಂಡರೆ ಪೂರ್ತಿಯಾಗಿ ತೆಗೆಯಬಹುದು. ಇಂಡಸ್ಟ್ರಿಯಲ್ ಸ್ಕೂಲುಗಳಿಗೆ ಹಿಂದೆ ಒಂದು ಪ್ರಪೋಸಲ್ಲಿತ್ತು. ಜಾಲಹಳ್ಳಿಯಲ್ಲಿ ಒಂದು ಮೆಷಿನ್ ಟೂಲ್ಸ್ ಸ್ಕೂಲಿತ್ತು. ಅದನ್ನು ತೆಗೆದು ಈಗ ಕುಮಾರ ಪಾರ್ಕ್ ಎಕ್ಸ್‌ಟೆನ್‌ಷನ್‌ನಲ್ಲಿ ಹಾಕಿದ್ದಾರೆ. ಅಲ್ಲಿ ಸರಿಯಾದ ಕಟ್ಟಡವಿಲ್ಲ, ಈ ಕಾರ್ಖಾನೆ ನಡೆಸಲು ಸಾಕಾದಷ್ಟು ಅನುಕೂಲವಿಲ್ಲ ಎಂದು ಹೇಳುತ್ತಾರೆ. ಈ ಕಾರ್ಖಾನೆ ನಡೆಸುವುದರಿಂದ ಪ್ರಯೋಜನವಿಲ್ಲವೆಂದು ಹೇಳುತ್ತಾರೆ. ಈ ಇಂಡಸ್ಟ್ರಿಯಲ್ ಸ್ಕೂಲು

(ಶ್ರೀ ಬಿ. ಸಿ. ನಂಜುಂಡಯ್ಯ.)

ಪ್ರಾರಂಭಿಸಿದಾಗ ಲಕ್ಷಾಂತರ ರೂಪಾಯಿಗಳು ಇನ್‌ವೆಸ್ಟಾಗಿವೆ. ಈಗ ಅನ್ಯಾಯವಾಗುತ್ತಿರುವುದನ್ನು ತಪ್ಪಿಸಬೇಕು.

ಈಗ ತುಮಕೂರಿನಲ್ಲಿ ಒಂದು ಸರ್ಕಾರಿ ಡಿಪೋ ಇದೆ. ಅಲ್ಲಿ ಮರದ ಸಾಮಾನಿಗೆ ಮರಗಳ ಆವಶ್ಯಕತೆ ಬಹಳವಾಗಿದೆ, ಸುತ್ತ ಎಲ್ಲೂ ಅರಣ್ಯ ಪ್ರದೇಶವಿಲ್ಲ. ನಮ್ಮ ಜಿಲ್ಲೆಗೆ ಬರುವ ಮರಗಳು ಶಿವಮೊಗ್ಗ ಅಥವಾ ತರೀಕೆರೆಯಿಂದ ಬರಬೇಕು. ಪ್ರತಿ ವರ್ಷ 500-600 ಗಾಡಿ ಸಾಮಾನಿಗೆ ಗಿರಾಕಿಯಿರುವಾಗ ಕೇವಲ 50 ಗಾಡಿ ಮರದ ಸಾಮಾನು ಬರುತ್ತಿದೆ. ಮರಗಳ ಆವಶ್ಯಕತೆ ಬಹಳವಾಗಿದೆ. ತುಮಕೂರಿನ ಬಳಿ ಕಾಡು ಸಾಕಾದಷ್ಟಿಲ್ಲದಿರುವುದರಿಂದ ಅದಕ್ಕೆ ಸರಿಯಾದ ಏರ್ಪಾಡು ಮಾಡಬೇಕು. ಚಿತ್ರದುರ್ಗದಲ್ಲಿ ಮರ ಸಿಕ್ಕುವುದಿಲ್ಲವೆಂದು ಅಲ್ಲಿನ ಡಿಪೋಗೆ ಶಿವಮೊಗ್ಗದಲ್ಲಿ ಯಾವ ದರವಿದೆಯೋ ಅದೇ ದರದಲ್ಲಿ ರಿಯಾಯಿತಿ ದರದಲ್ಲಿ ಮರಗಳನ್ನು ಮಾರುತ್ತಿದ್ದಾರೆ. ತುಮಕೂರಿನ ಸುತ್ತಲೂ ಫಾರೆಸ್ಟ್ ಇಲ್ಲದಿರುವುದರಿಂದ ಆ ಸ್ಥಳಕ್ಕೂ ಸಹ ಚಿತ್ರದುರ್ಗಕ್ಕೆ ತೋರಿಸಿರುವ ಕನ್‌ಸೆಷನ್ ತೋರಿಸಿ ತುಮಕೂರಿನ ಡಿಪೋಗಳಿಗೆ ಅದೇ ರಿಯಾಯಿತಿ ದರದಲ್ಲಿ ಮಾರಬೇಕೆಂದು ಹೇಳಿದರೆ ಆಗುವುದಿಲ್ಲವೆಂದು ಹೇಳಿದ್ದಾರೆ. ಈಗಲಾದರೂ ಮತ್ತೊಂದು ಸಲ ಯೋಚನೆ ಮಾಡಿ ಚಿತ್ರದುರ್ಗಕ್ಕೆ ಕೊಟ್ಟಿರುವ ಕನ್‌ಸೆಷನ್ ತುಮಕೂರಿಗೂ ಕೊಡಬೇಕೆಂದು ಹೇಳುತ್ತೇನೆ.

2-30 P.M.

* ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಅರಣ್ಯವನ್ನು ಉದ್ಧಾರ ಮಾಡಬೇಕೆಂಬ ಅಭಿಪ್ರಾಯವುಳ್ಳವರಲ್ಲಿ ನಾನೂ ಒಬ್ಬ. ಮೈಸೂರು ದೇಶದಲ್ಲಿ ಬೇಕಾದಷ್ಟು ಅರಣ್ಯವಿದೆ. ಆದರೆ ಅವುಗಳಲ್ಲಿ ಕಾಡು ಮರಗಳು ಬೆಳೆಯದಿರುವ ಭೂಮಿ ಬೇಕಾದಷ್ಟಿದೆ. ಇಂಥ ಪ್ರದೇಶಗಳು ನಮ್ಮ ಕಡೆ ಇರುವುದನ್ನು ನಾನು 1932 ನೆಯ ಇಸವಿಯಿಂದಲೂ, ಅದಕ್ಕಿಂತಲೂ ಮುಂಚೆ ಹುಡುಗನಾಗಿದ್ದಾಗಿನಿಂದಲೂ ನೋಡುತ್ತಿದ್ದೇನೆ. ಹಗರೆ ಕಾವಲು ಮತ್ತು ಕಟ್ಟಾಯದ ಗಿಡ ಒಂದೇ ರೀತಿಯಿದೆ. ಸೀಗೆ ಗುಡ್ಡದಲ್ಲಿ ಅವೊತ್ತು ಎಷ್ಟು ಮರಗಳಿದ್ದವೋ ಇವೊತ್ತು ಇನ್ನೂ ಕಡಮೆಯಾಗಿವೆಯೆಂದೇ ಹೇಳಬಹುದು. ಮಂತ್ರಿಗಳನ್ನು ಜಮೀನಿಲ್ಲದಿರುವವರಿಗೆ, ನಿರ್ಗತಿಕರಿಗೆ ಜಮೀನು ಕೊಡಿ ಎಂದು ಕೇಳಿದರೆ ಇದು ಕಾಡಿನ ಭೂಮಿ, ಕೊಡುವುದಕ್ಕಾಗುವುದಿಲ್ಲವೆನ್ನುತ್ತಾರೆ. ಇದೇ ಕಾಡಿನಲ್ಲಿ ಸರ್ಕಾರದವರು ದುಡ್ಡು ಖರ್ಚುಮಾಡಿ, ಬೀಜವನ್ನು ಹಾಕಿ, ಸಸಿ ಎಬ್ಬಿಸಬೇಕೆಂದು ಈ ಏಳು ವರ್ಷಗಳಿಂದಲೇ ಅಲ್ಲ ಹಿಂದಿನ ಸರ್ಕಾರದವರಿದ್ದಾಗಿನಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಒಂದು ಸಸಿಯೂ ಎದ್ದಿಲ್ಲ. ಹೀಗೆ ದುಡ್ಡನ್ನು ವ್ಯಯ ಮಾಡುವುದಕ್ಕೆ ಬದಲಾಗಿ ಈ ಜಮೀನುಗಳನ್ನು ಅರಣ್ಯದಿಂದ ಬಿಡಿಸಿಕೊಡಬೇಕೆಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನಾನು ಹೇಳಬೇಕಾಗಿದೆ. ಸರ್ಕಾರದವರು ದಯವಿಟ್ಟು ಕೋಪ ಮಾಡಿಕೊಳ್ಳಬಾರದು. ಎಲ್ಲಿಯೂ ಕಾಡಿನಲ್ಲಿ ಗಿಡಗಳನ್ನು ಬೆಳೆಸುವ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಹಿಂದೆ ಯಾವರೀತಿ ನಡೆಯುತ್ತಿತ್ತೋ ಅದೇರೀತಿ ಈಗಲೂ ನಡೆಯುತ್ತಿದೆ. ಮೊದಲು ಏನು ಸೋಮಾರಿತನವಿತ್ತೋ ಈಗಲೂ ಅದೇ ಸೋಮಾರಿತನ. ನಮ್ಮ ಮಂತ್ರಿಗಳವರು ಇದನ್ನು ಸರಿಯಾಗಿ ನೋಡಿಲ್ಲವೆಂದು ಹೇಳಬೇಕು. ಒಮ್ಮೆ ಅವರು ನಮ್ಮ ಕಡೆ ಪ್ರವಾಸ ಬಂದಾಗಲೂ ಕಾಡಿನೊಳಕ್ಕೆ ಹೋಗಿ ನೋಡಬೇಕೆಂಬ ಮನಸ್ಸು ಅವರಿಗೆ ಬರಲಿಲ್ಲ. ರಸ್ತೆಯ ಪಕ್ಕದಲ್ಲೇ ನಿಂತು ಹಾಗೆಯೇ ಆಕಡೆ ನೋಡಿ ಹೊರಟುಹೋದರು. ಅಧಿಕಾರಿಗಳಂತೂ ಕಾಡಿನ ಮುಖವನ್ನೇ ನೋಡಿಲ್ಲವೆಂದು ಹೇಳಬಹುದು. ಆದ್ದರಿಂದ ಅರಣ್ಯ ಸಂಪತ್ತನ್ನು ಹೆಚ್ಚಿಸುತ್ತೇವೆ, ಹೆಚ್ಚಿಸುತ್ತೇವೆ ಎಂದು ಈ ಅಸೆಂಬ್ಲಿಯಲ್ಲಿ ಕೂಗಾಡಿ ಹೋಗುವುದೇ ಹೊರತು ಖಂಡಿತವಾಗಿ ಕಾರ್ಯತಃ ಏನೂ ಆಗಿಲ್ಲ.

ಡಾ॥ ಆರ್. ನಾಗನಗೌಡ.—ನಾನು ಕಾಡಿಗೆ ಆಕಡೆ ಹೋಗಿದ್ದೆ, ತಾವು ಬಂದಿರಲಿಲ್ಲ !

ಶ್ರೀ ಎಚ್. ಕೆ. ಸಿದ್ದಯ್ಯ.—ಹೋಗಿದ್ದಿರಿ, ಆದರೆ ತಾವು ರಸ್ತೆಯಲ್ಲಿ ಮಾತ್ರ ಹೋಗಿ ವಾಪಸು ಬಂದಿರಿ ಎಂದು ನಾನು ತಿಳಿದಿದ್ದೇನೆ.

ಇನ್ನೊಂದು ವಿಷಯವೇನೆಂದರೆ, ಕಾಡಿನಲ್ಲಿ ಸೌದೆ ಕಡಿಯಲು ಒಂದೊಂದು ಗಾಡಿಗೂ ರಹದಾರಿ ತೆಗೆದುಕೊಳ್ಳಬೇಕೆಂದಿದೆ. ಹಳ್ಳಿಯವರು ಕಾಡಿಗೆ ಹೋಗುವುದಕ್ಕೆ ಮುಂಚೆ ರಹದಾರಿ ತೆಗೆದುಕೊಳ್ಳುವುದಕ್ಕೆ ಹೋದರೆ ಅವರ ಮನೆಯವರು, 'ರಹದಾರಿ ಕೊಡುವವರು ಮಲಗಿದ್ದಾರೆ, ಸೌದೆ ಕಡಿಸಿಕೊಂಡು ಬನ್ನಿ, ರಹದಾರಿ ಆಮೇಲೆ ತೆಗೆದುಕೊಂಡರಾಯಿತು' ಎಂದು ಹೇಳಿ ಕಳುಹಿಸುತ್ತಾರೆ. ಹಳ್ಳಿಯವರು ತಿಳಿಯದೆ ಕಾಡಿನಲ್ಲಿ ಸೌದೆ ಕಡಿಸಿಕೊಂಡರೆ, ಅಲ್ಲಿನ ಗಾರ್ಡ್‌ಗಳು ಅವರ ಹತ್ತಿರ ರಹದಾರಿ ಇಲ್ಲವೆಂದು ಹೇಳಿ ಅವರಿಗೆ ತೊಂದರೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥದಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅರಣ್ಯದಿಂದ ಸರ್ಕಾರಕ್ಕೆ ಆದಾಯ ಬರತಕ್ಕಂಥ ವಸ್ತುಗಳು ಬಹಳ ಇವೆ. ಮೇಣ, ಗಂಧ, ಸೀಗೆಕಾಯಿ, ಅಳಲೇಕಾಯಿ ಮುಂತಾದುವು ಅನೇಕವಿವೆ. ಇವೆಲ್ಲವುಗಳಿಂದ ನಮಗೂ ಬೇಕಾದಷ್ಟು ಬರುತ್ತದೆ, ಕಂಟ್ರಾಕ್ಟುದಾರರಿಗೂ ಬೇಕಾದಷ್ಟು ಲಾಭ ಬರುತ್ತದೆ. ಆದ್ದರಿಂದ ಇಂಥ ಒಳ್ಳೆಯ ಕಾಡುಗಳ ವಿಚಾರದಲ್ಲಿ ಹೆಚ್ಚಿಗೆ ನಿಗಾ ಕೊಡುವುದೇನೋ ನಿಜ. ಆದರೆ ವೃಥಾ ಗಿಡ ಮರಗಳು ಚೆನ್ನಾಗಿ ಬೆಳೆಯದ ಕೆಲವು ಕಾಡುಗಳಲ್ಲಿ ಸಸಿ ಎಬ್ಬಿಸುವುದಕ್ಕೆಂದು ಸುಮ್ಮಸುಮ್ಮನೆ ಖರ್ಚು ಮಾಡುವುದನ್ನು ತಡೆಗಟ್ಟಬೇಕು. ಇರುವ ಒಳ್ಳೆಯ ಕಾಡುಗಳನ್ನು ಕಳ್ಳಕಾಕರು ಕಡಿಯದಂತೆ ನೋಡಿಕೊಂಡರೆ ಎಷ್ಟೋ ದುಡ್ಡು ಉಳಿತಾಯವಾಗುತ್ತದೆಂದು ಗೊತ್ತಾಗುತ್ತದೆ. ಎಷ್ಟೋ ಕಾಡುಗಳಲ್ಲಿ ಒಳಗೆಹೋಗಿ ನೋಡಿದರೆ ಎಷ್ಟೋ ಗಂಧ, ಹೊನ್ನೆ ಮುಂತಾದ ಮರಗಳನ್ನು ಕಡಿದು ಹಾಕಿರುವುದನ್ನು ಕಾಣಬಹುದು. ಇನ್ನು ಕೆಲವು ಕಾಡುಗಳು ನಮ್ಮ ಕಡೆ ಹೆಸರಿಗೆ ಮಾತ್ರ ಇವೆ. ನಮ್ಮ ಸಕಲೇಶಪುರ, ಬೇಲೂರು ಕಡೆಗಳಲ್ಲಿ ಎಷ್ಟೋ ಕಡೆ ಗೋಮಾಳಕ್ಕೆ ಲಾಯಕ್ಕಾದ ಗೋಮಾಳದ ಪಕ್ಕದ ಬಂಜರು ಜಮೀನುಗಳನ್ನು ಅರಣ್ಯದಲ್ಲಿ ಸೇರಿಸಿಕೊಂಡಿರುತ್ತಾರೆ. ಬೇಲೂರು ತಾಲ್ಲೂಕು ಕೂಳೆಹಳ್ಳಿ ಗ್ರಾಮದಹತ್ತಿರ 40 ಎಕರೆಗಳು ಗೋಮಾಳಕ್ಕೆ ಕೊಟ್ಟಮೇಲೆ ಇಂಥ ಜಮೀನುಗಳು ಇವೆ. ದರಖಾಸ್ತು ಕೊಟ್ಟದ್ದನ್ನು ವಜಾ ಮಾಡಿದ್ದಾರೆ. ಆದ್ದರಿಂದ ಆ ಊರಿಗೆ ಗೋಮಾಳವನ್ನು ಕೊಡುವುದಲ್ಲದೆ ದರಖಾಸ್ತಿನಮೇಲೆ ಕೊಟ್ಟಿದ್ದ ಕಾಡಿನ ಜಮೀನನ್ನು ಅವರಿಗೇ ಖಾಯಂಮಾಡಿ ಕೊಡಬೇಕು. ಅಲ್ಲದೆ, ಕಾಡಿನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ಪಾಪ, ನಮ್ಮ ಹೊಸ ಮಂತ್ರಿವರ್ಯರಿಗೆ ಮೈಸೂರು ದೇಶದ ವಿಚಾರ ಚೆನ್ನಾಗಿ ಗೊತ್ತಿಲ್ಲದಿರಬಹುದು. ಆದ್ದರಿಂದ

ಇದನ್ನೆಲ್ಲಾ ಗಮನಿಸಿ ಸರಿಯಾದ ರೀತಿಯಲ್ಲಿ ಅವರು ಕಾಡನ್ನು ಉತ್ತಮಪಡಿಸಬೇಕೆಂದು ಹೇಳುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅರಣ್ಯ ಪ್ರದೇಶದಿಂದ ಉತ್ಪತ್ತಿ ಹೆಚ್ಚಿಗೆ ಇದೆಯೆಂದು ನಾವು ಯಾವರೀತಿ ಬಡ್ಜೆಟ್ಟಿನಲ್ಲಿ ನೋಡುತ್ತಿದ್ದೇವೋ ಆ ರೀತಿಯಾಗಿ ವಾಸ್ತವವಾಗಿ ಇಲ್ಲವೆಂದು ನನ್ನ ಭಾವನೆ. ಕಾರಣ ಇಷ್ಟೆ. ಅರಣ್ಯದಿಂದ ಎಷ್ಟು ಉತ್ಪತ್ತಿಯಾಗಬೇಕಾಗಿತ್ತೋ ಅಷ್ಟಿಲ್ಲವೆಂದು ನಾನು ಹೇಳಬೇಕಾಗಿದೆ. ನಿಮ್ಮ ಆಡಳಿತ ಸಿಬ್ಬಂದಿಯ ಖರ್ಚು top heavy ಎಂದರೆ ತಪ್ಪಾಗಲಾರದು. ಉತ್ಪತ್ತಿ ಎಷ್ಟು ಬಂದರೂ ಖರ್ಚನ್ನು ತೂಗಿಸುವುದಕ್ಕೆ ವಿನಿಯೋಗಿಸಬೇಕಾಗಿರುವುದರಿಂದ ಉತ್ಪತ್ತಿ ಹೆಚ್ಚಾಗುವ ಹಾಗಿಲ್ಲ. ವ್ಯಕ್ತಿಗಳಿಗಾಗಿ ಅಧಿಕಾರಗಳನ್ನು ನಿರ್ಮಿಸುತ್ತಿದ್ದಾರೆಂದು ಹೇಳಬೇಕಾಗಿದೆ. ಹೀಗಾದರೆ ಉತ್ಪತ್ತಿಯಿಂದ ಮಿಗುತಾಯವನ್ನು ಕಾಣುವ ಹಾಗೆಯೇ ಇಲ್ಲ.

ಇನ್ನು ಯಾವರೀತಿ ಉತ್ಪತ್ತಿ ಕಡಮೆಯಾಗುತ್ತಿದೆಯೆಂಬುದನ್ನು ತಿಳಿಸುತ್ತೇನೆ. ಒಂದೇ ಒಂದು ಉದಾಹರಣೆ ಹೇಳಿದರೆ ಸಾಕೆಂದು ಕಾಣುತ್ತದೆ. ಬೊಂಬಿನ ಗಳುಗಳನ್ನು ಹರಾಜುಮಾಡುವ ಪದ್ಧತಿ ಈಗ ಸರ್ಕಾರದಲ್ಲಿದೆ. ಹೀಗೆ ಹರಾಜು ಮಾಡುವಾಗ ಎಲ್ಲರಿಗೂ ಅವಕಾಶ ಕೊಡದೆ ಆ ಪ್ರದೇಶದವರೇ ಹರಾಜಿನಲ್ಲಿ ನಿಲ್ಲಬೇಕೆಂದು ಕ್ಲುಪ್ತ ಮಾಡಿರುತ್ತಾರೆ. ದರವೂ ಕ್ಲುಪ್ತವಾಗಿರುತ್ತದೆ. ಬೇರೆಯವರು ಹೊರಗಡೆ ಹೆಚ್ಚಿನ ಬೆಲೆಗೆ ಮನೆ ಕಟ್ಟುವವರಿಗೆ, ಗೃಹ ಕೈಗಾರಿಕೆಗಳವರಿಗೆ ಬೆತ್ತದ ಕೆಲಸಮಾಡುವವರಿಗೆ ಮಾರುತ್ತಿದ್ದಾರೆ. ಆದರೂ ಅವರು ಮಾರುವಾಗ ಸರ್ಕಾರಿ ದರಕ್ಕಿಂತ ಕಡಮೆಯಾಗಿಯೇ ಕೊಡುತ್ತಿರುತ್ತಾರೆ. ಇದನ್ನು ನೋಡಿದರೆ ಸರ್ಕಾರದಲ್ಲಿ ಅವರಿಗೆ ಕೊಡುತ್ತಿರತಕ್ಕ ಬೆಲೆ ಕಡಮೆಯಾಗಿಯೇ ಇರಬೇಕು.

ಹಿಂದೆ ಪ್ರಜಾ ಸರ್ಕಾರದವರು ಬರುವುದಕ್ಕೆ ಮುಂಚೆ ಒಂದು ಗಾಡಿ ಮನೆಕಟ್ಟುವ ಗಳುಗಳನ್ನು ತರಬೇಕಾದರೆ ಎಂಟು ಆಣೆ ಕೊಟ್ಟರೆ ಸಾಕಾಗಿತ್ತು. ಒಂದು ಗಾಡಿಯೆಂದರೆ, 200 ಗಳುಗಳೆಂದರೂ 100ಕ್ಕೆ ಎಂಟು ಆಣೆ ಬೀಳುತ್ತಿತ್ತೆನ್ನಬಹುದು. ಇವೊತ್ತು ಅದರ ದರ 100ಕ್ಕೆ ರೂ. 7-8-0 ಇದೆ. ಅಂದರೆ ಸಾವಿರಕ್ಕೆ 75 ರೂಪಾಯಿಗಳಾದರೂ ಬೀಳುತ್ತದೆ. ಇಷ್ಟು ಬೆಲೆಯಾದರೆ ಗ್ರಾಮಾಂತರಗಳಲ್ಲಿ ಮನೆ ಕಟ್ಟಬೇಕೆಂದರೆ ಬಹಳ ಕಷ್ಟ. ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಬಹಳ ಕಡಮೆಯಿದೆ. ಇದನ್ನು ಪರಿಶೀಲನೆ ಮಾಡಿ ದರವನ್ನು ಕಡಮೆಮಾಡುವುದು ಒಳ್ಳೆಯದು.

ಈಗಾಗಲೇ ಮಾನ್ಯ ಸದಸ್ಯರನೇಕರು ಸರ್ಕಾರಿ ಕಾಡುಗಳು ಯಾವರೀತಿ ಉನ್ನತ ಸ್ಥಿತಿಯಲ್ಲಿಲ್ಲ, ಹಾಳಾಗುತ್ತಿವೆಯೆಂಬುದನ್ನು ತಿಳಿಸಿದ್ದಾರೆ. ಆ ಕಡೆ ಸರ್ಕಾರದ ಪರ ವಾದಮಾಡುತ್ತಾ ಕೆಲವರು ಹೇಳಿದರು, ಸರ್ಕಾರದವರು plantation ಮಾಡುವ ಏರ್ಪಾಡನ್ನು ಕೈಕೊಂಡಿದ್ದಾರೆ ಹಾಗೆ ಕೈಕೊಂಡಿದ್ದರೂ ಇಲ್ಲವೆಂದು ಹೇಳುವುದು ಸರಿಯಲ್ಲ ಎಂದು. ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳಿಂದಲೇನೋ $2\frac{1}{2}$ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಆದರೆ ಸರ್ಕಾರದವರು, ಆಗಾಗ್ಗೆ ಸರ್ವೆಮಾಡಿ ಎಲ್ಲೆಲ್ಲಿ plantation ಗಳನ್ನು ಮಾಡಬೇಕೆಂದು ನೋಡಿ ಮಾಡುತ್ತಿಲ್ಲ. ಅಧಿಕಾರಿಗಳು ಇಷ್ಟಪಟ್ಟ ಕಡೆ ಮಾಡಿದರೆ ಮಾಡಬಹುದು. ಎಷ್ಟು ಮರಗಳನ್ನು ಹಾಕಿದೆ, ಎಷ್ಟು ಮರಗಳು ಏಳುತ್ತಿವೆ ಎಂಬುದನ್ನು ಲೆಕ್ಕ ತೆಗೆದುಕೊಳ್ಳುವ ಏರ್ಪಾಡಿಲ್ಲ. ಅಲ್ಲದೆ, ಪ್ರತಿಯೊಂದು ಕಾಡಿನಲ್ಲೂ ಎಷ್ಟು ಪ್ರದೇಶ ಉಳಿದಿದೆ, ಎಷ್ಟು ವರ್ಷದಲ್ಲಿ ತೆಗೆದುಕೊಳ್ಳಬೇಕೆಂದು ಒಂದು ಸ್ಕೀಮನ್ನು ಕೂಡ ಮಾಡಬೇಕು.

ಸೌದೆ ವಿಷಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಅಭಾವವಿದೆ. ಸರ್ಕಾರದವರಿಗೆ ಸಿಟಿಗಳಲ್ಲಿ ಮಾತ್ರ ಸೌದೆಗೆ ಅಭಾವವಿದೆಯೆಂದು ಹೇಳಿ ಸಿಟಿಗಳಿಗೆ ಸರಬರಾಯಿ ಮಾಡುತ್ತಿದೆ. ಅಂದ ಮಾತ್ರಕ್ಕೇ ನೀವು ಗ್ರಾಮಾಂತರ ಪ್ರದೇಶಗಳಿಗೂ ಸರಬರಾಯಿ ಮಾಡಬೇಕೆಂದು ಹೇಳುತ್ತಿಲ್ಲ. ಅವರಿಗೆ ಗಾಡಿ ಮುಂತಾದ ವ್ಯವಸಾಯದ ಮುಟ್ಟುಗಳನ್ನಾದರೂ ಹೊಂದಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಹೊನ್ನೆ, ತೇಗ ಮುಂತಾದ ಒಳ್ಳೆಯ ಮರಗಳನ್ನು ತರುವುದಕ್ಕೆ ಅವಕಾಶ ಕೊಡದೆ ಇದ್ದರೂ, ಬೇರೆ ಜಾತಿಯ ಮರಗಳನ್ನಾದರೂ ಕಾಡಿನಿಂದ ತರುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಕಾಡಿನಿಂದ ಸೌದೆ ಕೊಡಲು ಪರ್ಮಿಟ್ ಕೊಡಲು ಕೆಲವರಿಗೆ ಅವಕಾಶ ಕೊಟ್ಟಿರುತ್ತಾರೆ, ಹೀಗಿರುವಾಗ ಸರ್ಕಾರಿ ಕೆಲವು ನೌಕರರು ಕೆಲವುವೇಳೆ ಏನು ಮಾಡುತ್ತಾರೆಂದರೆ, ಯಾರಾದರೂ ಪರ್ಮಿಟ್ ಕೇಳುವುದಕ್ಕೆ ಬಂದರೆ, 'ಪರ್ಮಿಟ್ ಏಕೆ, ಸುಮ್ಮನೆ ಎಂಟು ಆಣೆ ಏಕೆ ಖರ್ಚುಮಾಡಿಕೊಳ್ಳುತ್ತೀರಿ' ಎಂದು ಹೇಳಿ ಅವರನ್ನು ಕಾಡಿಗೆ ಸೌದೆ ತರಲು ಕಳುಹಿಸಿ ಕೊಟ್ಟುಬಿಡುತ್ತಾರೆ. ಅಲ್ಲಿ ಆತ ಸೌದೆ ಕಡಿಯುವ ಹೊತ್ತಿಗೆ ಬೇರೆ ನಾಲ್ಕು ಜನರು ಬಂದು ಆತನನ್ನು ಹಿಡಿದುಕೊಂಡು ಆತನಿಂದ 25 ರೂಪಾಯಿ, 30 ರೂಪಾಯಿ ಕಿತ್ತುಕೊಂಡು ಕಳುಹಿಸುತ್ತಾರೆ. ಇಂಥಾ ಕೇಸುಗಳನ್ನು ನಮ್ಮ ಕಡೆ ಚಾಮರಾಜನಗರದಲ್ಲಿ ನೋಡಬಹುದು. ಇದೇ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೂ ಅಲ್ಲಿನ ಜನಾಂಗಕ್ಕೂ ದೊಡ್ಡ ಹೋರಾಟವೇ ನಡೆಯುತ್ತಿದೆ. ಈಗಾಗಲೇ ಅವರ ಮೇಲೆ ಅನೇಕ ಕೇಸುಗಳು ಇವೆ. ರೈತರು ಅಧಿಕಾರಿಗಳ ಮೇಲೆಬಿದ್ದು ಹೊಡೆದಾಟಗಳಾಗಿವೆ. ಏಕೆ ಹೀಗಾಗುತ್ತಿದೆ, ಇದರಲ್ಲಿ ನಿಜಾಂಶವೇನೆಂಬುದನ್ನು ಯಾರೂ ನೋಡಿಲ್ಲ. ಆದ್ದರಿಂದ ಸೌದೆಯ ವಿಷಯದಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ಜನತೆ ತಮ್ಮ ಮೇಲೆ ಹೋರಾಟ ಹೂಡುತ್ತವೆಂದು ಹೇಳುತ್ತೇನೆ.

* ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಸ್ವಾಮಿ, ಅರಣ್ಯ ಸಂಪತ್ತನ್ನು ವೃದ್ಧಿ ಮಾಡಬೇಕೆಂಬ ವಿಚಾರದಲ್ಲಿ ಯಾರೂ repeat ಮಾಡಬೇಡಿ ಎಂದು ಹೇಳಿದಿರಿ. Repeat ಮಾಡದೆ ಹೇಳಬಹುದಾದ ವಿಷಯಗಳು ಯಾವುದೂ ಇಲ್ಲವಲ್ಲಾ ಎನ್ನಿಸುತ್ತಿದೆ. ಆದರೂ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದೆನ್ನಿಸುತ್ತದೆ.

ಕೋಲಾರ ಜಿಲ್ಲೆಯಲ್ಲಿ ಕೂಪ್‌ಸಿಸ್ಟಂ ಎಂದು ಪದ್ಧತಿ ಜಾರಿಯಲ್ಲಿದೆ. ಮೊದಲೇ ಅದು ಕಾಡಿಲ್ಲದ ಪ್ರದೇಶ, ಬಯಲು ಸೀಮೆ, ಮಳೆ ಕಡಮೆ, ಕ್ಷಾಮ ಬಂದಿದೆ, ಪರಿಹಾರಗಳನ್ನು ಕೊಡಬೇಕು ಎಂದು ಅನೇಕ ಸಾರಿ ಕೇಳುತ್ತಲೇ ಇದ್ದೇವೆ. ಹೀಗಿದ್ದರೂ ಸಹ ಸರ್ಕಾರದವರು ಅಲ್ಲಿರುವ ಕಾಡುಮರಗಳನ್ನು ಹರಾಜಿನಲ್ಲಿ ಕೂಪ್‌ಸಿಸ್ಟಂ ಎಂದು ಹೇಳಿ ಕಡಿಯುವುದಕ್ಕೆ ಅವಕಾಶಕೊಟ್ಟಿದ್ದಾರೆ. ಶ್ರೀಮಾನ್ ನಾರಾಯಣಗೌಡರ ಸ್ಥಳವಾದ ಬಾಗೇಪಲ್ಲಿ, ಶ್ರೀನಿವಾಸಪುರ ಮತ್ತು ಮಾಲೂರು ಪ್ರದೇಶಗಳಲ್ಲಿ ಕಂಟ್ರಾಕ್ಟರುಗಳಿಗೆ ಈ ರೀತಿ ಮರಗಳನ್ನು ಕಡಿದುಕೊಳ್ಳುವುದಕ್ಕೆ ಅವಕಾಶಕೊಟ್ಟು ಅಲ್ಲಿ ದೊಡ್ಡ ಅವಾಂತರವೇ ನಡೆಯುತ್ತಿರುವುದನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇವೆ. ಹೋದ ಅಧಿವೇಶನದಲ್ಲಿಯೇ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದರೂ ಸರ್ಕಾರದವರು ಏನೂ ಗಮನ ಕೊಡದಿರ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ವುದನ್ನು ನೋಡಿದರೆ ಅರಣ್ಯರೋದನವಾಗಿದೆ ಎಂದು ಹೇಳಬೇಕಾಗಿದೆ. ಸಿಕ್ಕಾಪಟ್ಟೆ ಮರಗಳನ್ನು ಕಡಿದು ಹಾಕಿರುವುದನ್ನು ಅನೇಕ ಮಿತ್ರರು ಹೇಳಿದ್ದಾರೆ. ಮಳೆಯೇ ಬರುವುದಿಲ್ಲ, ಮೊದಲೇ ಕ್ಷಾಮಪ್ರದೇಶವಾಗಿರುವಾಗ, ಇರುವ ಮರಗಳನ್ನೂ ಈ ರೀತಿ ಕಡಿದು ಹಾಕಿದರೆ, ಇನ್ನೂ ಕ್ಷಾಮ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ. ಕ್ಷಾಮ ಪರಿಹಾರ ಕೆಲಸಗಳಿಗೆ ಇನ್ನೂ ಹೆಚ್ಚು ದುಡ್ಡನ್ನು ಖರ್ಚುಮಾಡುವ ಅವಕಾಶ ಬರುತ್ತದೆಂದು ಹೇಳುತ್ತೇನೆ. ಮಾನ್ಯ ಅರಣ್ಯ ಮಂತ್ರಿಗಳು ಹೋದಸಲವೇ ಭರವಸೆಕೊಟ್ಟು ಕೂಪ್‌ಸಿಸ್ಟಂ ಮೇಲೆ ಹರಾಜು ಮಾಡಿ ಕಂಟ್ರಾಕ್ಟರುಗಳಿಗೆ ಕಡಿಯುವುದಕ್ಕೆ ಪರ್ಮಿಟ್ ಕೊಡುವುದನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದರು. ಕೂಪ್‌ಸಿಸ್ಟಂನ್ನು ನಿಲ್ಲಿಸಿ ಎಂದು ಅರಣ್ಯ ಇಲಾಖಾಧಿಕಾರಿಗಳಿಗೆ ಹೇಳಿದರೆ ಅವರು 'ಇದನ್ನು ಮಾಡದೆ ಇದ್ದರೆ ಆದಾಯ ಬರುವುದು ನಿಂತು ಹೋಗುತ್ತದೆ' ಎಂದು ಹೇಳುತ್ತಿರುತ್ತಾರೆ. ಆದ್ದರಿಂದ ಇಂಥ ಕ್ಷಾಮ ಪ್ರದೇಶಗಳಲ್ಲಾದರೂ ಮರಗಳನ್ನು ಕಡಿಯುವುದನ್ನು ನಿಲ್ಲಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಮೈಸೂರು ದೇಶದಲ್ಲಿ ಮತ್ತು ಬೇರೆ ಇನ್ನೂ ಅನೇಕ ಪ್ರದೇಶಗಳಲ್ಲಿ ಮರಗಳು ಬೇಕಾದಷ್ಟು ಬೆಳೆದಿದ್ದವು, ಆದರೆ ಅವುಗಳನ್ನೆಲ್ಲ ಬೆಂಗಳೂರು-ಮೈಸೂರು ಇತ್ಯಾದಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಸೌದೆಗಾಗಿ ಉಪಯೋಗಿಸಿದ್ದರಿಂದ ಈ ದಿವಸ ದೇಶದಲ್ಲಿದ್ದ ಅರಣ್ಯ ಸಂಪತ್ತೆಲ್ಲಾ ಹಾಳಾಗುತ್ತ ಬಂತು. ಈ ಕಾಡು ಹಾಳಾಗುವುದು ಹಾಗಿರಲಿ, ದೇಶದಲ್ಲಿ ಇತರ ಹಿಡುವಳಿ ಜಮೀನುಗಳಲ್ಲಿದ್ದ ಮರಗಳನ್ನೆಲ್ಲಾ ಕಡಿದುಹಾಕಿಬಿಟ್ಟಿದ್ದಾರೆ. ನಮ್ಮ ಮಾಲೂರು ತಾಲ್ಲೂಕಿನಲ್ಲಿ ಅನೇಕ ತೋಪುಗಳಿದ್ದವು ಅವುಗಳಲ್ಲಿ ಮಾವಿನ ಮರಗಳು, ನೇರಳೆ ಮರಗಳು ಇತ್ಯಾದಿ ಅನೇಕ ಜಾತಿಯ ಹಣ್ಣಿನ ಮರಗಳನ್ನೆಲ್ಲ ಕಡಿಸಿ, ಅವುಗಳನ್ನು ಸೌದೆಗಾಗಿ ಉಪಯೋಗಿಸಿಬಿಟ್ಟಿರುತ್ತಾರೆ. ಹೀಗೆಮಾಡಿ ನಮ್ಮ ಆ ಕ್ಷಾಮಪೀಡಿತ ಜಿಲ್ಲೆ ಮತ್ತಷ್ಟು ಕ್ಷಾಮಪೀಡಿತವಾಗುವಂತೆ ಮಾಡುತ್ತಿದ್ದಾರೆ. ಆದುದರಿಂದ ಈ ಅವ್ಯವಸ್ಥೆಗಳನ್ನೆಲ್ಲಾ ಸರ್ಕಾರದವರು ದಯವಿಟ್ಟು ನಿಲ್ಲಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಅರಣ್ಯಾಭಿವೃದ್ಧಿಯ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ದೇಶಾದ್ಯಂತವೂ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳಸಬೇಕೆಂದು ಪ್ರಯತ್ನ ಮಾಡಿದರು. ಆದರೆ ಹಾಗೆ ಆರಂಭಮಾಡಿದ ಪ್ರದೇಶದಲ್ಲಿ ಎಲ್ಲಿಯೂ ಒಂದು ಮರಗಿಡವೂ ಇಲ್ಲಿಯವರೆಗೂ ಇದ್ದಹಾಗೆ ಕಂಡುಬರುತ್ತಿಲ್ಲ. ಆದರೆ ಆಗಾಗ್ಗೆ ಸರ್ಕಾರದವರು ಈ ಮರಗಳನ್ನು ನೆಡತಕ್ಕ ಒಂದು ಕಾರ್ಯವನ್ನು ಅಂದರೆ 'ವನಮಹೋತ್ಸವ' ಎಂದು ಮಾಡಿ, ಮಹಾತ್ಮ ಗಾಂಧೀಜಿಯವರ ಜನ್ಮದಿನ ಅಥವಾ ಶ್ರೀಮನ್ಮಹಾರಾಜರವರ ಜನ್ಮದಿನೋತ್ಸವಗಳಲ್ಲಿ ಮರಗಳನ್ನು ಅನೇಕ ಕಡೆಗಳಲ್ಲಿ ನೆಟ್ಟರು. ಹಾಗೆ ನೆಟ್ಟಮೇಲೆ ಆ ಗಿಡಗಳ ಅಭಿವೃದ್ಧಿ ಏನಾಗಿದೆ ಎನ್ನುವುದಕ್ಕೆ ಮಾತ್ರ ಯಾರೂ ಗಮನಕೊಟ್ಟಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಶೆಟ್ಟಿಮಾದಮಂಗಲ ಎಂದು ಒಂದು ಗ್ರಾಮವಿದೆ. ಅಲ್ಲಿ ಈ ವನಮಹೋತ್ಸವವನ್ನು ನಡೆಸಿದ್ದ ಬಗ್ಗೆ ಇಂಡಿಯಾ ಸರ್ಕಾರದ ಮಾನ್ಯ ಮಂತ್ರಿಗಳಾಗಿದ್ದಂಥ ಶ್ರೀ ಕೆ. ಎಂ. ಮುನ್ಷಿಯವರು ಅಲ್ಲಿ ಒಂದು ದೊಡ್ಡ ಯೋಜನೆಯನ್ನೇ ಹಾಕಿ ಆ ದಿವಸ ಒಬ್ಬರಿಗೆ ಅವರು ತೋರಿಸಿದ್ದ ಶ್ರದ್ಧೆಗಾಗಿ ಅಖಿಲ ಭಾರತ ಪ್ರಾಶಸ್ತ್ಯದ ಲೆವಲ್ಲಿನಲ್ಲಿ ಒಂದು ಪ್ರಥಮ ಬಹುಮಾನವನ್ನೇ ಕೊಟ್ಟರು; ಮತ್ತು ಆ ದಿನ ಆ ಮಂತ್ರಿಗಳೂ ಸಹ ಅಲ್ಲಿ ಎರಡು ಗಿಡಗಳನ್ನು ನೆಟ್ಟರು. ಆದರೆ ಹಾಗೆ ಆ ದಿವಸ ಅವರೆಲ್ಲರೂ ಸೇರಿ ಎಷ್ಟು ಗಿಡಗಳನ್ನು ನೆಟ್ಟರೋ ಆ ಗಿಡಗಳಪ್ಪೈಕಿ ಈ ದಿವಸ ಒಂದೂ ಇಲ್ಲ. ಶ್ರೀ ಮುನ್ಷಿಯವರು ನೆಟ್ಟಿದ್ದಂಥ ಎರಡು ಗಿಡಗಳನ್ನು ಮುನ್ಷಿ ಮಕ್ಕಳೆಂಬುದಾಗಿ ಬಹಳ ಶ್ರದ್ಧೆಯಿಂದ ಸಾಕುತ್ತಿದ್ದರು. ಈ ದಿವಸ ಆ ಮುನ್ಷಿ ಮಕ್ಕಳೂ ಕೂಡ ಅಲ್ಲಿಲ್ಲ. ಹೀಗೆ ಕೇವಲ ಮರಗಳನ್ನು ನೆಡುವುದೇ ಒಂದು ದೊಡ್ಡ ಕೆಲಸವಲ್ಲ. ಅವನ್ನು ಅಭಿವೃದ್ಧಿಗೆ ತರತಕ್ಕದ್ದರ ಕಡೆಗೆ ಹೆಚ್ಚು ಗಮನ ಕೊಡಬೇಕು.

ಮತ್ತೊಂದು ವಿಚಾರ, ನಾವು ಈ ಬೆಂಗಳೂರು-ಮದ್ರಾಸ್ ರಸ್ತೆಯಲ್ಲಿ-ವೈಟ್‌ಫೀಲ್ಡ್ ಕಡೆ ಹೋಗುತ್ತಿದ್ದರೆ ರಸ್ತೆಯಲ್ಲಿರತಕ್ಕಂಥ ಮುಕ್ಕಾಲು ಭಾಗದ ಮರಗಳನ್ನೆಲ್ಲಾ ಜನರು ಕಡಿದುಹಾಕಿರತಕ್ಕದ್ದು ಕಂಡು ಬರುತ್ತದೆ. ಇದನ್ನೆಲ್ಲಾ ನೋಡಿದರೆ ಇದನ್ನೆಲ್ಲಾ ಕೇಳತಕ್ಕವರುಯಾರೂ ಇಲ್ಲವೋ ಏನೋ ಅನ್ನುವಂತೆ ಕಾಣುತ್ತದೆ. ನಾವು ಮರಗಳನ್ನು ಒಂದು ಶಿಸ್ತಿನಿಂದ ಬೆಳೆಸುತ್ತಿರುವುದಕ್ಕೆ ಬದಲಾಗಿ ಒಂದು ಶಿಸ್ತಿನಿಂದ ಬೆಳೆಸಿದ್ದ ಮರಗಳನ್ನು ಕಡಿಯುವುದಕ್ಕೆ ಪ್ರಾರಂಭಿಸಿದ್ದೇವೆಂದು ಖಚಿತವಾಗಿ ಕಂಡುಬರುತ್ತಿದೆ. ದೇಶದಲ್ಲಿ ಮಳೆ ಬರಬೇಕಾದರೆ, ದೇಶಾಭಿವೃದ್ಧಿಯಾಗಬೇಕಾದರೆ, ದೇಶದಲ್ಲಿ ದವಸ ಧಾನ್ಯಗಳು ಸಮೃದ್ಧಿಯಾಗಿ ಬೆಳೆಯಬೇಕಾಗಿದ್ದರೆ, ದೇಶದಲ್ಲಿ ಜನರು ನೆಮ್ಮದಿಯಿಂದ ಜೀವನ ನಡೆಸಬೇಕಾಗಿದ್ದರೆ ಈ ಅರಣ್ಯ ಸಂಪತ್ತನ್ನು ನಾವು ಒಂದು ಯೋಜನೆಯ ಪ್ರಕಾರ ಬೆಳೆಸಬೇಕು, ಅದರಿಂದ ದೇಶದಲ್ಲಿ ಮಳೆ ಬೆಳೆಗಳಾಗುತ್ತವೆ ಎಂದು ಹೇಳುತ್ತಿದ್ದರೆ, ಹಾಕಿದ್ದ ಮರಗಳನ್ನೇ ಒಂದು ಯೋಜನೆಯ ಪ್ರಕಾರ ಕಡಿದುಹಾಕುತ್ತ ಬಂದಿದ್ದಾರೆ. ಹೀಗೆ ಜನರು ಸಿಕ್ಕಾಪಟ್ಟೆ ರಸ್ತೆ ಮರಗಳನ್ನು ಕಡಿದುಹಾಕಿರತಕ್ಕ ರೆಂಬೆಗಳು ಈ ದಿವಸ ಕೂಡ ಎಷ್ಟೋ ಅಲ್ಲಿ ಬಿದ್ದಿರುತ್ತವೆ. ಹೀಗೆ ಕಾನೂನಿಗೆ ವಿರೋಧವಾಗಿ ವರ್ತಿಸತಕ್ಕ ಜನರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಮರಗಳು ಹಾಳಾಗದಂತೆ ಅವುಗಳ ಅಭಿವೃದ್ಧಿಯ ಕಡೆಗೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ.

* ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಈ ಅರಣ್ಯ ಸಂಪತ್ತಿನ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ದಿವಸ ಈ ಅರಣ್ಯ ಸಂಪತ್ತನ್ನು ನಾವು ಅಭಿವೃದ್ಧಿಪಡಿಸದೆ ಇದ್ದರೂ ಚಿಂತೆ ಇಲ್ಲ. ಆದರೆ ಅನೇಕ ಕಾಡುಗಳನ್ನು ಇದ್ದಿಲು ಕೂಪುಗಳಿಗೆ ಕೊಡುತ್ತಿರುವುದರಿಂದ ವನಸಂಪತ್ತು ಹಾಳಾಗುತ್ತಿದೆ. ಸರ್ಕಾರದವರು ಮೊದಲು ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಈ ಕಾಡುಗಳು ಹಾಳಾಗುತ್ತಿರುವುದಕ್ಕೆ ಮತ್ತೂ ಒಂದು ದೊಡ್ಡ ಕಾರಣವಿದೆ. ಬೇಸಿಗೆ ಕಾಲದಲ್ಲಿ ಆಗಾಗ್ಗೆ ಕಾಡುಗಳಿಗೆ ಅಲ್ಲಲ್ಲೇ ಬೆಂಕಿ ಬೀಳುತ್ತದೆ. ಅದನ್ನು ಇಲಾಖೆಯವರು ಮುಂಜಾಗ್ರತೆಯಿಂದ ತಡೆಗಟ್ಟದೆಯಿರುವುದರಿಂದ ವಿಶೇಷವಾಗಿ ಕಾಡೆಲ್ಲಾ ಸುಟ್ಟುಹೋಗುತ್ತದೆ. ಆದುದರಿಂದ ಹೀಗೆ ಈ ಕಾಡುಕಿಚ್ಚಿನಿಂದ ವನ ಬೆಂದು ಹೋಗುತ್ತಿರುವುದನ್ನು ತಪ್ಪಿಸತಕ್ಕ ಬಗ್ಗೆ ಸರ್ಕಾರದವರು ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಹೀಗೆ ಇರತಕ್ಕ ಕಾಡು ಒಂದು ಕಡೆಯಿಂದ ಕ್ರಮವಾಗಿ ಹಾಳಾಗುತ್ತಿರುವಾಗ ಅದನ್ನು ಮತ್ತೊಂದು ಕಡೆಯಿಂದ ಬೆಳೆಸತಕ್ಕದ್ದನ್ನೂ ಕೂಡ ಸರಿಯಾಗಿ ನಡೆಸದೆ ಇರುವುದರಿಂದ

ಈ ದಿವಸ ನಮ್ಮ ದೇಶದಲ್ಲಿ ಈ ಕಾಡು ಪ್ರದೇಶವು ಬಹಳ ಕಮ್ಮಿಯಾಗುತ್ತಾ ಬಂದಿದೆ. ಈ ನಾನಾ ಕಾರಣಗಳಿಂದ ನಮಗೆ ಅರಣ್ಯ ಬಾಬಿನಿಂದ ಬರುತ್ತಿದ್ದಂಥ ಆದಾಯ ಕಡಮೆಯಾಗಿರುತ್ತದೆಯೆಂದು ಮಾನ್ಯ ಮಂತ್ರಿಗಳೂ ಕೂಡ ಹೇಳಿದ್ದಾರೆ. ಈಗ ಮೈಸೂರು ಸಂಸ್ಥಾನದಲ್ಲಿ ಸಾಧಾರಣವಾಗಿ ಅನೇಕ ಕಡೆಗಳಲ್ಲಿ ಕಾಡನ್ನು ತಪ್ಪಿಸಿ ಆ ಪ್ರದೇಶವನ್ನು ವ್ಯವಸಾಯಕ್ಕೆ ಕೊಡುತ್ತಿದ್ದಾರೆ. ಆದರೆ ಮತ್ತೆ ಕೆಲವು ಪ್ರದೇಶಗಳಲ್ಲಿ ಹಾಗೆ ಹೆಸರಿಗೆ ಮಾತ್ರ ಕಾಡಾಗಿದ್ದರೂ, ಅಲ್ಲಿ ಮರಗಳೊಂದೂ ಇರುವುದಿಲ್ಲ. ಅಂಥ ಅರಣ್ಯದ ಪಕ್ಕದಲ್ಲಿ ರೆವಿನ್ಯೂ ಖಾತೆಗೆ ಸೇರಿರತಕ್ಕ ಪಾಳು ಜಮೀನೇನಾದರೂ ಇದ್ದು, ಅದಕ್ಕೆ ಅರ್ಜಿಹಾಕಿ ಸಾಗುವಳಿಗೆ ಕೊಡಬೇಕೆಂದು ಕೇಳಿಕೊಂಡರೆ, ಈ ಫಾರೆಸ್ಟ್ ಇಲಾಖೆಯವರು ಆ ಜಮೀನು ಫಾರೆಸ್ಟಿಗೆ ಪಕ್ಕದಲ್ಲಿರುತ್ತದೆಯೆಂಬ ಒಂದು ನೆಪಹಾಕಿ ಆ ಜಮೀನನ್ನು ವ್ಯವಸಾಯಕ್ಕೆ ಕೊಡದಂತೆ ಅಡ್ಡಿಪಡಿಸುತ್ತಿದ್ದಾರೆ. ಚಾಮರಾಜನಗರ ತಾಲ್ಲೂಕಿನಲ್ಲಿ ಹೀಗಾಗಿದೆ. ಆ ತಾಲ್ಲೂಕಿನಲ್ಲಿ ಕೆಲವು ಕಡೆ ಶೇಕಡ 15 ರಷ್ಟು ಕಾಡು ಇಲ್ಲದಿದ್ದರೂ ಪಕ್ಕದ ಜಮೀನನ್ನು ವ್ಯವಸಾಯಕ್ಕೆ ಕೊಡದಂತೆ ಅಡ್ಡಿಪಡಿಸುತ್ತಿದ್ದಾರೆ.

ಇನ್ನು ಅರಣ್ಯ ಇಲಾಖೆಯವರು ಕೆಲವು ರಸ್ತೆಗಳನ್ನು ಮೇಂಟೇನ್ ಮಾಡುತ್ತಿದ್ದಾರೆ. ಬಿಳಿಗಿರಿರಂಗನಬೆಟ್ಟ ಮತ್ತು ಯಳಂದೂರು ಫಾರೆಸ್ಟಿನಲ್ಲಿರತಕ್ಕಂಥ ರಸ್ತೆಗಳ ವಹಿವಾಟ ಮೂರು ಇಲಾಖೆಗಳ ಜವಾಬ್ದಾರಿಗೆ ಸೇರಿರುತ್ತದೆ. ಅಂದರೆ, ಬಿಳಿಗಿರಿರಂಗನ ಬೆಟ್ಟದ ಮುಜ್ರಾಯಿ ಇಲಾಖೆ, ಫಾರೆಸ್ಟ್ ಇಲಾಖೆ ಮತ್ತು ಆ ತಾಲ್ಲೂಕಿನ ಮುನಿಸಿಪಾಲಿಟಿ, ಹೀಗೆ ಮೂರು ಬಾಬುಗಳವರು ಸೇರಿ ಆ ರಸ್ತೆಯ ಅಭಿವೃದ್ಧಿಯನ್ನು ಮಾಡಬೇಕಾಗಿದೆ. ಆದರೆ ಇವರು ಯಾರೊಬ್ಬರೂ ಆ ರಸ್ತೆಗಳನ್ನು ಸರಿಯಾಗಿ ನಿಗಾ ಕೊಟ್ಟು ನೋಡಿಕೊಳ್ಳದಿರುವುದರಿಂದ ಈ ದಿವಸ ಆ ರಸ್ತೆಗಳು ಕಾಲುದಾರಿಗಿಂತಲೂ ನಿಕೃಷ್ಟವಾಗಿ ಹೋಗಿ ಜನರು ಕಾಲಿನಲ್ಲಿ ಕೂಡ ನಡೆಯಲು ಅವಕಾಶವಿಲ್ಲದಷ್ಟು ಕೆಟ್ಟುಹೋಗಿ ಜನರಿಗೆ ಬಹಳ ತೊಂದರೆಯಾಗಿದೆ. ಇಲ್ಲಿಯವರೆಗೂ ಈ ರಸ್ತೆಗಳನ್ನೆಲ್ಲಾ ಬಿಳಿಗಿರಿರಂಗನಬೆಟ್ಟದ ಫಾರೆಸ್ಟಿನಿಂದ ಬರುತ್ತಿದ್ದಂಥ ಉತ್ಪತ್ತಿಯಿಂದಲೇ ರಿಪೇರಿ ವಗೈರೆಗಳನ್ನು ಫಾರೆಸ್ಟ್ ಇಲಾಖೆಯವರೇ ನಡೆಸುತ್ತಿದ್ದರು. ಈಗಲೂ ಕೂಡ ಅದೇ ರೀತಿ ಈ ರಸ್ತೆಗಳನ್ನು ರಿಪೇರಿ ಮಾಡುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಬಿಳಿಗಿರಿರಂಗನ ಬೆಟ್ಟದ ದೇವಾಲಯಕ್ಕೆ ಬಹಳ ಜಮೀನನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಫಾರೆಸ್ಟ್ ಜಮೀನಿನಿಂದಲೇ ಸುಮಾರು 20 ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಉತ್ಪತ್ತಿ ಬರುತ್ತದೆ. ಆದರೆ ಈ ಉತ್ಪತ್ತಿಯಲ್ಲಿ 1937ನೆಯ ಇಸವಿಯ ಕಾನೂನು ಪ್ರಕಾರ ಆ ದೇವಸ್ಥಾನಕ್ಕೆ ಕೇವಲ ಐದೂವರೆ ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಉಳಿದ ಮೊಬಲಗನ್ನೆಲ್ಲಾ ಲೀಗಲ್ ಗಾರ್ಡಿಯನ್‌ಗೆ ಹೋಗುತ್ತಿದೆ. ಹೀಗಾಗಿ ಈ ದಿವಸ ಆ ದೇವಸ್ಥಾನ ನಡೆಸಬೇಕಾಗಿದ್ದಂಥ ಕೆಲಸ ಕಾರ್ಯಗಳಿಗಾಗಿ ಬಹಳ ತೊಂದರೆಯಾಗಿದೆ. ಈ ವಿಚಾರವನ್ನು ಸರ್ಕಾರದವರು ಕೂಡಲೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಆ ದೇವಸ್ಥಾನಕ್ಕೆ ಸೇರಿದ್ದಂಥ ಜಮೀನಿನಲ್ಲಿ ಆ ಲೀಗಲ್ ಗಾರ್ಡಿಯನ್‌ಗೆ ಐವತ್ತು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಈ ಅಂಶವನ್ನೂ ಕೂಡ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ನನ್ನ ಮಿತ್ರರಾದ ಶ್ರೀ ಎಂ. ಚಿಕ್ಕಲಿಂಗಯ್ಯನವರೂ ಕೂಡ ಈ ಬಗ್ಗೆ ಎರಡು-ಮೂರು ವಿಷಯಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಹಿಂದುಳಿದ ಪಂಗಡದವರಿಗೆ ಸಾಕಾದಷ್ಟು ಉತ್ತೇಜನ ದೊರೆಯುತ್ತಿಲ್ಲ. ಇಲಾಖೆಯ ಮುಖ್ಯಾಧಿಕಾರಿಗಳಲ್ಲಿ ಇವರ ಬಗ್ಗೆ ಅಸಕ್ತಿ ಕಡಮೆಯಾಗಿದೆಯೋ ಅಥವಾ ಈ ನಿಮ್ನತರಗತಿಗಳವರಲ್ಲಿ ಅಂಥ ದಕ್ಷತೆ ಇಲ್ಲವೆಂತಲೋ ಅದು ಏನೆಂಬುದೇ ನನಗಂತೂ ತಿಳಿಯದಾಗಿದೆ. ಆದರೆ ಈ ನಿಮ್ನತರಗತಿಗಳವರಿಗೆ ಬಾಯಿನಲ್ಲಿ ತೋರಿಸುತ್ತಿರುವ ಸಹಾನುಭೂತಿಯನ್ನು ಕಾರ್ಯತಃ ತೋರಿಸಬೇಕೆಂದು ಹೇಳುತ್ತೇನೆ. ಈಗ ನಿಮ್ನ ಪಂಗಡದವರಿಗೆ ಶಿವಮೊಗ್ಗಾದಲ್ಲಿರತಕ್ಕ ಒಂದು ಮರದ ಕಾರ್ಖಾನೆಯಿಂದ ಕಿಟಿಕಿ ಬಾಗಿಲು ಇತ್ಯಾದಿಗಳನ್ನು ತರಿಸಿ ಸರ್ಕಾರದವರು ಸರಬರಾಯಿ ಮಾಡುತ್ತಿದ್ದಾರೆ. ಆದರೆ ಈ ಬಾಗಿಲು ಕಿಟಕಿಗಳೆಲ್ಲಾ ಡೀಲ್‌ವುಡ್ ಹಲಗೆಗಿಂತಲೂ ಕೀಳಾಗಿದ್ದು ಬಹಳ ಕಡಮೆ ದರ್ಜೆಯ ಸಾಮಾನುಗಳಾಗಿರುತ್ತವೆ. ಹಾಗಿದ್ದರೂ ಬಾಗಿಲೊಂದಕ್ಕೆ ಅರವತ್ತು ರೂಪಾಯಿಗಳ ಬೆಲೆಯನ್ನು ಹಾಕಿದ್ದಾರೆ. ಈ ಸಾಮಾನುಗಳು ಹೆಚ್ಚುಕಾಲ ಬಾಳಿಕೆ ಬರುವುದಿಲ್ಲ. ಆದುದರಿಂದ ಹೀಗೆ ಈ ನಿಮ್ನತರಗತಿಗಳವರಿಗೆ ಸರಬರಾಯಿ ಮಾಡತಕ್ಕಂಥ ಸಾಮಾನುಗಳನ್ನು ಹೆಚ್ಚುಕಾಲ ಬಾಳಿಕೆ ಬರುವಂಥ ರೀತಿಯಲ್ಲಿ ಒಳ್ಳೆಯ ಮರದಿಂದ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಮಾಫಿ ಲೈಸೆನ್ಸ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ದಿವಸ ಈ ಮಾಫಿ ಲೈಸೆನ್ಸನ್ನು ತರುವ ವಿಚಾರದಲ್ಲಿ ಜನರಿಗೆ ಬಹಳ ಕಷ್ಟಗಳೂ ಮತ್ತು ತೊಂದರೆಗಳೂ ಇವೆ. ತಾಲ್ಲೂಕು ಆಫೀಸಿಗೆ ಅರ್ಜಿ ಹಾಕಿಕೊಳ್ಳಬೇಕು. ಅನಂತರ ಅದು ಫಾರೆಸ್ಟ್ ಇಲಾಖೆಗೆ ಬರಬೇಕು. ಅಲ್ಲಿಂದ ಈ ಮಾಫಿ ಲೈಸೆನ್ಸು ಜನರಿಗೆ ಸಿಕ್ಕಬೇಕು. ಇದೆಲ್ಲ ಬಹಳ ಕಷ್ಟದ ಕೆಲಸ. ಇದಕ್ಕೆ ಬದಲಾಗಿ ತಾವು ಆ ಮಾಫಿ ಲೈಸೆನ್ಸ್ ಬಗ್ಗೆ ಅವರಿಗೆ ಏನೊಂದು ರಿಯಾಯಿತಿಗಳನ್ನು ಕೊಡುತ್ತಿದ್ದರೋ ಅಷ್ಟೇ ರಿಯಾಯಿತಿಗಳನ್ನು ತೋರಿಸಿ ಹಾಲಿ ಡಿಪೋಗಳಲ್ಲಿ ಇರತಕ್ಕಂಥ ಕಾಡು ಜಾತಿ ಮರಗಳಲ್ಲೇ ಅವರಿಗೆ ಸಹಾಯ ದೊರಕುವಂತೆ ಮಾಡಿದರೆ ಅನುಕೂಲವಾಗಿರುತ್ತದೆಂದು ತಿಳಿಸಲಿಚ್ಛಿಸುತ್ತೇನೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಈ ಕಾಡುಗಳಿಂದ ಬರತಕ್ಕ, ಅಂದರೆ ಈ ಹುಣಸೇಹಣ್ಣು, ಅಳಲೇಕಾಯಿ ಇತ್ಯಾದಿ ವಸ್ತುಗಳಿಂದ ಬರತಕ್ಕ ಆದಾಯ ಸರಿಯಾಗಿ ಬರುತ್ತಿಲ್ಲ. ಇವುಗಳನ್ನು ನ್ಯಾಯವಾದ ಬೆಲೆಗೆ ಹರಾಜು ಮಾಡುತ್ತಿಲ್ಲ. ಇನ್ನೂ ಸಹ ಆ ಹಳೆಯ ಮಾಮೂಲು ಪದ್ಧತಿಯಂತೆಯೇ ಇದು ನಡೆದುಕೊಂಡು ಹೋಗುತ್ತಿದೆ. ಇದರ ಬಗ್ಗೆ ಟೆಂಡರುಗಳನ್ನು ಕರೆಯುವುದರಲ್ಲಿ ಬಹಳ ಲೀಕೇಜ್ ಆಗುತ್ತಿದೆ. ಈ ಈ ಅಂಶಗಳನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ತಾವು ಈ ವನಮಹೋತ್ಸವದ ವಿಚಾರದಲ್ಲಿ ಎಲ್ಲಿ ಮಳೆ ಹೆಚ್ಚಾಗಿ ಬೀಳುತ್ತದೆಯೋ ಅಂಥ ಪ್ರದೇಶದಲ್ಲೇ ಕಾಡನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಅರಣ್ಯ ಸಂಪತ್ತು ವಿಶೇಷವಾಗಿದ್ದರೂ ಕೂಡ ಇದನ್ನು ಅಭಿವೃದ್ಧಿಗೆ ತರಲು ಅರಣ್ಯ ಇಲಾಖೆಯಲ್ಲಿ ದಕ್ಷತೆಯಿಲ್ಲದಿರುವಂಥ ಜನರನ್ನು ಇಟ್ಟುಕೊಂಡಿರುವುದರಿಂದ ನಮಗೆ ಈ ದಿವಸ ಇದರಿಂದ ಬರತಕ್ಕಂಥ

(ಶ್ರೀ ಸಿ. ಟಿ. ಹನುಮಂತಯ್ಯ.)

ಉತ್ಪತ್ತಿ ಬಹಳ ಕಡಮೆಯಾಗಿದೆ. ಈಗ ಈ ಇಲಾಖೆಯಲ್ಲಿ ಅಲ್ಲಲ್ಲೇ ಕೆಲವು ಮುಖ್ಯ ಅಧಿಕಾರಿಗಳನ್ನೂ ಮತ್ತು ಅವರ ಕೈಕೆಳಗೆ ಗಾರ್ಡುಗಳು ಎಂಬ ಕೆಲವು ಸಿಬ್ಬಂದಿಯನ್ನ ಇಟ್ಟಿದ್ದಾರೆ. ಈ ಸಿಬ್ಬಂದಿಯಲ್ಲಿ ಕೆಲವು ಸಣ್ಣಪುಟ್ಟ ಅಧಿಕಾರಿಗಳಲ್ಲದೆ ಈ ಗಾರ್ಡುಗಳೂ ಕೂಡ ಸೇರಿರುತ್ತಾರೆ. ಈ ಗಾರ್ಡುಗಳು ಅರಣ್ಯದಲ್ಲಿರತಕ್ಕಂಥ ಶ್ರೀಗಂಧ ಮತ್ತು ಜೇನುತುಪ್ಪ ಇತ್ಯಾದಿಗಳನ್ನೆಲ್ಲಾ ಆ ಅಧಿಕಾರಿಗಳ ಕಣ್ಣಿಗೆ ಬೀಳದಂತೆ ಸಾಗಿಸಿಬಿಡುತ್ತಿದ್ದಾರೆ. ಇದರಿಂದ ಲುಕ್ಸಾನು ಬಹಳವಾಗಿ ಆಗುತ್ತಿದೆ. ಈಗ ಈ ಇಲಾಖೆಯವರು ಸಾಮಾನ್ಯವಾಗಿ ರೈತರಿಗೆ ದಿನವಹಿ ಕೆಲಸಕಾರ್ಯಗಳಿಗೆ ಬೇಕಾಗಿರತಕ್ಕಂಥ ನೇಗಿಲು, ಈಚು, ನೊಗ ಇತ್ಯಾದಿಗಳಿಗೂ ಸಹ ಮರವನ್ನು ತೆಗೆದುಕೊಂಡು ಹೋಗಲು ಅವಕಾಶ ಕೊಡುತ್ತಿಲ್ಲ. ಈ ರೈತರೇನೂ ಆ ಕಾಡಿನಲ್ಲಿರತಕ್ಕಂಥ ನಂದಿ, ತೇಗ, ಹೆಬ್ಬಲಸು, ಕಲ್ಲು ತೇಗ ಇತ್ಯಾದಿ ಮರಗಳನ್ನು ಕಡಿಯುವುದಕ್ಕಾಗಿ ಕಾಡಿಗೆ ಹೋಗುವುದಿಲ್ಲ. ಆದರೆ ರೈತನಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ವ್ಯವಸಾಯದ ಉಪಕರಣಗಳಿಗೆ ಬೇಕಾದ ಮರ ಮುಂಡಿಗಳನ್ನು ತರುವುದಕ್ಕೂ ಸಹ ಇಲಾಖೆಯವರು ಅವಕಾಶ ಕೊಡುತ್ತಿಲ್ಲ. ಈ ಹಿಂದೆ ಇದಕ್ಕೆಲ್ಲಾ ಅವಕಾಶವನ್ನು ಕೊಟ್ಟಿದ್ದರು. ಈಗ ಅದನ್ನು ತಪ್ಪಿಸಿದ್ದಾರೆ. ಈಗ ಹಿಂದಿನಂತೆಯೇ ರೈತರ ಉಪಯೋಗಕ್ಕೆ ಅತ್ಯಗತ್ಯವಾದಂಥ ಮರಗಳನ್ನು ಕಾಡಿನಿಂದ ತರುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಲ್ಲಿಯವರೆಗೆ ಎಲ್ಲಿ ಮಳೆ ಹೆಚ್ಚಾಗಿ ಆಗುತ್ತಿತ್ತೋ ಅಲ್ಲಿ ಮಳೆಯಾಗುತ್ತಿಲ್ಲ. ಹೀಗಾಗಿದ್ದರೂ ಸರ್ಕಾರದವರು ಕಾಡಿನಲ್ಲಿರತಕ್ಕಂಥ ಮರಗಳನ್ನು ಇದ್ದ್ದಲಿಗಾಗಿ ಕಡಿಯುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇದರಿಂದ ಆಕಾಶದಿಂದ ಬರುತ್ತಿದ್ದ ಮಳೆ ಹಾಗೆಯೇ ಗಗನಕ್ಕೆ ಹಾರಿಹೋಗಿದೆ. ಜನರಿಗೆ ತುಂಬ ತೊಂದರೆಯಾಗಿದೆ. ಹೀಗಾಗಿ ಈ ದಿವಸ ಮಳೆ ಮೋಡಗಳೇ ಇಲ್ಲದಂತಾಗಿ ದೇಶದಲ್ಲಿರತಕ್ಕ ರೈತನಿಗೆ ಆಹಾರ ಧಾನ್ಯಗಳನ್ನು ಕೂಡ ಬೆಳೆಯಲು ಸಾಧ್ಯವಿಲ್ಲದಂತಾಗಿ, ದೇಶಾದ್ಯಂತವೂ ಆಹಾರಕ್ಕೆ ತುಂಬ ಬಡಿದಾಟವಾಗಿದೆ. ಉದಾಹರಣೆಗಾಗಿ ಹೇಳುವುದಾದರೆ ನಮ್ಮ ಆ ಶಿರಾ ತಾಲ್ಲೂಕಿನಲ್ಲಿ ಬುಕ್ಕಾಪಟ್ಟಣದ ಸುತ್ತಮುತ್ತಲೂ ಬಹಳ ಕಾಡಿತ್ತು. ಈಗ ಅದನ್ನೆಲ್ಲಾ ಕಡಿಸಿಬಿಟ್ಟಿದ್ದಾರೆ. ಹೀಗಾಗಿ ಈ ದಿವಸ ಆ ಗ್ರಾಮದ ಕೆರೆಯು ತುಂಬುತ್ತಿಲ್ಲ. ಅಲ್ಲಿ 2-3 ವರ್ಷಗಳಿಗೊಮ್ಮೆ ಕೂಡ ಒಂದು ಭತ್ತದ ಬೆಳೆ ಸರಿಯಾಗಿ ಆಗುತ್ತಿಲ್ಲ. ದೇವರಾಯನದುರ್ಗದ ಬಳಿ ಕೂಡ ಹೀಗೆ ಆಗಿದೆ. ಅಲ್ಲಿಯೂ ಕೂಡ ಇದ್ದಿಲನ್ನು ತಯಾರಿಸಲು ಕಾಡನ್ನು ಕಡಿಯುವುದಕ್ಕೆ ಅಪ್ಪಣೆಕೊಟ್ಟಿದ್ದಾರೆ. ಇದರಿಂದ ದೇಶದಲ್ಲಿರತಕ್ಕ ರೈತರು ಮಳೆ ಬೆಳೆಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಈ ಅರಣ್ಯಗಳನ್ನು ಸರ್ಕಾರದವರು ಸರಿಯಾಗಿ ಬೆಳಸುತ್ತಿದ್ದಾಗ ದೇಶದಲ್ಲಿ ಸರಿಯಾಗಿ ಮಳೆ ಬೆಳೆಗಳಾಗುತ್ತಿದ್ದುವು ಈಗ ಮಳೆಗಾಲದಲ್ಲೇ ಮಳೆ ಬಾರದಂತಾಗಿದೆ. ಇನ್ನು ಬೇಸಿಗೆಯಲ್ಲಂತೂ ಕುಡಿಯುವುದಕ್ಕೇ ನೀರಿರುವುದಿಲ್ಲ. ಹೀಗೆಲ್ಲಾ ಕಾಡನ್ನು ಹಾಳುಮಾಡುವುದು ಸರಿಯಾದದ್ದಲ್ಲ. ಇದನ್ನು ಸರ್ಕಾರದವರು ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ಮರಗಳಿಲ್ಲದ ಅರಣ್ಯವನ್ನು ವ್ಯವಸಾಯಕ್ಕಾದರೂ ಬಿಡಿಸಿಕೊಟ್ಟರೆ ರೈತನಿಗಾದರೂ ಸ್ವಲ್ಪ ಅನುಕೂಲವಾಗಿ ದೇಶದಲ್ಲಿ ಹೆಚ್ಚು ಆಹಾರ ಬೆಳೆಸಲು ಅನುಕೂಲವಾಗುತ್ತದೆ. ಇದರಿಂದ ದೇಶದ ರಕ್ಷಣೆಗೂ ಕೂಡ ಬಹಳ ಅನುಕೂಲವಾಗುತ್ತದೆ.

3 P.M.

ಕಡೆಯದಾಗಿ, ನನ್ನ ಮಿತ್ರರು ಹೇಳಿದಹಾಗೆ, ಶಿವಮೊಗ್ಗ ಜಿಲ್ಲೆಯಲ್ಲಿ ಹರಿಜನರಿಗೆ ಮನೆಗಳನ್ನು ಕಟ್ಟುವುದಕ್ಕೆ ಕಿಟಕಿ ಬಾಗಿಲುಗಳನ್ನೊದಗಿಸುತ್ತಿದ್ದುದು ಫಲಕಾರಿಯಾಗಿಲ್ಲ. ಇದುವರೆಗೂ ಸರ್ಕಾರದವರು ಅಲ್ಲಲ್ಲಿ ಕಂಟ್ರಾಕ್ಟು ಕೊಡುತ್ತಿದ್ದರು. ಅದು ಸರಿಯಲ್ಲವೆಂದು ಸರ್ಕಾರದವರೇ ಈ ಕೆಲಸವನ್ನು ವಹಿಸಿಕೊಂಡರು. ಸರಿಯಾಗಿ ಕೆಲಸ ನಡೆಯುತ್ತದೆಂದು ತಿಳಿದುಕೊಂಡಿದ್ದೆವು. ಆದರೆ ಈಗ ಸರ್ಕಾರದವರು ಒದಗಿಸುತ್ತಿರುವುದೂ ಸರಿಯಾಗಿಲ್ಲ. ಸಕಾಲದಲ್ಲಿ ಒದಗಿಸುತ್ತಿಲ್ಲ. ಗಟ್ಟಿಯಾಗಿರುವ ಸಾಮಾನುಗಳನ್ನು ಕೊಡಬೇಕು ಮತ್ತು ಸಕಾಲದಲ್ಲಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Now the House will rise and meet at 3-30.

The House adjourned for Lunch at Two Minutes Past Three of the Clock and reassembled at Thirty-three Minutes Past Three of the Clock.

[MR. SPEAKER in the Chair.]

* ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಅರಣ್ಯ ಶಾಖೆಯ ವಿಚಾರದಲ್ಲಿ ಅನೇಕರು ಅನೇಕ ವಿಷಯಗಳನ್ನು ಸೂಚಿಸಿದ್ದಾರೆ. ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ನಾಶವಾಗಿದೆ. ಯುದ್ಧ ಪ್ರಾರಂಭವಾದಮೇಲೆ ಹೀಗೆ ನಾಶವಾಗಿರುವುದನ್ನು ಪುನರುಜ್ಜೀವನಗೊಳಿಸಬೇಕೆಂಬುದು ಎಲ್ಲರ ಅಭಿಪ್ರಾಯ. ಇದಕ್ಕೆ ತೀವ್ರವಾದ ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಂಡು ನಡೆಸಬೇಕು. ಎಲ್ಲಿ ಅರಣ್ಯಗಳಿಲ್ಲದೆ ಖಾಲಿಯಾಗಿದೆಯೋ ಅಲ್ಲಿ ಜನರಿಗೆ ಆ ಭೂಮಿಯನ್ನು ಬೇಸಾಯಕ್ಕೆ ಕೊಡಬೇಕು, ಇಲ್ಲದಿದ್ದರೆ ಅಲ್ಲಿ ಮರಗಳನ್ನು ಬೆಳಸಬೇಕೆಂಬುದು ಇದರಲ್ಲಿರತಕ್ಕ ತತ್ವ. ಹಾಗಿಲ್ಲದೆ ಕಾಡು ಶೇಕಡ ಇಷ್ಟಿರಬೇಕು, ಇಲ್ಲದಿದ್ದರೆ ದೇಶಕ್ಕೆ ಹಾನಿ ಎನ್ನುವುದನ್ನು ಮಾತ್ರ ಹೇಳುತ್ತಿದ್ದರೆ ಪ್ರಯೋಜನವಾಗುವುದಿಲ್ಲ. ಇಲಾಖೆಯಲ್ಲಿರುವ ಕೆಲಸಗಾರರಿಂದ ಎಷ್ಟು ಕೆಲಸ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡಿ, ಒಂದೊಂದು ಫಾರೆಸ್ಟಿನಲ್ಲಿ ಇಷ್ಟು ಗಿಡಗಳನ್ನು ಬೆಳಸಬೇಕೆಂಬ ಯೋಜನೆಯನ್ನು ಮುಂದುವರಿಸಿದರೆ ಸಾಧ್ಯವೇ ಹೊರತು ಬೇರೆ ಮಾರ್ಗದಿಂದ ಸಾಧ್ಯವಿಲ್ಲ. ಹೀಗೆ ಹೇಳುತ್ತಾ ಒಂದೆರಡು ಸಲಹೆಗಳನ್ನು ಮಾಡಬೇಕೆಂದಿದ್ದೇನೆ.

ಈಗ ನಮ್ಮ ರಸ್ತೆಗಳ ಪಕ್ಕಗಳಲ್ಲಿರುವ ಸಾಲುಮರಗಳನ್ನು, ಎಂದರೆ (Avenue trees) ರೆವೆನ್ಯೂ ಇಲಾಖೆಯವರೂ ಫಾರೆಸ್ಟ್ ಇಲಾಖೆಯವರೂ ಬೆಳಸಿದರೆ . . .

ಅಧ್ಯಕ್ಷರು.—ಫಾರೆಸ್ಟ್ ಇಲಾಖೆಯವರಲ್ಲ, ರೆವೆನ್ಯೂ ಇಲಾಖೆಯವರು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇವುಗಳನ್ನು ರೆವೆನ್ಯೂ ಇಲಾಖೆಯವರೇ ಬೆಳೆಸುವವರು, ಇದು ಅವರಿಗೇ ಸೇರಿದ್ದು ನಿಜ. ಆದರೂ ಫಾರೆಸ್ಟ್ ಇಲಾಖೆಯವರು ತಮ್ಮ ನರ್ಸರಿಯಿಂದ ಸಸಿಗಳನ್ನು ಕೊಡುತ್ತಿದ್ದಾರೆ. ದೇಶಕ್ಕೆ ಆದಾಯ ಬರತಕ್ಕ ಗಿಡಗಳನ್ನೇ ಬೆಳೆಸಬೇಕೆಂಬುದನ್ನು ರೆವೆನ್ಯೂ ಇಲಾಖೆಯವರೂ, ಫಾರೆಸ್ಟ್ ಇಲಾಖೆಯವರೂ ಇಬ್ಬರೂ ಯೋಚನೆಮಾಡಿ ಈ ಸಾಲು ಮರಗಳನ್ನು ಬೆಳೆಸಬೇಕು. ಹಾಗಿಲ್ಲದೆ ರೆವೆನ್ಯೂ ಇಲಾಖೆ ಬೆಳೆಸಬೇಕೆಂಬ ತತ್ವದಮೇಲೆ ಬರಿಯ ಕೊಂಬೆಗಳನ್ನು ಹಾಕಿಕೊಂಡು ಮಹಾತ್ಮ ಗಾಂಧಿಯವರ ದಿನಾಚರಣೆಯ ದಿವಸ ಅಥವಾ ಬೇರೆ ಶುಭದಿವಸಗಳಲ್ಲಿ ಯಾವುದೋ ಸಣ್ಣ ಸಣ್ಣ ಒಂದೆರಡು ಅಂಗುಲ ಇರುವ ಗಿಡಗಳನ್ನು ಹಾಕಿದ್ದೇವೆ ಎಂದರೆ ಪ್ರಯೋಜನವಿಲ್ಲ. ಈ ಸಾಲು ಮರಗಳಿಗೆ ಹುಣಸೆಯ ಗಿಡಗಳನ್ನು ಹಾಕತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು. ನಮ್ಮ ಅರಣ್ಯ ಪ್ರದೇಶ ಲಕ್ಷಾಂತರ ಎಕರೆಗಳಷ್ಟಿದೆ. ಇದರಿಂದ ರೈತನಿಗೆ ಎಷ್ಟುಮಟ್ಟಿನ ಪ್ರಯೋಜನವಾಗುತ್ತಿದೆ ಎನ್ನುವುದನ್ನು ಕೂಡ ಯೋಚನೆಮಾಡಬೇಕು. ರೈತ ತನಗೆ ಅಗತ್ಯವಾದ ಗಾಡಿಗಳನ್ನು ಈಗ ದೇಶದಲ್ಲಿರತಕ್ಕ ಹೆಚ್ಚಿನ ಬೆಲೆಗೆ ಕೊಂಡುಕೊಂಡು ಉಪಯೋಗಿಸಬೇಕಾಗಿದೆ. ನಮ್ಮ ದೇಶದಲ್ಲಿ ಗೊಬ್ಬರ ಗೋಡು ಮುಂತಾದುವಕ್ಕೆ ಸಹಾಯವಾಗುವ ಗಾಡಿಗಳನ್ನು ಇಷ್ಟು ಹೆಚ್ಚಿನ ಬೆಲೆ ಕೊಟ್ಟು ಕೊಂಡುಕೊಂಡು ವ್ಯವಸಾಯ ಮಾಡಬೇಕೆಂದರೆ ಬಹಳ ಕಷ್ಟ. ಹಿಂದೆ ಒಂದು ಗಾಡಿಯನ್ನಿಟ್ಟುಕೊಂಡರೆ ಬಾಡಿಗೆ ಹಣ ಬರುತ್ತಿತ್ತು. ಆದರೆ ಈ ದಿವಸ ಮುನ್ನೂರು, ನಾನೂರು ರೂಪಾಯಿ ಖರ್ಚು ಮಾಡಿ ಒಂದು ಗಾಡಿಯನ್ನು ಕೊಂಡುಕೊಂಡರೆ ಬಾಡಿಗೆ ಕೊಡುವವರು ಯಾರೂ ಇಲ್ಲ. ಈಗ ಲಾರಿಗಳು ಮತ್ತು ಬಸ್ಸುಗಳು ಹೆಚ್ಚಾಗಿರುವುದರಿಂದ ಗಾಡಿಗಳನ್ನು ಯಾರೂ ಕೇಳುವುದಿಲ್ಲ. ಹೀಗಿರುವಾಗ ಅವನಿಗೆ ಗೊಬ್ಬರ ಗೋಡು ಹೇರುವುದಕ್ಕೂ ಇತರ ವ್ಯವಸಾಯದ ಕೆಲಸಗಳಿಗೂ ಮಾತ್ರ ಬೇಕಾಗಿದೆಯೇ ಹೊರತು ಬಾಕಿ ಕೆಲಸಕ್ಕೆ ಬೇಕಾಗಿಲ್ಲ. ಸಾಮಾನ್ಯವಾಗಿ ವ್ಯವಸಾಯಗಾರ ತನ್ನ ವ್ಯವಸಾಯಕ್ಕಾಗಿಯೇ ಒಂದು ಎತ್ತಿನ ಗಾಡಿಯನ್ನು ಮಾಡಿಕೊಳ್ಳಬೇಕೆಂದರೆ ಅವನ ಜನ್ಮದಲ್ಲೇ ಸಾಧ್ಯವಿಲ್ಲ. ಗಾಡಿ ಇಲ್ಲದೇ ಹೋದರೆ ವ್ಯವಸಾಯ ಉತ್ತಮವಾಗುವುದಿಲ್ಲ. ಆದುದರಿಂದ ರೈತನಿಗೆ ಗಾಡಿ ಮತ್ತು ವ್ಯವಸಾಯದ ಉಪಕರಣಗಳು ಸುಲಭವಾಗಿ ಸಿಕ್ಕಬೇಕು. ಇದಕ್ಕೆ ಫಾರೆಸ್ಟ್ ಇಲಾಖೆಯವರು ಸಹಾಯ ಮಾಡಬೇಕು. ಹಾಗಿಲ್ಲದಿದ್ದರೆ ಈ ಇಲಾಖೆ ಇದ್ದರೂ ದೇಶದ ವ್ಯವಸಾಯ ಉತ್ತಮವಾಗುವುದಿಲ್ಲ. ಬಡರೈತನಿಗೆ ಮುನ್ನೂರು, ನಾನ್ನೂರು ರೂಪಾಯಿಗಳನ್ನು ಒಂದು ಗಾಡಿಗಾಗಿ ಕೊಡಬೇಕೆಂದರೆ ಅವನ ಜನ್ಮದಲ್ಲೇ ಸಾಧ್ಯವಾಗುವುದಿಲ್ಲ. ಇದುವರೆಗೆ ಸುಲಭದರದಲ್ಲಿ ಗಾಡಿಗಳನ್ನು ಒದಗಿಸುವುದಕ್ಕೆ ಸಹಾಯ ಮಾಡಿಲ್ಲ. ಕೇವಲ ಎರಡು, ನಾಲ್ಕು ಎಕರೆ ಜಮೀನಿರುವ ರೈತನಿಗೂ ಗಾಡಿ ಮಾಡಿಕೊಳ್ಳುವ ಚೈತನ್ಯವಿರುವ ಹಾಗೆ ಅವಕಾಶ ಮಾಡಿಕೊಡಬೇಕು. ಹೀಗೆ ಮಾಡದೆ ಬರಿಯ ಅರಣ್ಯವನ್ನು ಬೆಳೆಸುತ್ತೇವೆ ಎಂದರೆ ಅರ್ಥವಿಲ್ಲ. ಸಾಮಾನ್ಯ ರೈತನಿಗೆ ಸಹಾಯವಾಗುವ ರೀತಿಯಲ್ಲಿ ಫಾರೆಸ್ಟ್ ಇಲಾಖೆಯಿಂದ ಅನುಕೂಲಪಡಿಸಿಕೊಡಬೇಕು. ಹಾಗಿಲ್ಲದಿದ್ದರೆ ಲಕ್ಷಾಂತರ ಎಕರೆ ಅರಣ್ಯವಿದ್ದರೂ ಕೂಡ ಪ್ರಯೋಜನವಿಲ್ಲ. ಇಡೀ ದೇಶದ ರೈತರಿಗೆ ಸಹಾಯವಾಗುವಂತೆ ನಾನು ಸೂಚಿಸಿರುವ ಏರ್ಪಾಡುಗಳನ್ನು ಮಾಡಬೇಕೆಂದು ನನ್ನ ಸಲಹೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ಈ ಅರಣ್ಯ ರಕ್ಷಣೆಯ ವಿಚಾರದಲ್ಲಿ ಈಗತಾನೆ ಕೆಲವರು ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕಾಡಿಲ್ಲದೆ ನಾಡಿಲ್ಲ ಎಂದು ನಮ್ಮಲ್ಲಿ ಒಂದು ನಾಣ್ಣುಡಿ ಇದೆ. ಈಗ ಅರಣ್ಯದಲ್ಲಿ ಮರಗಳನ್ನು ಕಡಿದು ವ್ಯಾಪಾರಕ್ಕೆ ಬೇರೆ ಕಡೆಗಳಿಗೆ ಸಾಗಿಸುತ್ತಿರುವುದರಿಂದ ಅನೇಕ ಮರಗಳು ನಷ್ಟವಾಗುತ್ತಿವೆ. ನಮ್ಮ ಕಡೆಯಿಂದ ಮಂಗಳೂರು ಮುಂತಾದ ಕಡೆಗೆ ಎಷ್ಟೋ ಮರಗಳು ಹೋಗುತ್ತಿವೆ. ಇದರಿಂದ ಮಲೆನಾಡಿನ ಕಾಡುಗಳು ಹಾಳಾಗಿ ಎಷ್ಟು ತೊಂದರೆಯಾಗಿದೆ ಎನ್ನುವುದು ಸರ್ಕಾರಕ್ಕೂ ಗೊತ್ತಿದೆ. ಅಲ್ಲದೆ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ಆಗಾಗ ತರುತ್ತಿದ್ದೇವೆ. ಮಲೆನಾಡಿನಲ್ಲಿ ದೊರೆಯುವ Soft wood ಎಂಬ ಮರವನ್ನು ಬೆಂಕಿಕಡ್ಡಿ ತಯಾರುಮಾಡುವುದಕ್ಕೆ ಉಪಯೋಗಿಸುತ್ತಾರೆಂದು ನಾನು ಕೇಳಿದ್ದೇನೆ. ಶಿವಕಾಶಿ, ವಿಷ್ಣುಕಾಶಿ, ಮುಂತಾದ ಸ್ಥಳಗಳಲ್ಲಿ ಬೆಂಕಿಕಡ್ಡಿ ತಯಾರಿಕೆಯನ್ನು ಒಂದು ಗ್ರಾಮ ಕೈಗಾರಿಕೆಯಾಗಿ ಮಾಡುತ್ತಿರುವಂತೆ ನಮ್ಮ ದೇಶದಲ್ಲಿಯೂ ಕೂಡ ಇದನ್ನು ಬೆಳೆಸಿಕೊಂಡರೆ ಅನುಕೂಲವಾಗುತ್ತದೆ.

ಇನ್ನೊಂದು ವಿಷಯ. ಅರಣ್ಯ ಪ್ರದೇಶದಿಂದ ಕೆಲವು ಮರಗಳನ್ನು ಕಡಿದುಹಾಕಿದಮೇಲೆ ಅಲ್ಲಿ ಹುಲ್ಲು ಬೆಳೆಯುತ್ತಿದ್ದುದು ಹೋಗಿ ದನಗಳಿಗೆ ಬಹಳ ಕಷ್ಟವಾಗುತ್ತಿದೆ. ಈಚಲು ವನಗಳು ಮತ್ತು ಅರಣ್ಯ ಪ್ರದೇಶಗಳು ಇವುಗಳನ್ನು ಆಹಾರ ಬೆಳೆಯುವುದಕ್ಕಾಗಿ ಕೊಟ್ಟು ದನಗಳಿಗೆ ಮೇವೇ ಇಲ್ಲದ ಹಾಗೆ ಆಗಿದೆ. ಅಲ್ಲದೆ ಹೆಚ್ಚಾಗಿ ಮರಗಳನ್ನು ಕಡಿದುದರಿಂದ ಮಳೆ ಇಲ್ಲದೆ ಮಲೆನಾಡು ಬಹಳ ಹೀನಸ್ಥಿತಿಗೆ ಬಂದಿದೆ. ಮಳೆ ಇಲ್ಲದಿರುವುದಕ್ಕೆ ಕಾರಣ ಕಾಡಿಲ್ಲದೇ ಇರುವುದು ಎಂಬುದನ್ನು ಅನೇಕರು ಒಪ್ಪುತ್ತಾರೆ. ಸರ್ಕಾರದವರು ವನಮಹೋತ್ಸವ ಮಾಡಿ ಮರಗಳನ್ನು ಹಾಕಿ ಬೆಳೆಸಬೇಕೆಂದು ಹೇಳಿದ್ದಾರೆ. ಇದು ಒಳ್ಳೆಯದಾದರೂ ಅವರು ಯೋಚನೆ ಮಾಡಿರುವಷ್ಟು ಯಶಸ್ವಿಯಾಗಿಲ್ಲ. ರೈತರು ಮಾಡುವಷ್ಟು ಯಶಸ್ವಿಯಾಗಿ ಸರಕಾರ ಮಾಡುವುದಕ್ಕಾಗುವುದಿಲ್ಲ. ಫಾರೆಸ್ಟ್ ಇಲಾಖೆಯವರು ಅಷ್ಟು ಸಮರ್ಪಕವಾಗಿ ಮಾಡುತ್ತಾರೆಂದು ನಂಬಿಕೆ ಇಲ್ಲ. ರೈತರಿಗೆ ಪ್ರೋತ್ಸಾಹ ಕೊಟ್ಟು ರೈತರಿಂದ ಮರಗಳನ್ನು ಬೆಳೆಸುವುದು ಒಳ್ಳೆಯ ಕೆಲಸ. ರೈತರು ಮಾಡುವಷ್ಟು ಶ್ರದ್ಧೆಯಿಂದ ಅಧಿಕಾರಿಗಳಿಗೆ ಸಂಬಳ ಕೊಟ್ಟು ಮಾಡಿಸುವುದಕ್ಕಾಗುವುದಿಲ್ಲ. ಆದುದರಿಂದ ಮರಗಿಡಗಳನ್ನು ಬೆಳೆಸುವುದಕ್ಕೆ ರೈತರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಫಾರೆಸ್ಟು ಮತ್ತು ಗೋಮಾಳಗಳನ್ನ ವ್ಯವಸಾಯಕ್ಕೆ ಕೊಡುವುದನ್ನು ಸರ್ಕಾರದವರು ಕಡಿಮೆಮಾಡಬೇಕು. ಕೊಟ್ಟಿರತಕ್ಕ ಅನೇಕ ಜಮೀನುಗಳು ಪಾಳುಬಿದ್ದಿವೆ. ಅಲ್ಲದೆ ಜಮೀನು ಇಲ್ಲದೇ ಇರುವವರಿಗೆ ಜಮೀನು ಸಿಕ್ಕುವುದಿಲ್ಲ. ಆದುದರಿಂದ ಸಿಕ್ಕಿದಹಾಗೆ ಜಮೀನು ಕೊಡುವುದನ್ನು ಕಡಿಮೆಮಾಡಬೇಕು. ಗಿಡಗಳಿಲ್ಲದೆ ಮಲೆನಾಡಿನ ಸೌಂದರ್ಯ ಕಡಮೆಯಾಗಿ ಹೋಗುತ್ತಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯ ಮಾತಲ್ಲ. ಮರಗಳಿಂದ ಮಲೆನಾಡು ಶೋಭಾಯಮಾನವಾಗಿತ್ತು. ಈಗ ಅಲ್ಲಿ ಅನೇಕ ಕಡೆ ಮರಗಿಡಗಳು ಹಾಳಾಗಿರುವುದನ್ನ ನೋಡಿದರೆ ವ್ಯಸನವಾಗುತ್ತದೆ. ಮಲೆನಾಡಿನ ಕಾಡು ಹೋದರೆ ಅದರ ವೈಭವಕ್ಕೆ ಧಕ್ಕೆ ಬರುತ್ತದೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಆದುದರಿಂದ ಮರಗಳನ್ನು ಕಡಿದು ಬೇರೆ ಊರುಗಳಿಗೆ ಸಾಗಿಸುವುದನ್ನು ತಡೆಗಟ್ಟಬೇಕು. ಇಷ್ಟು ಹೇಳಿ ಈ ಗೊತ್ತುವಳಿಯನ್ನು ಸಮರ್ಥಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು—ಉತ್ತರ).—ಸ್ವಾಮಿ, ಅರಣ್ಯ ಇಲಾಖೆಯ ವಿಚಾರದಲ್ಲಿ ಮಾನ್ಯ ಸ್ನೇಹಿತರು ಸಾಕಷ್ಟು ಮಾತನಾಡಿದ್ದಾರೆ. ಈ ಸಮಯದಲ್ಲಿ ನಾನು ಒಂದು ವಿಷಯವನ್ನು ಹೇಳಬೇಕೆಂದಿಚ್ಛಿಸುತ್ತೇನೆ. ಪ್ರತಿಯೊಂದು ಅಧಿವೇಶನದಲ್ಲಿಯೂ ಈ ಸಭೆಯ ಸದಸ್ಯರು ರಾಜ್ಯದ ವಿವಿಧ ಇಲಾಖೆಗಳ ವಿಷಯಗಳನ್ನು ಟೀಕೆಮಾಡುತ್ತಾ ಅವರವರ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ. ಅರಣ್ಯ ಇಲಾಖೆಯ ವಿಚಾರದಲ್ಲಿ ಕಳೆದ ಏಳೆಂಟು ವರ್ಷಗಳಿಂದ ಅನೇಕ ಟೀಕೆಗಳೂ ಸಲಹೆಗಳೂ ಬಂದಿವೆ. ಇವುಗಳ ಮೇಲೆ ಯಾವ ಕಾರ್ಯಭಾರಮಾಡಿದ್ದಾರೋ ನೋಡಬೇಕಾಗಿದೆ. ಈ ಹೊತ್ತಿನ ದಿವಸ ಇಂಜಿನಿಯರಿಂಗ್ ಇಲಾಖೆಯಲ್ಲಿ ಎಷ್ಟು ಹಣ ಖರ್ಚಾಗಿ ಪೋಲಾಗುತ್ತಿದೆಯೋ ಹಾಗೆಯೇ ಈ ಇಲಾಖೆಯಲ್ಲಿಯೂ ಪೋಲಾಗುತ್ತಿದೆಯೆಂದು ಹೇಳಬೇಕಾಗಿದೆ. ಉದಾಹರಣೆಗೆ ಸರ್ವೆ ತೋಪುಗಳನ್ನು ಹಾಕತಕ್ಕ ಕಾರ್ಯಭಾರವನ್ನು ಕೈಗೊಂಡಿದ್ದಾರೆ. ಖಾಸಗೀ ಜನರೂ ಕೂಡ ಈ ಕೆಲಸವನ್ನು ಮಾಡುತ್ತಿದ್ದಾರೆ. ಖಾಸಗಿಯವರು ಮಾಡತಕ್ಕ ಖರ್ಚನ್ನೂ, ಇಲಾಖೆಯವರು ಮಾಡತಕ್ಕ ಖರ್ಚನ್ನೂ ಹೋಲಿಸಿ ನೋಡಿದರೆ ಒಂದಕ್ಕೆ ಎರಡರಷ್ಟು ಹಣವನ್ನು ಇಲಾಖೆಯವರು ಖರ್ಚು ಮಾಡುತ್ತಿದ್ದಾರೆ. ಬೆಂಗಳೂರಿನ ಆಜು ಬಾಜು ಇರತಕ್ಕ ಜಮೀನಿನಲ್ಲಿ ಸರ್ವೆ ತೋಪುಗಳನ್ನು ಹಾಕುತ್ತಿದ್ದಾರೆ. ಇದನ್ನು ಬೇರೆಯವರಿಗೆ ವಹಿಸಿ ಏಕೆ ಮಾಡಿಸಬಾರದು ?

ಈಗ ಖಾಸಗಿ ಜನಗಳು ಬೇಕಾದಷ್ಟು casuarina ತೋಪುಗಳನ್ನು ಠರಾವು ಮಾಡುವಾಗ ಶೇಕಡ 50 ಭಾಗ, 25 ಭಾಗ ತೆಗೆದುಕೊಳ್ಳುತ್ತಾರೆ. ಇದೇ ರೀತಿಯಾಗಿ ಠರಾವು ಮಾಡುವುದಕ್ಕೆ ಬೇಕಾದಷ್ಟು ಜನ ರೈತರು ತಯಾರಾಗಿದ್ದಾರೆ. ಇಲಾಖೆಯವರಿಗಿಂತ ಇನ್ನೂ ಉತ್ತಮವಾದ ರೀತಿಯಲ್ಲಿ ಠರಾವು ಮಾಡುತ್ತಾರೆ. ಈ ಮರಗಳಿಗೆ maximum life ಹತ್ತು ವರ್ಷಗಳು ಇರತಕ್ಕದ್ದು. ಈ ಮರಗಳನ್ನು ಕಟಾವು ಮಾಡಿ ಪುನಃ ಠರಾವು ಮಾಡುವುದಕ್ಕೆ ಬೇಕಾದಷ್ಟು ಹಣ ಖರ್ಚಾಗುತ್ತದೆ. ಇದನ್ನು ಯಾಕೆ ತಡೆಗಟ್ಟಬಾರದು? ಈಗ eucalyptus plants ಬೆಂಗಳೂರಿನ ಸುತ್ತುಮುತ್ತಲೂ ಠರಾವು ಮಾಡುತ್ತಿದ್ದಾರೆ. ಈ eucalyptus plants ಠರಾವು ಮಾಡುವುದಕ್ಕೂ ಸಹ ರೈತರು ಮುಂದೆ ಬರುತ್ತಿದ್ದಾರೆ. ಈ ಗಿಡಗಳನ್ನು ಠರಾವು ಮಾಡಲು ಆಗುವ ಖರ್ಚನ್ನು ಕಡಿಮೆ ಮಾಡಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು ಎಂದು ನನ್ನ ಸಲಹೆ.

ಬೆಂಗಳೂರಿನ ಸುತ್ತಮುತ್ತಲೂ minor forest ಇದೆ. ಇದರಲ್ಲಿ ಬರೀ ಲಾಂಟಾನ ಗಿಡಗಳು ಮಾತ್ರ ಇವೆ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ casuarina ಮತ್ತು eucalyptus plants ಬೆಳೆಯುವುದಕ್ಕೆ ಬೇಕಾದಷ್ಟು ಜನ ರೈತರು ತಯಾರಾಗಿದ್ದಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಇಲಾಖೆಯವರು ಮತ್ತು ಖಾಸಗಿಯವರು ಆಲೋಚನೆ ಮಾಡಿ ಸಾಧ್ಯವಾಗುವ ಹಾಗಿದ್ದರೆ ಆ ಕೆಲಸವನ್ನು ಕೈಗೊಳ್ಳಬೇಕು ಎಂದು ನನಗೆ ತೋರುತ್ತದೆ.

ಕಾಡುಗಳಿಗೆ ಒಂದು ದೊಡ್ಡ ಹಾವಳಿ ಮೇಕೆಗಳಿಂದ ಇದೆ. ವ್ಯವಸಾಯ ಮಾಡತಕ್ಕ, ಠರಾವು ಮಾಡತಕ್ಕ ಸಸಿಗಳನ್ನು ಮೇಕೆ ಮುಟ್ಟಿದರೆ ಅದರಿಂದಾಗತಕ್ಕ ನಷ್ಟ ವಿಶೇಷವೆಂದು ಗೊತ್ತಾಗಿದೆ. ಒಂದು ಸಲ ಮೇಕೆ ಮುಟ್ಟಿದರೆ ಆ ಗಿಡ ಖಂಡಿತವಾಗಿ ವೃದ್ಧಿ ಹೊಂದುವುದಿಲ್ಲ. ಇದನ್ನು ಕೂಡಲೆ ತಡೆಗಟ್ಟದೆ ಹೋದರೆ ತೋಪುಗಳನ್ನು ಬೆಳೆಸುತ್ತೇವೆ, ಕಾಡನ್ನು ಬೆಳೆಸುತ್ತೇವೆ ಎನ್ನುವುದು ಖಂಡಿತವಾಗಿಯೂ ಸಾಧ್ಯವಿಲ್ಲದ ಪ್ರಶ್ನೆಯಾಗುತ್ತದೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ದೇವನಹಳ್ಳಿ ತಾಲ್ಲೂಕು, ಚಿಕ್ಕಬಳ್ಳಾಪುರ ಮತ್ತು ಹೊಸಕೋಟೆಗಳಿಗೆ ಹೋಗುವ ರಸ್ತೆಗಳ ನಡುವೆ ನೂರಾರು ಎಕರೆಗಳ ಜಮೀನಿದೆ. ಇದರಲ್ಲಿ ಬರೀ ಬಯಲು ಮತ್ತು ಬರೀ ಲಾಂಟಾನ ಗಿಡಗಳು ಕಾಣಿಸುತ್ತವೆ. ಇದು minor forest ಆಗಿದೆ. ಇದರಲ್ಲಿ ಜಮೀನನ್ನು ನಿಮ್ಮ ವರ್ಗದವರು ಮತ್ತು ಇತರರು ಸಾಗುವಳಿಗೆ ಕೇಳಿದರೆ 'ಕೊಡುವುದಕ್ಕಾಗುವುದಿಲ್ಲ, afforestation ಮಾಡುತ್ತೇವೆ'ಎಂದು ಹೇಳುತ್ತೀರಿ. ಇದುವರೆಗೂ ಇದಕ್ಕೆ ಕೈಹಾಕಿಲ್ಲ. ಹೊಸಕೋಟೆ ಮತ್ತು ಬೆಂಗಳೂರು ಮಧ್ಯೆ casuarina ಮತ್ತು eucalyptus ಗಿಡಗಳನ್ನು ಬೆಳೆಸಲು ಬೇಕಾದಷ್ಟು ಜಾಗವನ್ನು ಅದೇರೀತಿ ಇಟ್ಟುಕೊಂಡಿದ್ದೀರಿ. ಅದನ್ನು ಸರಿಯಾಗಿ ಸಾಗುವಳಿ ಮಾಡುತ್ತೇವೆ ಎಂದರೂ ಕೂಡ ಸಾಕಾದಷ್ಟು ತೋಪನ್ನು ಬೆಳೆಸುವುದಕ್ಕಾಗುವುದಿಲ್ಲ. casuarina ತೋಪನ್ನು ನಮ್ಮ ಅರಣ್ಯ ಇಲಾಖೆಯವರು ಸುಲಭವಾಗಿ ಮಾಡುವುದಕ್ಕೆ ಸಾಧ್ಯವಿದ್ದರೆ ನಾವು ಬೇಕಾದಷ್ಟು ಸಂಪಾದನೆ ಮಾಡಬಹುದಾಗಿತ್ತು. ಜಮೀನು ಫಲವತ್ತಾಗುವಂತೆ ಸಾಗುವಳಿಮಾಡಬೇಕು. ತದನಂತರ ತೋಪು ಚೆನ್ನಾಗಿ ಬೆಳೆಯುತ್ತದೆ. ನಾವು ಈ ತೋಪುಗಳನ್ನು ನೋಡುವುದರಲ್ಲಿ 8-9 ವರ್ಷಗಳಾದರೂ ಕೂಡ ಮರಗಳ ದಪ್ಪ ಮೂರು ಅಂಗುಲ ಬರುವುದಿಲ್ಲ. ಆದರೆ ಅದೇ ಚೆನ್ನಾಗಿ ಬೆಳೆದಿರುವ ಮರಗಳ ದಪ್ಪ ಆರರಿಂದ ಹತ್ತು ಅಂಗುಲ ಬರುತ್ತದೆ. ಆದ್ದರಿಂದ ಮರಗಳು ಚೆನ್ನಾಗಿ ಬೆಳೆಯಬೇಕಾದರೆ ಮುಂಚಿತವಾಗಿ ಸರಿಯಾದ ರೀತಿಯಲ್ಲಿ ಆಬಾದು ಮಾಡಿಸಿ casuarina ಮತ್ತು eucalyptus plants ಹಾಕಬೇಕು ಎಂದು ಸೂಚನೆ ಮಾಡುತ್ತೇನೆ. ಈ ತೋಪುಗಳನ್ನು ಖಾಸಗಿಯವರಿಗೆ ಕೊಡುವುದರಿಂದ ಬೇಕಾದಷ್ಟು ತಹಬಂದಿಗೆ ತರಬಹುದು ; ಮತ್ತು ಹಣದ ಖರ್ಚನ್ನು ಸಹ ಕಡಿಮೆ ಮಾಡಬಹುದೆಂದು ತೋರುತ್ತದೆ.

ಇನ್ನೊಂದು ವಿಷಯ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಸಾಧಾರಣವಾಗಿ economic plants ಎಂದರೆ ಹುಣಸೆ, ಹೊಂಗೆ ಇತ್ಯಾದಿ ತೋಪುಗಳನ್ನು ಮಾಡುವುದರಲ್ಲಿ ಬಹಳ ಶ್ರೇಯಸ್ಸು ಇದೆ. ಆದರೆ ಈ ನೂರಾರು ವರ್ಷದ ಹುಣಸೆ ಮರಗಳನ್ನು ಇಲಾಖೆಯವರು ಕಡಿಯುತ್ತಿದ್ದಾರೆ. ಸೌದೆಗೆ ಅಭಾವ ಬಂದಾಗ ಈ ಮರಗಳನ್ನು ಕಡಿದು ನಾಶಮಾಡುತ್ತಾರೆ. ತಾವು ಹೊಂಗೆ ಮತ್ತು ಹುಣಸೆ ಮರಗಳ ಕಟಾವನ್ನು ನಿಲ್ಲಿಸದೆ ಹೋದರೆ ದೇಶದ ಸಂಪತ್ತು ಹಾಳಾಗಿ ಹೋಗುತ್ತದೆ ಎಂದು ಹೇಳಬೇಕಾಗಿದೆ. ಈಗ ಸಾಲುಮರಗಳನ್ನೂ ಸಹ ನಾಶಮಾಡುತ್ತಿದ್ದಾರೆ. Economic plants ನ್ನು ಯಾವ ರೀತಿ ಕಾಪಾಡಬೇಕೋ, ಅದೇ ರೀತಿಯಾಗಿ ಈ ಸಾಲು ಮರಗಳನ್ನೂ ಕಾಪಾಡಬೇಕು ಮತ್ತು ಅದಕ್ಕೆ ತಕ್ಕ ಬಂದೋಬಸ್ತು ಮಾಡದೆ ಇದ್ದರೆ ತೊಂದರೆಯಾಗುತ್ತದೆ ಎಂದು ಈ ಸಮಯದಲ್ಲಿ ಸೂಚನೆಮಾಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಈಗ ಮಲೆನಾಡಿನಲ್ಲಿ ತುಂಗ ಮತ್ತು ಭದ್ರ ಆಣೆಕಟ್ಟುಗಳನ್ನು ಕೋಟ್ಯಾಂತರ ರೂಪಾಯಿ ಖರ್ಚು

ಮಾಡಿ ಕಟ್ಟುತ್ತಿರುವುದು ಸರಿಯಷ್ಟೆ. ಆದರೆ ಮಲೆನಾಡಿನಲ್ಲಿ ನದಿಗಳಿಗೆ ನೀರು ಹೇಗೆ ಬರುತ್ತದೆ ಎನ್ನುವುದನ್ನು ನೋಡಿದರೆ ಮಳೆಯ ನೀರು ಭೂಮಿಗೆ ಬಿದ್ದು ಮರಗಳು ತೆಗೆದುಕೊಂಡು ಅದನ್ನು ಬೇರುಗಳಲ್ಲಿ store ಮಾಡಿಕೊಂಡು, ನಿಧಾನವಾಗಿ ಬೇಸಗೆಯಲ್ಲಿ ನೀರಿನ ಮಟ್ಟ ಕಡಮೆಯಾದಂತೆಲ್ಲ ನೀರನ್ನು ಬಿಡುತ್ತಾ ಇರುವ ಶಕ್ತಿ ಮರಗಳಲ್ಲಿದೆ ಎಂದು ಹೇಳುತ್ತಾರೆ. ಮೈದಾನ ಪ್ರದೇಶಗಳ ನದಿಗಳಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ಕಾಣುತ್ತದೆ. ಬೇಸಿಗೆಯಲ್ಲಿ ನೀರೇ ಇರುವುದಿಲ್ಲ. ಈ ಪ್ರದೇಶದಲ್ಲಿ ಕಾಡು ಇಲ್ಲದೆ ಇರುವುದರಿಂದ ಸಣ್ಣ ಸಣ್ಣ ನದಿಗಳಲ್ಲಿ ಬೇಸಿಗೆಯಲ್ಲಿ ನೀರು ಇರುವುದಿಲ್ಲ. ಮಲೆನಾಡು ಪ್ರದೇಶದಲ್ಲಿರತಕ್ಕ ಕಾಡು ನಶಿಸಿಹೋಗುವುದಾದರೆ ತುಂಗಭದ್ರಾ ಮೊದಲಾದ ನದಿಗಳಲ್ಲಿ ಮಳೆಗಾಲದಲ್ಲಿ ನೀರು ಹರಿದು ಬೇಸಿಗೆಯಲ್ಲಿ ಬತ್ತಿ ಹೋದಾವು. ಮೈದಾನ ಪ್ರದೇಶಗಳಿಗೆ ನೀರು ಬರುವುದಿಲ್ಲವೆಂದು ಕಂಡುಬರುತ್ತದೆ. ಸರ್ಕಾರದವರು ಅರವತ್ತು ವರುಷದ ಯೋಜನೆಯನ್ನು ಹಾಕಿಕೊಂಡು ನಿರ್ದಿಷ್ಟವಾದ ಪ್ರದೇಶಗಳಲ್ಲಿ ಒಂದುಮೈಲಿ, ಎರಡು ಮೈಲಿ ಆವರಣದಲ್ಲಿ ನಾಟ ಮತ್ತು ಸೌದೆಗೆ ಬೇಕಾದ ಮರಗಳನ್ನು ಪೂರ್ತಿಯಾಗಿ ತೆಗೆದು ಮಾರನೆವರ್ಷ ಆ ಜಮೀನಿನಲ್ಲಿ ಬೇರೆ ಮರಗಳನ್ನು ನೆಟ್ಟುಕೊಂಡು, ಅದರ ಮಾರನೆಯ ವರ್ಷ ಇನ್ನೂ ಎರಡು ಚದರ ಮೈಲಿ ಹೀಗೆ ಕಾಡನ್ನು ತೆಗೆದು, ಹೊಸದಾಗಿ ಗಿಡಗಳನ್ನು ನೆಡುತ್ತ ಹೋದರೆ ಬಹಳ ಅನುಕೂಲವಾಗುತ್ತದೆ. ಹೀಗೆ 60 ವರ್ಷಗಳ ಯೋಜನೆಯಂತೆ ಒಂದು ವರ್ಷಕ್ಕೆ 2-4 ಚದರ ಮೈಲಿ, ಅಥವಾ ನಮ್ಮ ಕಾಡು ಎಷ್ಟು ಜಮೀನಿನಲ್ಲಿದೆಯೋ ಅದರಲ್ಲಿ ಒಂದುಭಾಗವನ್ನು ಅಂದರೆ ಅರವತ್ತನೆಯ ಒಂದು ಭಾಗವನ್ನು ಮಾತ್ರ ತೆಗೆಯಬೇಕು. Indiscriminate ಆಗಿ ಎಲ್ಲಿ ಅಂದರೆ ಅಲ್ಲಿ ಕಾಡನ್ನು ತೆಗೆಯಕೂಡದು ಎಂದು ನನ್ನ ಸಲಹೆ.

ನಮ್ಮ ಮಲೆನಾಡಿನಿಂದ ಸೌದೆಯನ್ನು ಮೈದಾನದಲ್ಲಿ ಇತರಕ್ಕ ಜನಗಳ ಉಪಯೋಗಕ್ಕೋಸ್ಕರ ಒದಗಿಸುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ದೊರೆಯತಕ್ಕ ಕಾಡನ್ನು ನಾಲ್ಕಡಿ ಸುತ್ತು ಅದಕ್ಕೂ ಹೆಚ್ಚು ಸುತ್ತು ಇರುವ ನಾಟಗಳನ್ನು ಕೂಡ ಕಡಿದು 4′ ತುಂಡುಗಳನ್ನು ಮಾಡಿ ಸೌದೆಗೆ ಎಂದು ಲಾರಿ ಮತ್ತು ರೈಲು ಮುಖಾಂತರ ಅನೇಕ ಊರುಗಳಿಗೆ ತರುತ್ತಿದ್ದಾರೆ. ಇದನ್ನು ಮೊದಲು ತಡೆಗಟ್ಟಬೇಕು. ನೀರು ಕಾಯಿಸುವುದಕ್ಕೆ ವಿದ್ಯುಚ್ಛಕ್ತಿಯನ್ನು ಒಂದು ಯೂನಿಟ್ಟಿಗೆ ಅರ್ಧಾಣೆಯಂತೆ ಸರಬರಾಯಿ ಮಾಡುವುದಾದರೆ ಸೌದೆಯ ಅಭಾವ ಸ್ವಲ್ಪಮಟ್ಟಿಗೆ ತಪ್ಪಿ ಮಲೆನಾಡಿನ ಕಾಡು ಉಳಿಯುತ್ತದೆಂದು ನನಗೆ ಕಂಡುಬರುತ್ತದೆ. ಆದ್ದರಿಂದ ಸರ್ಕಾರದವರು ಇಂಥ ಯೋಜನೆಯನ್ನು ಹಾಕಿಕೊಂಡು ವರ್ಷಕ್ಕೆ ಇಷ್ಟೇ ಪ್ರದೇಶದಲ್ಲಿ ಕಾಡನ್ನು ತೆಗೆಯಬೇಕು ಮತ್ತು ಉಳಿದ ಕಾಡನ್ನು ಬೆಳೆಯುವುದಕ್ಕೆ ಬಿಡಬೇಕು. ಹೀಗೆ ಕಾಡನ್ನು ತೆಗೆದಂಥ ಪ್ರದೇಶದಲ್ಲಿ ಪುನಃ ಕಾಡು ಬೆಳೆಸುವುದಕ್ಕೆ ಪ್ರಯತ್ನ ಪಟ್ಟರೆ ಅದರಿಂದ ಜನತೆಗೆ ಅನುಕೂಲವಾಗುತ್ತದೆ ಮತ್ತು ನದಿಗಳಲ್ಲಿ ಬೇಸಿಗೆಯಲ್ಲೂ ನೀರು ಹರಿಯುವುದು.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಅರಣ್ಯ ಸಂಪತ್ತನ್ನು ಹೆಚ್ಚಿಸುವುದರಿಂದ ನಮ್ಮ ದೇಶಕ್ಕೆ ಬಹಳ ಅನುಕೂಲವಿದೆ ಎಂದು ಅನೇಕ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಬಹಳ ಪ್ರಾಮುಖ್ಯವಾದುವು. ಆದರೆ ನಮ್ಮ ಅರಣ್ಯ ಸಂಪತ್ತು ಕೆಲವು ಕಡೆ ಚೆನ್ನಾಗಿದ್ದರೂ ಕೂಡ ಉಳಿದಕಡೆ ಬರೀ ಕುರುಚಲು ಗಿಡ ಮತ್ತು ಮುಳ್ಳುಗಿಡಗಳಿಂದ ಮಾತ್ರ ತುಂಬಿದೆ. ಇಲ್ಲಿ ಯಾವ ಅರಣ್ಯಸಂಪತ್ತೂ ಇರುವುದಿಲ್ಲ. ಜಮೀನಿಲ್ಲದೆ ಇರುವವರಿಗೆ ಪ್ರತಿಯೊಬ್ಬರಿಗೂ ಜಮೀನು ಕೊಡಬೇಕೆಂದು ಒಂದು ಕಡೆ ಹೇಳುತ್ತೀರಿ. ಗೋಮಾಳ ಸಾಲದು, ಜಾನುವಾರು ಜಾಸ್ತಿ ಇರುವುದರಿಂದ ಗೋಮಾಳದಲ್ಲಿ ಕೊಡುವುದಕ್ಕೆ ಅವಕಾಶ ಇಲ್ಲದೆ ಜನರಿಗೆ ಜಮೀನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೀರಿ. ಈಗ ನನ್ನ ಸಲಹೆ ಏನೆಂದರೆ ಎಲ್ಲೆಲ್ಲಿ ಕಾಡುಇಲ್ಲದೆ ಬರೀ ಕುರುಚಲು ಗಿಡ ಮತ್ತು ಮುಳ್ಳುಗಿಡ ಬೆಳೆದಿದೆಯೋ ಅಂತಹ ಅರಣ್ಯವನ್ನೆಲ್ಲಾ release ಮಾಡಿ ಜಮೀನಿಲ್ಲದವರಿಗೆ ಆ ಪ್ರದೇಶಗಳಲ್ಲಿ ಜಮೀನು ಕೊಟ್ಟರೆ ಅದನ್ನು ಸಾಗುವಳಿ ಮಾಡುವುದರಿಂದ ಆ ಜನಗಳಿಗೆ ಅನುಕೂಲವಾಗುತ್ತದೆ ಮತ್ತು ಆ ಜಮೀನುಗಳಲ್ಲಿ ಒಳ್ಳೊಳ್ಳೆಯ ದೊಡ್ಡದೊಡ್ಡ ಮರಗಳನ್ನು ಬೆಳೆಸುವುದಕ್ಕೆ ಸಹ ಅನುಕೂಲವಾಗುತ್ತದೆ. ಈಗ ನೆಲಮಂಗಲ ತಾಲ್ಲೂಕು ಕೃಷ್ಣರಾಜಪುರದ ಬಳಿ ಒಂದು plantation ಇದೆ. ಅಲ್ಲಿ ಬರೀ ಕುರುಚಲು ಗಿಡ ಮಾತ್ರ ಇದೆ. ಅದನ್ನು ಬಡಜನರಿಗೆ ಒಂದು ಕುಂಟೆ ಜಮೀನೂ ಇಲ್ಲದವರಿಗೆ ಕೊಡಬೇಕೆಂದು ನಾನು ಅನೇಕವೇಳೆ ಮಾನ್ಯ ಸಚಿವರಲ್ಲಿ ಅರಿಕೆಮಾಡಿಕೊಂಡಿದ್ದೇನೆ. ಆದರೆ ಈ ವಿಚಾರದಲ್ಲಿ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಬಹಳ ಶೋಚನೀಯವಾದುದು. ನಮ್ಮ ದೇಶದಲ್ಲಿ ಸ್ವರಾಜ್ಯವನ್ನು ಸ್ಥಾಪನೆಮಾಡಿದ ಮೇಲೆ ಯಾರಿಗೆ ಜಮೀನಿಲ್ಲವೋ ಅಂಥವರಿಗೆ ಜಮೀನು ಕೊಡಬೇಕಾದದ್ದು ನಮ್ಮ ಸರ್ಕಾರದ ಮುಖ್ಯ ಕರ್ತವ್ಯವಾಗಿದೆ ಎಂದು ಹೇಳುತ್ತೇನೆ. ಆದ್ದರಿಂದ ಎಲ್ಲೆಲ್ಲಿ ಕುರುಚಲುಗಿಡ ಮತ್ತು ಲಾಂಟಾನಗಿಡ ಬೆಳೆದಿದೆಯೋ ಅಂಥ ಅರಣ್ಯಗಳನ್ನೆಲ್ಲ release ಮಾಡಿ ಬಡಜನರಿಗೆ ಕೊಡುವುದು ಉತ್ತಮವಾದದ್ದೆಂದು ಮಾನ್ಯ ಸಚಿವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಹೇಳುತ್ತೇನೆ. ನೆಲಮಂಗಲ ತಾಲ್ಲೂಕಿನಲ್ಲಿ ಏಕೆ ಇಡೀ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ದನಗಳನ್ನು ಕಟ್ಟುವ ಪದ್ಧತಿಯೇ ಇಲ್ಲವೆಂದು ಹೇಳಬಹುದು. ದನಗಳು ಅರಣ್ಯದ ಹತ್ತಿರ ಹೋದರೆ ಅವನ್ನು ದೊಡ್ಡಿಗೆ ಹಾಕಿ ದನ ಒಂದಕ್ಕೆ ಐದು ರೂಪಾಯಿಗಳಂತೆ charge ಮಾಡುತ್ತಾರೆ. ಬೇಸಿಗೆಯಲ್ಲಿ ದನಕಾಯುವ ಪದ್ಧತಿ ನಮ್ಮ ರೈತರಲ್ಲಿಲ್ಲ. ಈ ಅರಣ್ಯ ಇಲಾಖೆಯವರು ದನಗಳು ಕಾಡಿಗೆ ಬಂದು ಮೇಯದಂತೆ ನೋಡಿಕೊಳ್ಳಬೇಕಾದರೆ ತಕ್ಕಷ್ಟು ಸಿಬ್ಬಂದಿ ಇರುತ್ತದೆ. ಇವರು ದನಗಳು ಕಾಡಿಗೆ ಬಂದಾಗ ಅವನ್ನು ಅಟ್ಟಿಬಿಟ್ಟರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ದನ ಒಂದಕ್ಕೆ ಐದು ರೂಪಾಯಿನಂತೆ ಕೊಡಬೇಕಾದರೆ ಬಹಳ ತೊಂದರೆಯಾಗುತ್ತದೆ. ಈ ವಿಷಯವನ್ನೂ ಸಹ ಮಾನ್ಯ ಸಚಿವರಲ್ಲಿ ಅನೇಕವೇಳೆ ಅರಿಕೆ ಮಾಡಿಕೊಂಡಿದ್ದೇನೆ.

ಈಗ ನಮ್ಮ ಮಾನ್ಯ ಸ್ನೇಹಿತರಾದ ಬೈರೇಗೌಡರು ಮಾತನಾಡುತ್ತ ಮೇಕೆಗಳಿಂದ ನಮ್ಮ ವನ ಸಂಪತ್ತು ನಾಶವಾಗುತ್ತಿದೆ ಎಂದು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಮೇಕೆಗಳೇನಾದರೂ ಒಂದು ಗಿಡವನ್ನಾಗಲಿ ಸಸಿಯನ್ನಾಗಲಿ ಮುಟ್ಟಿದ್ದೇ ಆದರೆ ಅವು ಖಂಡಿತವಾಗಿ ನಾಶವಾಗುತ್ತವೆ. ನಾವು ಒಂದು ಕಾನೂನು ರಚಿಸಿ ಮೇಕೆಗಳು ಇನ್ನು ಮುಂದೆ ನಮ್ಮ ದೇಶದಲ್ಲಿ ಯಾವ ಗಿಡಮರಗಳನ್ನೂ ತಿನ್ನುವುದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಮೇಕೆಗಳನ್ನು ಯಾರೇ ಇಟ್ಟರಲಿ ಕಡೆಯಪಕ್ಷ ಐದು ರೂಪಾಯಿಗಳನ್ನಾದರೂ ತೆರಿಗೆಯ ರೂಪದಲ್ಲಿ

(ಶ್ರೀ ಡಿ. ಎಂ. ಗೋವಿಂದರಾಜು.)

ಹಾಕಿದ್ದೇ ಆದರೆ ವನಸಂಪತ್ತು ಜಾಸ್ತಿಯಾಗುತ್ತದೆ. ವನಸಂರಕ್ಷಣೆ ಜಾಸ್ತಿಮಾಡಬೇಕು ಎಂಬ ಉದ್ದೇಶ ನೆರವೇರುತ್ತದೆ. ಇಲ್ಲದೆ ಇದ್ದರೆ ಮೇಕೆಗಳಿಂದ ವನಸಂಪತ್ತು ನಾಶವಾಗುವುದೇ ವಿನಾ ವನಮಹೋತ್ಸವ ನೆರವೇರುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ಈ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕಾದರೆ ಎಲ್ಲಿ ಹೆಚ್ಚಿಗೆ ಗಿಡಗಳು ಬೆಳೆಯುತ್ತವೆ, ಎಲ್ಲಿ ಕಾಡು ಹೆಚ್ಚಾಗಿ ಬೆಳೆಯುತ್ತದೆ ಅದನ್ನು ಗಮನಿಸಿ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕಾದುದು ಮುಖ್ಯ ಕರ್ತವ್ಯ. ಆದರೆ ಈಗಿರತಕ್ಕ ಅರಣ್ಯದಲ್ಲಿ ಅನೇಕ ಕಡೆ ಗಿಡಗಳೂ ಇಲ್ಲ, ಮರಗಳೂ ಇಲ್ಲ. ಹುಲ್ಲು ಸಹ ಬೆಳೆಯದೆ ಇರತಕ್ಕ ಅರಣ್ಯಗಳನ್ನು ರಿಸರ್ವ್‌ಮಾಡಿಕೊಂಡಿರುವುದರಲ್ಲಿ ಅರ್ಥವಿಲ್ಲ. ಯಾಕೆಂದರೆ ದಿನೇ ದಿನೇ ಪ್ರಜಾಸಂಖ್ಯೆ ಹೆಚ್ಚುತ್ತಿರುವಾಗ, ವ್ಯವಸಾಯಮಾಡತಕ್ಕ ಜನಗಳು ಜಾಸ್ತಿ ಇರುವುದರಿಂದ ಜಮೀನಿಲ್ಲದೆ ಇರತಕ್ಕವರಿಗೆ ಜಮೀನು ಕೊಡತಕ್ಕದ್ದು ಅಗತ್ಯವೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಸಾಧಾರಣವಾಗಿ ನೂರಾರು ವರ್ಷಗಳಿಂದ ಸಾಲುಮರಗಳನ್ನು ಅಂದರೆ ಹುಣಿಸೆ ಮರಗಳನ್ನು ಮತ್ತು ಇತರ ಮರಗಳನ್ನು ರಸ್ತೆಯ ಪಕ್ಕದಲ್ಲಿ ಬೆಳೆಸಿದ್ದಾರೆ. ಆದರೆ ಈಗ ಅವು ಯಾರ ಜವಾಬ್ದಾರಿಯಲ್ಲಿವೆ ಎಂದು ನನಗೆ ಕಂಡುಬಂದಿಲ್ಲ. ಈಗ ರೆವಿನ್ಯೂ ಇಲಾಖೆಯವರು ಯಾರು ಯಾರಿದ್ದಾರೆ ಅವರೆಲ್ಲ ಈ ಸಾಲುಮರಗಳನ್ನು ಕಡಿಸಿ, ತೆಗೆದುಕೊಂಡುಹೋಗಿ ಉಪಯೋಗಿಸಿಕೊಳ್ಳುತ್ತಾರೆ. ಇದರ ಮೇಲೆ ಪೋಲೀಸ್ ಇಲಾಖೆಯವರೂ ಸಹ ಮರಗಳನ್ನು ಕಡಿಸಿಕೊಂಡುಹೋಗಿ ಉಪಯೋಗಿಸಿಕೊಳ್ಳುತ್ತಾರೆ. ಈ ಸಾಲುಮರಗಳು ಯಾರ ಜವಾಬ್ದಾರಿಯಲ್ಲಿಯೂ ಇಲ್ಲದೆ ಇರುವುದರಿಂದ ಹೀಗಾಗಿದೆ. ಆದುದರಿಂದ ಈ ಸಾಲುಮರಗಳು ಯಾರಯಾರ ಜಮೀನುಗಳ ಪಕ್ಕದಲ್ಲಿವೆಯೋ ಅವರವರಿಗೆ ಈ ಮರಗಳ ಮೇಲಿನ ಹಕ್ಕನ್ನು ಕೊಟ್ಟರೆ ಖಂಡಿತವಾಗಿಯೂ ಈ ಮರಗಳು ರಕ್ಷಣೆಯಾಗುತ್ತದೆ ಮತ್ತು ಅವರು ಇವುಗಳ ಜವಾಬ್ದಾರಿಯನ್ನೂ ತೆಗೆದುಕೊಳ್ಳುತ್ತಾರೆ. ಈಗ ಸಾಲುಮರಗಳಿಗೆ ಯಾರೂ ಜವಾಬ್ದಾರರಿಲ್ಲದೆ ಇರುವುದರಿಂದ ರಾತ್ರಿಯ ಹೊತ್ತು ಮರಗಳನ್ನು ಕಡಿಯುವುದು ಹಾಗಿರಲಿ ಹಗಲು ಹೊತ್ತಿನಲ್ಲಿಯೇ ಮರಗಳನ್ನು ಕಡಿಯುತ್ತಾರೆ. ಆದ್ದರಿಂದ ಈ ಸಾಲು, ಮರಗಳನ್ನು ಪಕ್ಕದಲ್ಲಿರುವ ಜಮೀನುದಾರರಿಗೆ ವಹಿಸಿ ಕೊಟ್ಟರೆ ಮರಗಳು ಕಡಿಯುವುದು ನಿಂತುಹೋಗಿ, ಅವುಗಳ ಸಂರಕ್ಷಣೆಯಾಗುತ್ತದೆ ಎಂದು ನಾನು ಸರ್ಕಾರಕ್ಕೆ ಸಲಹೆಮಾಡುತ್ತೇನೆ.

ಜೊತೆಗೆ ಈ ಅರಣ್ಯಗಳು ಪಟ್ಟಣಗಳಲ್ಲಿರುವವರಿಗೆ ಮೀಸಲಾಗಿದೆ ಎಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ಯಾಕೆಂದರೆ ಪಟ್ಟಣಗಳಿಗೆ ಬೇಕಾದ ಸೌದೆಯನ್ನು ತೋಪುಗಟ್ಟಲೆ ಅಲ್ಲಿಗೆ ಸಾಗಿಸಿ ಕಾಡನ್ನೆಲ್ಲ ಕಡಿಮೆಮಾಡುತ್ತಿದ್ದಾರೆ. ಅದರ ಬದಲು ಪಟ್ಟಣಗಳಲ್ಲಿ ನೀರು ಕಾಯಿಸುವುದಕ್ಕೆ ಮತ್ತು ಅಡಿಗೆಗೆ, ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದರೆ ಮರಗಳನ್ನು ಕಡಿಯುವುದು ಕಡಿಮೆಯಾಗುತ್ತದೆ. ಅದು ಬಿಟ್ಟು ಅರಣ್ಯ ಇಲಾಖೆಯವರು ಹೆಚ್ಚು ಮರಗಳನ್ನು ಕಡಿದು ಸಾಗಿಸುತ್ತಿದ್ದಾರೆ. ಇದರಿಂದ ದೇಶದ ಸಂಪತ್ತು ಹಾಳಾಗಿಹೋಗುವುದಲ್ಲದೆ, ಮರಗಳು ಹೆಚ್ಚಾಗಿ ಇರುವುದರಿಂದ ಮಳೆ ಚೆನ್ನಾಗಿ ಬಂದು ರೈತರು ತಮ್ಮ ಫಸಲನ್ನು ಬೆಳೆದುಕೊಳ್ಳಲು ಅನುಕೂಲವಾಗುವುದೂ ಸಹ ಮರಗಳನ್ನು ಕಡಿದು ಕಾಡನ್ನು ಕಡಿಮೆ ಮಾಡುವುದರಿಂದ ಕಡಿಮೆಯಾಗಿ ತೊಂದರೆಯಾಗುತ್ತದೆ. ಆದುದರಿಂದ ಆದಷ್ಟುಮಟ್ಟಿಗೆ ಕಾಡುಗಳಲ್ಲಿ ಮರಗಳನ್ನು ಕಡಿಯುವುದನ್ನು ನಿಲ್ಲಿಸತಕ್ಕದ್ದು ಸೂಕ್ತವೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಗ್ರಾಮಾಂತರಗಳಲ್ಲಿ ಗಾಡಿ, ನೇಗಿಲು ಮತ್ತು ಇತರ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕೆ ರೈತರಿಗೆ ತುಂಬ ತೊಂದರೆ ಇದೆ. ರೈತರಿಗೆ ಕಾಡಿನಲ್ಲಿ ಇರತಕ್ಕ ಮರಗಳನ್ನು ಕಡಿಯಬೇಕಾದರೆ ಲೈಸೆನ್ಸ್ ಪಡೆಯುವುದಕ್ಕೆ ಬರುವುದಿಲ್ಲ. ಅವರೇನಾದರೂ ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರೂ Forest Guard, Ranger ಇವರುಗಳು ತೊಂದರೆ ಕೊಡುತ್ತಾರೆ. ಆದ್ದರಿಂದ ಸರ್ಕಾರದವರು ರೈತರಿಗೆ ಮುಖ್ಯವಾಗಿ ಬೇಕಾದ ಮುಟ್ಟುಗಳನ್ನು ಮಾಡಿಕೊಳ್ಳಲು ಮರಗಳನ್ನು ಕಡಿಯುವುದಕ್ಕೆ ಮಾಫಿ ಲೈಸೆನ್ಸ್ ಕೊಟ್ಟು ಅವರಿಗೆ ವ್ಯವಸಾಯಮಾಡುವುದಕ್ಕೆ ಸಹಾಯಮಾಡಬೇಕು ಎಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಹಿಂದೆ ನಮ್ಮಲ್ಲಿ ವನಮಹೋತ್ಸವ ಮಾಡಿದರು. ಆಗ ಎಲ್ಲೆಲ್ಲೂ ಮರಗಳನ್ನು ನೆಡಬೇಕೆಂದು ಮಾಡಿದರು. ಅದು ಈಚೆಗೆ ಕಡಿಮೆಯಾಗುತ್ತಿದೆ. ಸರ್ಕಾರದವರು ಈ ವಿಚಾರದಲ್ಲಿ ಗ್ರಾಮಾಂತರದಲ್ಲಿರುವ ಜನಗಳಿಗೆ ಪ್ರೋತ್ಸಾಹ ಕೊಟ್ಟು ತೋಪುಗಳನ್ನು ಬೆಳೆಸುವುದನ್ನೂ, ಸಾಲುಮರಗಳು ಎಲ್ಲೆಲ್ಲಿ ಹೋಗಿವೆಯೋ ಅಲ್ಲೆಲ್ಲ ಹೊಸದಾಗಿ ಮರಗಳನ್ನು ನೆಡುವುದನ್ನೂ ಮಾಡಲು ಉತ್ತೇಜನ ಕೊಡಬೇಕು. ಇದರಿಂದ ವೃಕ್ಷಸಂಪತ್ತು ಹೆಚ್ಚುವುದಕ್ಕೆ ಅವಕಾಶವಿದೆಯೆಂದು ಹೇಳುತ್ತೇನೆ.

ಶ್ರೀಮತಿ ಸುಬ್ಬಮ್ಮನವರು, ಗೋಮಾಳ ಮತ್ತು ಅರಣ್ಯ ಇಲಾಖೆಯಿಂದ ಜಮೀನನ್ನು ವ್ಯವಸಾಯಕ್ಕೆ ಕೊಡುವುದು ಒಳ್ಳೆಯದಲ್ಲವೆಂದು ಹೇಳಿದರು. ಅವರು ಮಲೆನಾಡಿನಲ್ಲಿ ಮರಗಳು ಬೇಕಾದಷ್ಟಿವೆ. ಅಲ್ಲಿಯ ಕಾಡಿನಲ್ಲಿ ಜಮೀನನ್ನು ಕೊಡದೆ ಇದ್ದರೂ ಪರವಾ ಇಲ್ಲವೆಂದು ತಿಳಿದುಕೊಂಡಿದ್ದಾರೆ. ಅಲ್ಲಿ ಜಮೀನು ಮಾಡಲು ಜನಗಳೇ ದಿಕ್ಕಿಲ್ಲ. ಆದರೆ ಮೈದಾನ ಪ್ರದೇಶದಲ್ಲಿ ಬೇಕಾದಷ್ಟು ಜನಗಳಿರುವುದರಿಂದ ಅನೇಕ ಜನರಿಗೆ ಜಮೀನಿಲ್ಲದೆ ಹೊಟ್ಟೆಬಟ್ಟೆಗೆ ಬಹಳ ಕಷ್ಟ ಪಡುತ್ತಿರುವುದರಿಂದ ಅವರಿಗೆ ಜಮೀನು ಕೊಡಬೇಕಾದದ್ದು ನ್ಯಾಯವಾದದ್ದು. ಮಲೆನಾಡಿನಲ್ಲಿ ಯಥೇಷ್ಟವಾಗಿ ಮಳೆ ಬೀಳುವ ಕಡೆ ಕಾಡಿನ ಜಮೀನನ್ನ ವ್ಯವಸಾಯಕ್ಕೆ ಕೊಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮೈದಾನ ಪ್ರದೇಶದ ಕಾಡುಗಳಲ್ಲಿ ಬರೀ ಕುರುಚಲುಗಿಡ ಸಹ ಬೆಳೆಯದೆ ಇರತಕ್ಕ ಪ್ರದೇಶವನ್ನು ಮಾತ್ರ ಬಡ ರೈತರಿಗೆ ವ್ಯವಸಾಯಕ್ಕೆ ಕೊಡಬೇಕೆಂದು ಹೇಳುತ್ತೇನೆ.

4 P.M.

ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ವ್ಯವಸಾಯದ ವಿನಾ ಇನ್ನಾವ ಉದ್ಯಮವೂ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಒಂದು ದೊಡ್ಡ ಮನಸ್ಸುಮಾಡಿ ಮಾನ್ಯ ಅರಣ್ಯ ಮಂತ್ರಿಗಳೂ ಕೂಡ ಪರಿಶೀಲನೆ ಮಾಡಬೇಕು, ಬೇಕಾದಷ್ಟು ಅಡವಿ ಇದೆ. ನಿಜವಾಗಿಯೂ ಇವೊತ್ತು ಪ್ರಜಾಪ್ರಭುತ್ವ ಬಂದಿರತಕ್ಕ ಕಾಲದಲ್ಲಿ ಜನಗಳಿಗೆ ಆಹಾರ ಇಲ್ಲ ಅಂಥರ ಖಂಡಿತವಾಗಿಯೂ ನಾಚಿಕೆಗೇಡು ಆಗುತ್ತದೆ. ಆದ್ದರಿಂದ

ಜಮೀನು ಇರತಕ್ಕಕಡೆ ಖಂಡಿತವಾಗಿಯೂ ಜನಗಳಿಗೆ ಜಮೀನು ಕೊಡುವುದು ಬಹಳ ಒಳ್ಳೆಯದು ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅರಣ್ಯಕ್ಕೆ ಸಂಬಂಧಪಟ್ಟ ಜೇನುತುಪ್ಪ, ಹುಣಸೇಹಣ್ಣು ಇವುಗಳನ್ನೆಲ್ಲಾ ಶೇಖರಿಸಿ ಮಾರಾಟ ಮಾಡಿದರೆ ನಿಜವಾಗಿಯೂ ಸರ್ಕಾರದವರಿಗೆ ಹೆಚ್ಚು ಆದಾಯ ಬರುತ್ತದೆ. ಮಲೆನಾಡಿನಲ್ಲಿ ಅರಣ್ಯಗಳನ್ನು ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಮಲೆನಾಡಿನಲ್ಲಿ ಹೆಚ್ಚು ಅಭಿವೃದ್ಧಿಪಡಿಸಿ ಮೈದಾನ ಪ್ರದೇಶದಲ್ಲಿರತಕ್ಕ ಜಮೀನುಗಳನ್ನು ಬಡವರಿಗೆ ಕೊಡಬೇಕು. ಸ್ವಾಮಿ, ಈ ವಿಷಯದಲ್ಲಿ ಹೆಚ್ಚುವರಿ ಹೇಳುವುದಿಲ್ಲ. ನಿಜವಾಗಿಯೂ ಬಡಜನರು ಹೊಟ್ಟೆ ಬಟ್ಟೆಗೆ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಗ್ರಾಮಾಂತರಗಳಲ್ಲಿ ಪ್ರತಿಯೊಂದು ಮನೆಯನ್ನೂ ನೋಡಿದರೆ ತಮಗೇ ಗೊತ್ತಾಗುತ್ತದೆ. ಖಂಡಿತವಾಗಿಯೂ 100ಕ್ಕೆ 50 ಮನೆಗಳವರಿಗೆ ಜಮೀನಿಲ್ಲದೆ, 25 ಎಕರೆ ಇರತಕ್ಕ ಜಮೀನುದಾರರನ್ನು ನಂಬಿಕೊಂಡು ಜೀವನ ಮಾಡುತ್ತಾ ಇದ್ದರೆ, ವರ್ಷದಲ್ಲಿ ಮೂರು ತಿಂಗಳು ಸುಗ್ಗಿಕಾಲದಲ್ಲಿ ಮಾತ್ರ ಅವರ ಜೀವನಕ್ಕೆ ಅನುಕೂಲ ಇದೆಯೇ ವಿನಾ ಬಾಕಿ ಒಂಭತ್ತು ತಿಂಗಳು ಗಂಜಿ ಕುಡಿದುಕೊಂಡು ಕಾಲಾಹರಣ ಮಾಡಬೇಕಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸ ಮಾಡಿಸಿ ಇತರರಂತೆ ದೇಶದಲ್ಲಿ ಮುಂದಕ್ಕೆ ಬರಬೇಕಾದರೆ ಅವರಿಗೆ ಖಂಡಿತವಾಗಿಯೂ ಜಮೀನು ಕೊಡಬೇಕು. ಸಾವಿರಾರು ಎಕರೆ ಜಮೀನು ಅರಣ್ಯದಲ್ಲಿ ಇದೆ, ಅದನ್ನು ಐದು ಎಕರೆಯಂತೆ ಬಡವರಿಗೆ ಕೊಡಬೇಕೆಂದು ಹೇಳುತ್ತಿಲ್ಲ. ದೊಡ್ಡ ದೊಡ್ಡ ಗಿಡಮರಗಳು ಇದ್ದರೆ ಅಂಥವನ್ನು ಅಭಿವೃದ್ಧಿಪಡಿಸಿ ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಬಡಜನಗಳಿಗೆ ಜಮೀನು ಕೊಡುವುದು ಸೂಕ್ತ. ಇದನ್ನು ಸರ್ಕಾರದವರು ಪರಿಶೀಲನೆಮಾಡಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಕೊನೆಗೆ ಭಾಷಣ ಮಾಡಿದ ಶ್ರೀ ಹನುಮಯ್ಯನವರು ಮೈದಾನ ಪ್ರದೇಶದಲ್ಲಿರತಕ್ಕ ಅಲ್ಪಸ್ವಲ್ಪ ಅರಣ್ಯವನ್ನು ಸಾಗುವಳಿಗೆ ಕೊಡಬೇಕೆಂದು ಹೇಳಿ ಬಹಳ ಒತ್ತಾಯ ಪೂರ್ವಕವಾಗಿ ಸರ್ಕಾರದವರಲ್ಲಿ ಒಂದು ವಿನಂತಿ ಮಾಡಿಕೊಂಡರು. ನಾನೂ ಕೂಡ ಶ್ರೀಮತಿ ಸುಬ್ಬಮ್ಮನವರು ಏನು ವ್ಯಕ್ತಪಡಿಸಿದರೋ ಆ ಅಂಶವನ್ನೇ ಒತ್ತಾಯಪೂರ್ವಕವಾಗಿ ಸರ್ಕಾರದವರಿಗೆ ತಿಳಿಸಬೇಕೆಂದಿದ್ದೇನೆ. ಈಗಾಗಲೇ ನಮ್ಮ ಸಂಸ್ಥಾನದಲ್ಲಿ ಅರಣ್ಯ ಸಂಪತ್ತು ಬಹುಮಟ್ಟಿಗೆ ಕ್ಷೀಣ ಹೊಂದಿದೆ. ಅದರ ಫಲವಾಗಿ ನಾವು ಎಷ್ಟುಮಟ್ಟಿಗೆ ಕಷ್ಟಪಡುತ್ತಾ ಇದ್ದೇವೆ ಎಂಬುದು ಎಲ್ಲರಿಗೂ ಗೊತ್ತಾದ ವಿಷಯ. ಆದ್ದರಿಂದ ಈ ಸಭೆಯಲ್ಲಿನ ಮಾನ್ಯ ಸದಸ್ಯರುಗಳೇ ಆಗಲಿ, ಅಥವಾ ಹೊರಗಿನ ಪ್ರತಿಭಾವಂತರೇ ಆಗಲಿ ಸರ್ಕಾರದಮೇಲೆ ಯಾವ ವಿಧವಾದ ಒತ್ತಾಯ ತಂದರೂ ಕೂಡ ಅರಣ್ಯವನ್ನು ಸಾಗುವಳಿಗೆ ಕೊಡುವುದಕ್ಕೆ ಖಂಡಿತ ಒಪ್ಪಬಾರದು ಎಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಗೋಮಾಳಗಳನ್ನು ಕೂಡ ಸಾಗುವಳಿಗೆ ಕೊಡುತ್ತಾ ಇದ್ದಲ್ಲಿ ನಿಲ್ಲಿಸಬೇಕು. ಏಕೆಂದರೆ ಈಗ ಗೋಮಾಳವನ್ನು ಕೊಡಬೇಕೆಂಬ ಸಮಾಚಾರ ಬಂದಿತ್ತು. ಆ ರೀತಿ ಗೋಮಾಳವನ್ನು ಸಾಗುವಳಿಗೆ ಕೊಟ್ಟರೆ ಪಶು ಸಂಪತ್ತಿನ ಗತಿ ಏನು? ಈಗ ದೇಶದಲ್ಲಿ ಪಶು ಸಂಪತ್ತು ಯಾವ ಶೋಚನೀಯ ಸ್ಥಿತಿಯಲ್ಲಿದೆ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು.

ಇನ್ನು ಅರಣ್ಯ ಬೆಳೆಸುವ ವಿಚಾರದಲ್ಲಿ ಹೇಳುವುದಾದರೆ, ಅರಣ್ಯ ಸಂಪತ್ತನ್ನು ಬೆಳೆಸಬೇಕು. ಆ ಬಗ್ಗೆ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಶ್ರದ್ಧೆ ವಹಿಸಬೇಕೆಂದು ಕೆಲವು ವಿನಂತಿಗಳು ಬಂದಿವೆ. ಈಗೇನೋ ಸರ್ಕಾರದವರು ಒಂದು ಪ್ಲಾನ್ ಇಟ್ಟುಕೊಂಡಿದ್ದೀರಿ. ಆ ಪ್ಲಾನನ್ನು ಸರಿಯಾದ ಕ್ರಮದಲ್ಲಿ ಮುಂದುವರಿಸಿಕೊಂಡು ಹೋದರೆ ಪ್ರೋಗ್ರೆಸ್ ಆಗುತ್ತದೆ. ಆದರೆ ಏನೋ ಕಾರಣದಿಂದ ಹಾಕಿ ಕೊಂಡಿರುವ ಪ್ಲಾನ್ ಪ್ರಕಾರ ಕೆಲಸ ನಡೆಯುತ್ತಿಲ್ಲ ಎಂಬ ಅನುಮಾನ ಬಂದಿದೆ. ನಾನು ಸುಮಾರು ಎರಡು ವರ್ಷಗಳ ಹಿಂದೆ ಚೀಫ್ ಕನ್ಸರ್ವೇಟರ್‌ರವರನ್ನು ನಮ್ಮ ಪ್ರಾಂತದಲ್ಲಿ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಸೂಕ್ತ ಸಲಹೆ ಕೊಡಬೇಕೆಂದು ಹೇಳಿ ಕೇಳಿಕೊಂಡಿದ್ದೆ. ಅವರು ನನ್ನ ವಿನಂತಿಗೆ ಮಾನ್ಯತೆ ಕೊಟ್ಟು ಸ್ಥಳೀಯ ಅಧಿಕಾರಿಗಳಿಗೆ ಅಪ್ಪಣೆ ಕೊಟ್ಟರು. ಆದರೆ ಸ್ಥಳೀಯ ಅಧಿಕಾರಿಗಳು ಏನೋ ಕಾರಣದಿಂದ ಗಮನ ಕೊಡದೆ ಎಷ್ಟುಮಟ್ಟಿಗೆ ಕೆಲಸ ಮಾಡಬೇಕಾಗಿತ್ತೋ ಅಷ್ಟುಮಟ್ಟಿಗೆ ಕೆಲಸ ಆಗುತ್ತಾ ಇಲ್ಲ. ಆದ್ದರಿಂದ ಮುಖ್ಯವಾಗಿ ನಾನು ಕೇಳಿಕೊಳ್ಳುವುದು ಏನೆಂದರೆ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು ಮತ್ತು ಪ್ರತಿಭಾವಂತರು ಬಂದು ಸರ್ಕಾರದಲ್ಲಾಗಲಿ, ಇಲಾಖಾ ಮೊಖ್ತೇಸರರಲ್ಲಾಗಲಿ ವಿನಂತಿ ಮಾಡಿ ಅರಣ್ಯ ಸಾಗುವಳಿಗೆ ಕೊಡಬೇಕೆಂದರೆ ಖಂಡಿತವಾಗಿಯೂ ಕೊಡಬಾರದು ಎಂದು ಸರ್ಕಾರದವರಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಅರಣ್ಯ ಶಾಖೆಯ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ನನ್ನ ಇಷ್ಟವಿದೆ. ಶ್ರೀಮತಿ ಸುಬ್ಬಮ್ಮನವರೂ ಶ್ರೀ ಸಿದ್ದಪ್ಪನವರೂ ಹೇಳಿದ ವಿಷಯಗಳು ಸೂಕ್ತವಾಗಿವೆ. ನಿಜವಾಗಿಯೂ ಅರಣ್ಯ ಸಂಪತ್ತನ್ನೊಳಗೊಂಡ ಜಮೀನನ್ನು ಸಾಗುವಳಿಗೆ ಕೊಡುವುದು ನ್ಯಾಯವಾದುದಲ್ಲ. ಆದರೆ ನಮ್ಮ ಕಡೂರು ತಾಲ್ಲೂಕಿನಲ್ಲಿ ಸರ್ಕಾರದವರಿಗೆ ಸೇರಿದ ಕೆಲವು ಅರಣ್ಯಗಳು ಇವೆ. ಅಲ್ಲಿ ಐದು ಅಡಿ ಮೇಲೆ ಗಿಡ ಬೆಳೆಯುವುದಿಲ್ಲ. ಮನುಷ್ಯರು ನಿಂತುಕೊಂಡರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚೆನ್ನಾಗಿ ಕಾಣುತ್ತದೆ. ಅದೂ ಒಂದು ಅರಣ್ಯ, ಕಾಡು, ಅದಕ್ಕೂ ಅಧಿಕಾರಿಗಳು, ನೌಕರರು ಎಲ್ಲರೂ ಇದ್ದೇ ಇದ್ದಾರೆ. ಅದಕ್ಕೆ ಖರ್ಚು ಎಷ್ಟಾಗಬೇಕೋ ಅಷ್ಟೂ ಆಗುತ್ತಿದೆ. ಅದನ್ನು ಅನೇಕ ಸಾರಿ ಸರ್ಕಾರದವರ ಗಮನಕ್ಕೆ ತಂದು ಆ ಫಾರೆಸ್ಟಿನಲ್ಲಿ ಗಿಡ ಇಲ್ಲ ಅದನ್ನು ಸಾಗಿಗೆ ಕೊಡಬೇಕೆಂದು ಒತ್ತಾಯ ಮಾಡಿದರೂ ಕೂಡ ಕೊಟ್ಟಿಲ್ಲ. ಈಗಲೂ ಕೂಡ ಮಾನ್ಯ ಮಂತ್ರಿಗಳು ಬೇಕಾದರೆ ಅಲ್ಲಿಗೆ ಹೋಗಿ ಪರೀಕ್ಷೆಮಾಡಿ ನೋಡಿದರೆ ಗೊತ್ತಾಗುತ್ತದೆ; ಹೌದು, ಮೊದಲು ಸಾಗಿಗೆ ಕೊಡಬೇಕೆಂದು ಅವರೇ ಒಪ್ಪಿಕೊಳ್ಳುತ್ತಾರೆ. ಅನೇಕ ಹಳ್ಳಿಗಳ ಕಡೆಗಳಲ್ಲಿ ಎರಡು ಸಾವಿರ, ಮೂರು ಸಾವಿರ ಎಕರೆ ಜಮೀನು ಇರುತ್ತದೆ. ಅಲ್ಲಿ ಗೋಮಾಳ ಇಲ್ಲ. ದನಗಳಿಗೆ ಗೋಮಾಳ ಬಿಟ್ಟುಕೊಡಿ ಎಂದರೆ ಇದುವರೆಗೂ ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲ. ಎರಡನೆಯದಾಗಿ ಅಮೃತ ಮಹಲ್ ಕಾವಲು ಇದೆ. 2,000 ಎಕರೆಗೆ ಮೇಲ್ಪಟ್ಟು ಹುರುಳಿ ಸಾಗಿಗೆ ಕೊಟ್ಟಿದ್ದೀರಿ. ಎಕರೆಗೆ 25 ಸೇರು ಹುರುಳಿಕಾಳಿನಂತೆ ಕೊಡಬೇಕೆಂದು ತೀರ್ಮಾನಮಾಡಿರುತ್ತೀರಿ. ಅದೂ ಕೂಡ ಬಾಕಿ ಇದೆ.

(ಶ್ರೀ ವೈ. ಎಂ. ಚಂದ್ರಶೇಖರಯ್ಯ)

ನಾಲ್ಕು ವರ್ಷದ ಬಾಕಿ ಕೊಡಬೇಕು ಮಾಫಿ ಮಾಡಿ ಎಂದು ಹೇಳಿ ಮೊನ್ನೆ ಕೆಲವರು ಬಂದು ಹೇಳಿದರು ಎಂದು ಕಾಣುತ್ತದೆ. ಆ ರೀತಿ ಕೊಡದೇ ಇದ್ದರೆ ಅವರನ್ನು ಜಮೀನಿನಿಂದ ಬಿಡಿಸಿ ಹುರುಳಿ ಸಾಗಿಗೆ ಕೊಡತಕ್ಕ ಜಮೀನನ್ನು ಜಮೀನಿಲ್ಲದವರಿಗೆ, ರೈತರಿಗೆ ಕೊಡುವುದು ಬಹಳ ಸೂಕ್ತ ಎಂದು ಹೇಳುತ್ತೇನೆ. ಹುರುಳಿ ಸಾಗಿಗೆ ಕೊಟ್ಟಾಗ 40 ರೂಪಾಯಿ ಧಾರಣೆ ಇತ್ತು. ಈಗ 15 ರೂಪಾಯಿ ಹಾಕಿಕೊಳ್ಳಿ ಎಂದು ನಿನ್ನೆ ಕೂಡ ಒಂದು ಗುಂಪು ಬಂದಿತ್ತು. ಆ ರೇಟ್ ಹಿಂದೆ ಯಾವುದು ಇತ್ತೋ ಅದನ್ನು ಬಿಡಕೂಡದು, ನ್ಯಾಯವಾಗಿ ಬರಬೇಕಾದ ಧಾರಣೆಯನ್ನು ಕಡ್ಡಾಯವಾಗಿ ತೆಗೆದುಕೊಂಡೇತೀರಬೇಕು ; ಮತ್ತು ಸರಿಯಾಗಿ ಕೊಡದೇ ಇದ್ದಪಕ್ಷದಲ್ಲಿ ಅವರನ್ನು ಬಿಡಿಸಿ ಬಡವರಿಗೆ ಜಮೀನು ಕೊಡುವುದು ಬಹಳ ಸೂಕ್ತ ಎಂದು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಆಮೇಲೆ ನಮ್ಮ ಕಡೂರು ತಾಲ್ಲೂಕಿನಲ್ಲಿ ಸೇಂದಿವನ ಬೇಕಾದಷ್ಟು ಇದೆ. 50 ಅಥವಾ 100 ಮರ ಇರುವುದೂ ಒಂದು ಸೇಂದಿ ವನ. ಅಂಥಾದ್ದು ಸರ್ಕಾರದವರ ಲೆಕ್ಕದಲ್ಲಿ ಇದೆ. ಅದನ್ನು ಅಲ್ಲಿರತಕ್ಕ ಜಮೀನಿಲ್ಲದೇ ಇರತಕ್ಕ ರೈತರಿಗೆ ಕೊಡುವುದು ಬಹಳ ಸೂಕ್ತ. ಅವನ್ನು ರೆವಿನ್ಯೂ ಕಮಿಷನರು ಮತ್ತು ಇನ್ನೂ 3-4 ಜನ ಅಧಿಕಾರಿಗಳು ಬಂದು ಪರೀಕ್ಷೆ ಮಾಡಿದರು, ನಾನೂ ಕೂಡ ಹೋಗಿದ್ದೆ. ಅವರ ವರದಿ ಇನ್ನೂ ಬಂದಿಲ್ಲ. ಕಡೂರು ತಾಲ್ಲೂಕು ದೊಡ್ಡ ತಾಲ್ಲೂಕು. ಜನಸಂಖ್ಯೆ ಜಾಸ್ತಿ, ಜಮೀನು ಸಾಗುವಳಿಗೆ ಇರತಕ್ಕದ್ದು ಬಹಳ ಕಮ್ಮಿ, ಆದ್ದರಿಂದ ಕಾಡು ಇಲ್ಲದೇ ಇರತಕ್ಕ ಜಮೀನನ್ನು ಜಮೀನಿಲ್ಲದ ರೈತರಿಗೆ ಸಾಗುವಳಿಗೆ ಕೊಡುವುದು ಬಹಳ ಸೂಕ್ತ ಎಂದು ಸರ್ಕಾರದವರಲ್ಲಿ ಈ ಮೂಲಕ ಒತ್ತಾಯಪಡಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಈ ಬಡ್ಜೆಟ್ಟಿನಲ್ಲಿ ಡೆವಲಪ್‌ಮೆಂಟ್ ಸ್ಕೀಂಸ್ ಎಂದು ಹೇಳಿ ಡೆವಲಪ್‌ಮೆಂಟ್ ಸ್ಕೀಂಗೆ 2 ಲಕ್ಷ 27 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ Afforestation of Forest Areas ಎಂದು ಹೇಳಿ 1,46,500 ರೂಪಾಯಿ ಒದಗಿಸಿದ್ದಾರೆ. ನಾನು ಹೋದ ಕಡೆಯಲ್ಲೆಲ್ಲಾ ಈ ಇಲಾಖೆಯವರು ಮಾಡುತ್ತಾ ಇರತಕ್ಕ ಕೆಲಸವನ್ನು ಪರೀಕ್ಷೆ ಮಾಡಿ ನೋಡಿದ್ದೇನೆ. ಸುಮ್ಮನೆ ಅಲ್ಲೊಂದು 'ಸರ್ಕಾರಿ ಫಾರೆಸ್ಟು' ಎಂದು ಬೋರ್ಡು ಇರುತ್ತದೆಯೋ ಹೊರತು ಒಳಗಡೆ ಮರಗಳೇನೂ ಕಾಣುವುದಿಲ್ಲ. ಒಳಗಡೆ ಹೋಗಿ ನೋಡಿದರೆ ಗುದ್ದಲಿ, ಹಾರೆ ಹಾಕಿ ಅಗೆದಿರುವ ಗುರುತು ಇರುತ್ತದೆಯೇ ಹೊರತು ಗಿಡಗಳಿರುವುದು ಎಲ್ಲೂ ಕಾಣುವುದಿಲ್ಲ. ಹಿಂದಿನ ಕಾಲದಿಂದ ಬೆಳೆದುಕೊಂಡುಬಂದಿರತಕ್ಕ ಕೆಲವು ಗಿಡಗಳನ್ನು ಬಿಟ್ಟುಬಿಟ್ಟರೆ ಹೊಸದಾಗಿ ಯಾವುದೂ ಬೆಳೆಸಿರುವುದು ಕಂಡುಬರುವುದಿಲ್ಲ. ಯಾವ ಊರಿನಲ್ಲಿ ನೋಡಲಿ ಅದರಲ್ಲೂ ಮೈದಾನ ಪ್ರದೇಶದಲ್ಲಿ ಗಿಡಗಳನ್ನು ಚೆನ್ನಾಗಿ ಬೆಳೆಸಿಲ್ಲ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಮಾತ್ರ ಆಗಿದೆ. ನಾನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುವುದೇನೆಂದರೆ 2 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡುವಾಗ ಮಾನ್ಯ ಮಂತ್ರಿಗಳು ಪ್ರವಾಸ ಹೋದಾಗ ಯಾವ ಯಾವ ಜಿಲ್ಲೆಯಲ್ಲಿ ಯಾವಯಾವ ಅರಣ್ಯಗಳು ಇವೆ. ಆ ಪ್ರದೇಶದಲ್ಲಿ ಹೊಸದಾಗಿ ಅರಣ್ಯ ಅಭಿವೃದ್ಧಿ ಪಡಿಸಿದ್ದಾರೆಯೆ ಎಂಬುದನ್ನು ನೋಡಿ, ದುಡ್ಡು ನ್ಯಾಯವಾಗಿ ಖರ್ಚಾಗುತ್ತಾ ಇದೆಯೋ, ಅದಕ್ಕೆ ತಕ್ಕ ಪ್ರತಿಫಲ ಬರುತ್ತಾ ಇದೆಯೋ ಎಂಬುದನ್ನು ಅವರ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮ ಸ್ನೇಹಿತರು ಹೇಳಿದಹಾಗೆ, ಹೊಸದಾಗಿ ಗಿಡಗಳನ್ನು ಹಾಕುವುದು ಮುಖ್ಯವಾದದ್ದು ಮತ್ತು ಡಿಪಾರ್ಟ್‌ಮೆಂಟಿನವರು ಸ್ವಲ್ಪ ಬಿಗಿಯಾಗಿಟ್ಟುಕೊಂಡು ಕಾಡಿನಲ್ಲಿರತಕ್ಕ ಗಿಡ ಮರಗಳನ್ನು ಕಡಿಯದಂತೆ ಬಂದೋಬಸ್ತುಮಾಡಿದರೆ ಎಷ್ಟೋ ಉಪಕಾರಮಾಡಿದ ಹಾಗಾಗುತ್ತದೆ. ಎರಡನೆಯದಾಗಿ ಅವರೇ ಗಿಡಗಳನ್ನು ಹಾಕುವುದಕ್ಕೆ ಬದಲಾಗಿ—ರೆವಿನ್ಯೂ ಇಲಾಖೆಯಲ್ಲಿ ಒಂದು ಸಿಸ್ಟಂ ಇದೆ—ಜನಗಳೇ ಊರಿನ ಹತ್ತಿರ ವನಗಳನ್ನು ಬೆಳೆಸಿಕೊಂಡು ಅದರಿಂದ ಬರತಕ್ಕ ಫಲಗಳನ್ನು ಎಂದರೆ ತೆಂಗಿನಕಾಯಿ, ಮಾವಿನ ಹಣ್ಣು, ಮುಂತಾದವುಗಳಿಂದ ಬರತಕ್ಕ ಉತ್ಪನ್ನವನ್ನು ಅನುಭವಿಸಿಕೊಂಡು ಹೋಗುವುದು, ಈ ರೀತಿಯಾದ ಕ್ರಮವನ್ನು ಇನ್ನೂ ಹೆಚ್ಚಾದ ರೀತಿಯಲ್ಲಿ ಪ್ರಚಾರಮಾಡಿ, ಅಯಾ ಊರಿನ ಪಕ್ಕದಲ್ಲಿ ಅಥವಾ ಮನೆಗಳ ಹತ್ತಿರದಲ್ಲಿ, ಸರ್ಕಾರಿ ಜಮಾನು ಅಥವಾ ಬೇರೆ ರೀತಿಯಲ್ಲಿ ಪ್ರಯೋಜನಕ್ಕೆ ಬರದೇ ಇರತಕ್ಕ ಸ್ಥಳಗಳಲ್ಲಿ ಖಾಸಗೀ ಜನಗಳಿಂದಲೇ ಸಣ್ಣಸಣ್ಣ ವನಗಳನ್ನು ಮಾಡಿಸಿ ಅದರ ಫಲವನ್ನು ಅವರೇ ಅನುಭವಿಸಿಕೊಳ್ಳುವಂತೆ ಮಾಡಬೇಕು. ಜಮಾನಿನ ಮೇಲಾಗಲಿ ಮರಗಳ ಮೇಲಾಗಲಿ ಅವರಿಗೆ ಹಕ್ಕು ಇರುವುದಿಲ್ಲ. ಆರೀತಿ ಹೆಚ್ಚಿನ ರೀತಿಯಲ್ಲಿ ಪ್ರಚಾರಮಾಡಿ ಆಚರಣೆಗೆ ತರುವುದು ಬಹಳ ಉಚಿತವಾಗಿದೆ. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಬಹಳ ಚೆನ್ನಾಗಿ ಅಂಥ ವನಗಳನ್ನು ಮಾಡಿಕೊಂಡಿದ್ದಾರೆ.

* ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಈ ಫಾರೆಸ್ಟು ಬಾಬಿಗೆ ಸಂಬಂಧಪಟ್ಟಂತೆ ನಾನು ಚಿತ್ರದುರ್ಗಜಿಲ್ಲೆಯ ಕೆಲವು ತೊಂದರೆಗಳನ್ನು ತಿಳಿಸಬೇಕೆಂದು ಇಷ್ಟಪಡುತ್ತೇನೆ. ಚಿತ್ರದುರ್ಗದಲ್ಲಿ ಎಲ್ಲಿ ನೋಡಿದರೂ ಕೂಡ ಗೋಮಾಳವಾಗಲಿ ದನಗಳಿಗೆ ಮೇಯುವುದಕ್ಕೆ ಬೇಕಾಗಿರತಕ್ಕ ಬೇರೆ ಯಾವುದಾದರೂ ಸಾರ್ವಜನಿಕ ಪ್ರದೇಶವಾಗಲಿ ಇಲ್ಲ. ಅಲ್ಲಿರತಕ್ಕ ಒಂದೇ ಒಂದು ಪ್ರದೇಶ ಎಂದರೆ ಜೋಗಿಮಟ್ಟಿ ಗುಡ್ಡ ಮತ್ತು ಅದಕ್ಕೆ ಸಂಬಂಧಪಟ್ಟಿರತಕ್ಕ ಕಾಡು. ಅದರಲ್ಲಿ ಸಾವಿರಾರು ದನಕರುಗಳು ಮತ್ತು ಕುರಿ ಮೇಕೆಗಳು ಪೋಷಣೆ ಮಾಡಿಕೊಳ್ಳುತ್ತವೆ. ಅಲ್ಲಿಂದಲೇ ಚಿತ್ರದುರ್ಗದ ಜನಗಳಿಗೆ ತಮ್ಮ ರಾಸುಗಳನ್ನು ಸಾಕುವುದಕ್ಕೆ ಸೌಲಭ್ಯ ಒದಗುತ್ತಾ ಇತ್ತು. ಈಚೆಗೆ ಸುಮಾರು ನಾಲ್ಕೈದು ತಿಂಗಳುಗಳಿಂದ ಸರ್ಕಾರದವರು ಸರ್ಕ್ಯುಲರೋ ಆರ್ಡರೋ ಹೊರಡಿಸಿ,—ಯಾವ ರೀತಿ ಆಗಿದೆಯೋ ಗೊತ್ತಿಲ್ಲ—ಈ ಒಂದು ಸೌಲಭ್ಯವನ್ನು ತಪ್ಪಿಸಿ, ದನಕರುಗಳೂ, ಕುರಿ ಮೇಕೆಗಳೂ, ಅಲ್ಲಿ ಮೇಯುವುದಕ್ಕೆ ಹೋಗಲು ಅಡ್ಡಿಯನ್ನುಂಟುಮಾಡಿದ್ದಾರೆ. ಚಿತ್ರದುರ್ಗ ನಗರದಲ್ಲಿ ಇದು ಒಂದು ದೊಡ್ಡ ಗೊಂದಲ ಉಂಟುಮಾಡಿ, ಬಹಳ ತೊಂದರೆಗೆ ಜನ ಗುರಿಯಾಗಿದ್ದಾರೆ. ಇದು ಏನೆಂಬುದನ್ನು ಪರಿಶೀಲನೆ ಮಾಡಿ, ಒಂದುವೇಳೆ ದನಗಳನ್ನು ಮೇಯಿಸುವ ನೆಪದಲ್ಲಿ ಗಿಡ ವಗೈರೆ ಕಡಿದುಕೊಂಡು ಹೋಗಿ ಅರಣ್ಯ ಹಾಳುಮಾಡುತ್ತಾ ಇದ್ದಾರೆ ಎಂಬುದಾಗಿ ಏನಾದರೂ ಸರ್ಕಾರದವರ ಭಾವನೆಯಲ್ಲಿದ್ದರೆ ಅದಕ್ಕೆ ಬಂದೋಬಸ್ತು ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಆ ದನಗಳಿಗೆ ಮೇವಿಗೆ ಉಂಟಾಗಿರತಕ್ಕ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಹಿರಿಯೂರಿನ ಹತ್ತಿರದಲ್ಲಿ ವಾಣಿ ವಿಲಾಸ ಫಾರೆಸ್ಟಿದೆ. ಅಲ್ಲಿಂದ ಚಿತ್ರದುರ್ಗಕ್ಕೆ ಲಾರಿಗಳಲ್ಲಿ ಮರ ತೆಗೆದುಕೊಂಡು ಹೋಗುವುದಕ್ಕೆ ಅನುಮತಿಕೊಟ್ಟಿದ್ದಾರೆ. ಆದರೆ ಹಿರಿಯೂರಿಗೆ ಸೌದೆಯನ್ನು ಉಪಯೋಗಿಸಲು ಸೌಲಭ್ಯ ಕೊಟ್ಟಿಲ್ಲ. ಹಿರಿಯೂರು ಸುತ್ತಮುತ್ತಲಿರುವ ಕಾಡಿನಲ್ಲಿ ಸೌದೆ ತರಬೇಕಾದರೆ ಹೊಳಲ್ಕೆರೆ ತಾಲ್ಲೂಕಿಗೆ ಹೋಗಿ ಲೈಸೆನ್ಸ್ ತರಬೇಕಾದ ವಿಚಿತ್ರ ಪರಿಸ್ಥಿತಿಯಿದೆ. ಮತ್ತು ಹಿರಿಯೂರಿನವರು ಹೊಳಲ್ಕೆರೆಯಿಂದ ಅಥವಾ ಬೇರೆಕಡೆಯಿಂದ ಲೈಸೆನ್ಸ್ ತಂದು ಕಟ್ಟಿಗೆ ತರುತ್ತಿರುವಾಗ ಹಿರಿಯೂರಿನಿಂದ ಚಿತ್ರದುರ್ಗಕ್ಕೆ ಕಟ್ಟಿಗೆ ಸಾಗಿಸಲು ಅವಕಾಶ ಕೊಟ್ಟಿರುವುದು ನ್ಯಾಯವೆ? ಈ ವಿಚಾರವನ್ನು ಅಲ್ಲಿನ ರೈತರು ಸಚಿವರ ಗಮನಕ್ಕೆ ಬಹಳ ತೀವ್ರವಾಗಿ ತಂದಿದ್ದಾರೆ. ಬಹುಶಃ ಮಾನ್ಯ ಇಲಾಖೆಯ ಮಂತ್ರಿಗಳ ಗಮನಕ್ಕೂ ಬಂದಿರಬಹುದು ಮತ್ತು ಇಲಾಖೆಯವರ ಗಮನಕ್ಕೂ ಬಂದಿರಬಹುದು. ಇದನ್ನು ಸರಿಪಡಿಸಲು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಮೂರನೆಯದಾಗಿ ಹಿರಿಯೂರು ತಾಲ್ಲೂಕು ಬೀರೇನಹಳ್ಳಿಯಲ್ಲಿ ಆದಿಕರ್ಣಾಟಕರ 13 ಮನೆಗಳು ಬೆಂಕಿ ಬಿದ್ದು ಸುಟ್ಟುಹೋದವು. ಕಲ್ಲಹಟ್ಟಿ ಗ್ರಾಮದಲ್ಲೂ ಒಂದೇ ದಿವಸ ಕೆಲವು ಮನೆಗಳು ಸುಟ್ಟುಹೋದವು. ಈ ಬೆಂಕಿ ಅನಾಹುತದಲ್ಲಿ ನೊಂದು ದಿಕ್ಕಿಲ್ಲದಿರುವ ಅನಾಥ ರಕ್ಷಣೆಗೆ ಯಾವ ಇಲಾಖೆಯವರೂ ಒದಗಿಲ್ಲದಿರುವುದು ಬಹಳ ಶೋಚನೀಯವಾಗಿದೆ. ಈ ವರ್ಷದ ಅಂತ್ಯದಲ್ಲಿ ಬೆಂಕಿ ಅನಾಹುತಕ್ಕಾಗಿ ಕೊಡುವ ಸಹಾಯಕ್ಕಾಗಿ ಒದಗಿಸಿರುವ ಹಣ ಮನೆಗೆ 25 ರೂಪಾಯಿಗಳೆಂದು ನಿಗದಿಯಾಗಿದೆ. ಆದರೆ ಇರುವ ಹಣ ನಾಲ್ಕೈದು ಮನೆಗಳಿಗೆ ಸಹ ಸಾಕಾಗುವುದಿಲ್ಲ. ಆದ್ದರಿಂದ ಈ ಬಾಬಿನಿಂದ ಅವರಿಗೆ ಸಹಾಯ ದೊರೆಯುವ ಹಾಗಿಲ್ಲ. ಗಳುಗಳನ್ನು ತಂದು ಅದರಿಂದಲಾದರೂ ಮನೆ ಕಟ್ಟಿಕೊಂಡು ಕಾಲಕಳೆಯೋಣವೆಂದು ಅರಣ್ಯ ಇಲಾಖೆ ಅಥವಾ ಎಕ್ಸೈಜ್ ಇಲಾಖೆ ಕೇಳಿದರೆ ಅವರು ಗಳುಗಳನ್ನು ತರಲು ಅವಕಾಶಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಸುಮಾರು ಎರಡು ಮೂರು ತಿಂಗಳಹಿಂದೆ ಬೆಂಕಿ ಅನಾಹುತದಿಂದ ನೊಂದವರು ಬೈಲಿನಲ್ಲಿ ಈ ದಿವಸದವರೆಗೂ ವಾಸಮಾಡುತ್ತಿದ್ದಾರೆ. ಇದನ್ನು ಎಲ್ಲರೂ ನೋಡಬಹುದು. ಅವರಿಗೆ ರಕ್ಷಣೆ ಕೊಡಲು ಯಾರಿಗೂ ಸಾಧ್ಯವಿಲ್ಲವೆ? ಅರಣ್ಯ ಇಲಾಖೆಗೆ ಮೊದಲಿಂದಲೂ ಬೇಕಾದಷ್ಟು ಸಹಾಯ ಮಾಡಿರುವವರಿಗೆ ಈ ವಿಶೇಷ ಸಂದರ್ಭಗಳಲ್ಲೂ ಸಹಾಯ ನೀಡದಿರುವುದು ಉಚಿತವಲ್ಲ. ತಕ್ಷಣ ಅನುಕೂಲ ಒದಗಿಸಲು ಸಾಧ್ಯವಿಲ್ಲವೆ? ಇದನ್ನು ಜಾಗ್ರತೆ ತೀರ್ಮಾನ ಮಾಡಬೇಕಾಗಿದೆ ಎಂದು ಸರ್ಕಾರಕ್ಕೆ ತಿಳಿಸಿ ಈ ಡಿಮ್ಯಾಂಡ್ ಬಗ್ಗೆ ಒಪ್ಪಿಗೆ ಸೂಚಿಸುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಒಂದೆರಡು ಮಾತನ್ನಾಡಬೇಕೆಂದು ಮನಸ್ಸು ಮಾಡಿದ್ದೇನೆ. ಹನುಮಯ್ಯನವರು ಹೇಳಿರುವುದಕ್ಕೆ ಉತ್ತರವಾಗಿ ಸಿದ್ದಪ್ಪನವರು ಹೇಳಿದ ಜವಾಬಿನ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಮೈಸೂರು ತಾಲ್ಲೂಕು, ಹೆಗ್ಗಡದೇವನಕೋಟೆ ತಾಲ್ಲೂಕು ಇವೆರಡರ ನಡುವೆ ಒಂದು ಕಾಡಿದೆ. ಅಲ್ಲಿ ಬೆಳೆದಿರುವ ಗಿಡಗಳು ಎರಡು ಮೂರು ಅಡಿಗಳಿಗಿಂತ ಎತ್ತರವಾಗಿಲ್ಲ, ಬರೀ ಮುಳ್ಳು ಗಿಡಗಳು, ಅವನ್ನು ಮಾರಿದರೆ, ಸೌದೆಗಾಗಿ ಉಪಯೋಗಿಸಿದರೆ ಎರಡು ರೂಪಾಯಿ ಬೆಲೆಬಾಳುವ ಸೌದೆ ಸಹ ಸಿಕ್ಕುವುದಿಲ್ಲ. ಅದೂ ಒಂದು ಫಾರೆಸ್ಟು. ಆ ಫಾರೆಸ್ಟಿಗೆ ಆಡು, ಮೇಕೆ, ದನ ಬಂದರೆ ತೆಗೆದುಕೊಂಡುಹೋಗಿ ಕಟ್ಟಿಹಾಕಿ ಜುಲ್ಮಾನೆ ವಸೂಲು ಮಾಡುತ್ತಿದ್ದಾರೆ. ಇದ ಸರ್ಕಾರಕ್ಕೆ ಬರುವುದಿಲ್ಲ; ಅಲ್ಲಿರುವ ಅರಣ್ಯ ಇಲಾಖೆ ಸಿಬ್ಬಂದಿ ತೆಗೆದುಕೊಳ್ಳುತ್ತಾರೆ. ಹೆಗ್ಗಡದೇವನ ಕೋಟೆ ಪಕ್ಕದಲ್ಲಿ ಕೋಹಲ ಮತ್ತು ಅದರಂಥ 3-4 ಗ್ರಾಮಗಳಿವೆ, ಹರಿಜನರೇ ಅಲ್ಲಿ ಜಾಸ್ತಿ. ಅವರಿಗೆ ಒಂದು ಎಕರೆ ಜಮೀನು ಸಹ ಇಲ್ಲ. ಜಮೀನು ಕೊಡಬೇಕೆಂದು ಅನೇಕವೇಳೆ ಅವರಿಂದ ಮನವಿ ಬಂದಿದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಆ ಕಡೆ ಪ್ರವಾಸ ಬಂದಿದ್ದಾಗ ಮನವಿ ಮಾಡಿದಮೇಲೆ ಆಗ ಡೆಪ್ಯುಟೀ ಕಮಿಷನರಾಗಿದ್ದ ಶ್ರೀ ಮಹಮದ್ ಅಹಮದ್‌ರವರಿಗೆ ಜಮೀನು ಕೊಡುವ ಏರ್ಪಾಡು ಮಾಡಿ ಎಂದು ಹೇಳಿದರು. ಅದನ್ನು ಡೆಪ್ಯುಟೀ ಕಮಿಷನರು ನೋಟ್ ಮಾಡಿಕೊಂಡರು. ಇಷ್ಟಾದರೂ ಸಹ ಈ ದಿವಸದ ವರೆಗೂ ಕೊಟ್ಟಿರುವುದಿಲ್ಲ. ಕೊನೆಗೆ ನಾಲ್ಕು ಮಂದಿ ಸ್ವಲ್ಪ ಜಮೀನನ್ನು ಉಳುಮೆ ಮಾಡಿದ್ದರು. ನೀವು ಉಳುತ್ತೀರಿ, ಸರ್ಕಾರಕ್ಕೆ ಹೇಳುತ್ತೇನೆ, ರೆವೆನ್ಯೂ ಮಂತ್ರಿಗಳು ಅಪ್ಪಣೆಕೊಟ್ಟಿದ್ದಾರೆ, ಡೆಪ್ಯುಟೀ ಕಮಿಷನರು ಮಾತ್ರ ಕೊಟ್ಟಿಲ್ಲ ಎಂದು ಅವರಿಗೆ ಹೇಳಿದೆ. ಈಗ ಆ ಜಮೀನನ್ನು ಯಾರುಬೇಕಾದರೂ ನೋಡಲಿ, ಅಲ್ಲಿ 3-4 ಅಡಿಗಳ ಮೇಲೆ ಯಾವ ಗಿಡವೂ ಇಲ್ಲ. ಆ ಗಿಡಗಳಿಂದ ಎರಡು ಮೂರು ರೂಪಾಯಿ ಸಂಪಾದನೆ ಸಹ ಇಲ್ಲ. ಅಂತೂ ಅದು ಅರಣ್ಯಕ್ಕೆ ಸೇರಿದೆ. ಆದ್ದರಿಂದ ಹನುಮಯ್ಯನವರು ಅರಣ್ಯಕ್ಕೆ ಪ್ರಯೋಜನವಿಲ್ಲದ, ದೊಡ್ಡ ಮರಗಳಿಲ್ಲದಂಥ ಪ್ರದೇಶ ಸಾಗುವಳಿಗೆ ಕೊಡಬಹುದೆಂದು ಹೇಳಿದ್ದಾರೆಯೇ ವಿನಾ ದೊಡ್ಡ ಅರಣ್ಯದಲ್ಲಿರುವ ಪ್ರದೇಶವನ್ನು ಕೇಳಲಿಲ್ಲ. ದೊಡ್ಡ ಅಡವಿಯನ್ನು ವೃದ್ಧಿಮಾಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಚ್. ಎಂ. ಚನ್ನಬಸಪ್ಪ (ಹೆರಿಯಾಪಟ್ಟಣ).—ಈ ಸರ್ಕಾರಿ ಅರಣ್ಯಗಳನ್ನು ಅಲ್ಪಸ್ವಲ್ಪ ವ್ಯವಸಾಯಕ್ಕೆ ಕೊಡತಕ್ಕ ವಿಷಯದಲ್ಲಿ ವಿಶೇಷವಾಗಿ ಚರ್ಚೆ ನಡೆದಿದೆ. ಹಾಗೆ ಕೇಳುವುದರಲ್ಲೂ ಸ್ವಲ್ಪ ಅರ್ಥವಿದೆ; ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದರಲ್ಲೂ ಸ್ವಲ್ಪ ಅರ್ಥವಿದೆ. ಫಾರೆಸ್ಟ್ ಇಲಾಖೆಯವರು ಯಾವುದನ್ನು ಅರಣ್ಯ ಪ್ರದೇಶವೆಂದು ಭಾವಿಸಿರುತ್ತಾರೋ ಆ ಪ್ರದೇಶದಲ್ಲಿ ತಕ್ಕ ಮರಗಳನ್ನು ಬೆಳೆಸದಿರುವುದು ಒಂದು ದೊಡ್ಡ ಲೋಪ. ಆದ್ದರಿಂದ ಅಲ್ಲಿ ಜಮೀನನ್ನು ಕೇಳುತ್ತಾರೆ. ಅನೇಕ ವರ್ಷಗಳಿಂದ, ಸುಮಾರು 25 ವರ್ಷಗಳಿಂದ, ಹಿಂದಿನ ಅಸೆಂಬ್ಲಿ ಇದ್ದಾಗಿನಿಂದ ಈ ತರಹ ಪ್ರಶ್ನೆ ಬರುತ್ತಲೇ ಇದೆ. ನಮ್ಮ ಊರ ಪಕ್ಕದಲ್ಲಿ ಕುರುಚಲ ಗಿಡ ಬೆಳೆದಿರುವ ನೂರು ಎಕರೆಯಿದೆ, ಉಳುವುದಕ್ಕೆ ಹೊಲ ಅಲ್ಲಿ ಕೊಡುವುದಿಲ್ಲ ಎಂದು ಹೇಳಿದಾಗಲೂ ಒಂದೇ ಉತ್ತರ, ಬಾಕಿ ಸಂದರ್ಭಗಳಲ್ಲೂ ಒಂದೇ ಉತ್ತರ. ಸರ್ಕಾರದವರು ಅಲ್ಲಿ ತಕ್ಕ ಗಿಡಹಾಕಿ ಬೆಳೆಸಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಈಗ ಅರಣ್ಯದಲ್ಲಿರುವ ಮರ ಕಡಿದು ಪಟ್ಟಣಗಳಿಗೆ ಸರಬರಾಯಿ ಮಾಡುತ್ತಿರುವ ವೇಗ ನೋಡಿದರೆ ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಹಳ್ಳಿಗಾಡುಗಳಲ್ಲೂ ಸೌದೆಗೆ ಅಭಾವ ಬರುತ್ತದೆ ಎಂಬ ಸೂಚನೆ ಕಂಡು ಬರುತ್ತದೆ. ಆದ್ದರಿಂದ ಈ ಅರಣ್ಯ ಇಲಾಖೆಯ ಮೇಲೆ ಸರ್ಕಾರದವರು ಈ ವಿಷಯದಲ್ಲಿ ಬಹಳ ಹೆಚ್ಚಿನ ಗಮನಕೊಡುವ ಕಾಲ ಬಂದಿದೆ. ಇದುವರೆಗೆ ಕೈಕಟ್ಟಿ ಕುಳಿತಹಾಗೆ ಕುಳಿತಿರಲು ಸಾಧ್ಯವಿಲ್ಲ. ಈಗ ಅನೇಕ ಲೋಪದೋಷಗಳಿವೆ. ಪ್ರತಿವರ್ಷ ನಾಲ್ಕಾರು ಲಕ್ಷ ರೂಪಾಯಿಗಳನ್ನು ಪ್ಲಾನಿಂಗ್‌ಗಾಗಿ ಬಡ್ಜೆಟ್ಟಿನಲ್ಲಿ ಒದಗಿಸುತ್ತಿದ್ದರೂ ಅರಣ್ಯಗಳಲ್ಲಿ ಕುರುಚಲ ಗಿಡಗಳು

(ಶ್ರೀ ಎಚ್. ಎಂ. ಚೆನ್ನಬಸಪ್ಪ.)

ಮಾತ್ರ ಬೆಳೆದಿವೆ, ದೊಡ್ಡ ಗಿಡಗಳು ಬೆಳೆದಿಲ್ಲ. ನಮ್ಮ ಊರ ಪಕ್ಕದಲ್ಲಿ ಕುರುಚಲು ಗಿಡ ಬೆಳೆದಿರುವ ಪ್ರದೇಶ ಬೇಕಾದಷ್ಟಿದೆ, ಅದನ್ನೇಕೆ ವ್ಯವಸಾಯಕ್ಕೆ ಕೊಡಬಾರದು ಎಂದು ಕೇಳುವುದರಲ್ಲಿ ತಪ್ಪೇನು ? ನೀವು ದೊಡ್ಡ ಗಿಡಗಳನ್ನು ಬೆಳೆಸಿದ್ದರೆ ಪರವಾಗಿಲ್ಲ. ಅಂದ ಮಾತ್ರಕ್ಕೆ ಸರ್ಕಾರದ ದೊಡ್ಡ ಲೋಪವನ್ನು ತಿಳಿಸಲು ಹೇಳಿದೆನೇ ಹೊರತು ಆ ಪ್ರದೇಶವನ್ನು ಕೊಡಬೇಕೆಂದು ಹೇಳಲಿಲ್ಲ. ಈಗ ವಾಸ್ತವವಾಗಿ ಅರಣ್ಯ ಇಲಾಖೆ ಆಡಳಿತದ ವಿಚಾರದಲ್ಲಿ ಸರ್ಕಾರದ ಧೋರಣೆ ಖಂಡಿತ ಸರಿಯಾಗಿಲ್ಲ. ಇದುವರೆಗೆ ಅರಣ್ಯದ ಮರಗಳನ್ನು ಕಡಿದು ಸಾಗಿಸುತ್ತಿರುವುದು ಕಣ್ಣಿಗೆ ಕಾಣುತ್ತಿದೆಯೇ ವಿನಾ ವಾಸ್ತವವಾಗಿ ಅಫೋರೆಸ್ಟೇಷನ್ ಮಾಡುತ್ತಿರುವುದು ಕಣ್ಣಿಗೆ ಕಾಣುತ್ತಿಲ್ಲ. ಅರಣ್ಯದ ಪಕ್ಕದಲ್ಲಿ ವಾಸಮಾಡುವ ನಮಗೆ ಕಾಣಬರುವುದು ನೂರಾರು ಮೈಲಿ ದೂರದಲ್ಲಿರುವವರಿಗೆ ಗೊತ್ತಾಗುವುದಿಲ್ಲ. ಈ ಇಲಾಖೆಯ ಆಡಳಿತ ಹೇಗಿದೆ, ಎಲ್ಲೆಲ್ಲಿ ಏನೇನಾಗುತ್ತಿದೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅರಣ್ಯದಲ್ಲಿ ಏನು ಕೆಲಸಕಾರ್ಯ ನಡೆಯುತ್ತಿದೆ, ಎಂಬುದನ್ನು ನೋಡುವ ಸೌಲಭ್ಯ ಎಲ್ಲರಿಗೂ ಸಿಕ್ಕುವುದಿಲ್ಲ, ಕೆಲವರಿಗೆ ಮಾತ್ರ ಸಿಕ್ಕುತ್ತದೆ. ಎಲ್ಲರೂ ನೋಡಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ವಿಷಯ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೂ ಸಹ ಚೆನ್ನಾಗಿ ಗೊತ್ತಾಗುವುದಿಲ್ಲ. ಏಕೆಂದರೆ ಸ್ವತಃ ಹೋಗಿ ನಾವೇ ವಿದ್ಯಮಾನವನ್ನು ಪರಿಶೀಲಿಸುವುದರಿಂದ ನಮಗೆ ಗೊತ್ತಾಗುವುದಿಲ್ಲ. ಖುದ್ದಾಗಿ ಹೋಗಿ ಪರಿಶೀಲಿಸಬೇಕಾದದ್ದು ಬಹಳ ಆವಶ್ಯಕ. ಅರಣ್ಯ ಇಲಾಖೆ ಮೇಲ್ವಿಚಾರಣೆ ನೋಡುವವರು ಸಾಧ್ಯವಾದಷ್ಟು ಪ್ರಯತ್ನಮಾಡಿ ಅರಣ್ಯದ ಏಳಿಗೆಗೆ ಏನೇನಾಗಬೇಕೋ ಅದನ್ನು ಕೂಲಂಕಷವಾಗಿ ನೋಡತಕ್ಕ ವ್ಯವಸ್ಥೆಮಾಡಬೇಕು.

ಈಗ ಮುಖ್ಯವಾಗಿ ಜಮೀನು ವಿಷಯ ಬಂದಿದೆ. ಅರಣ್ಯಕ್ಕಾಗಿ ಬಿಟ್ಟಿರುವ ಜಮೀನನ್ನು ಸಾಗುವಳಿಗೆ ಕೊಡುವುದು ಸರಿಯಲ್ಲವೆಂದು ವಾದ ಮಾಡಿದ್ದಾರೆ; ಅದು ಸರಿಯೆ. ನಮಗೆ ಶೇಕಡ 25ರಷ್ಟು ಅರಣ್ಯವಿರಬೇಕಾಗಿರುವಾಗ ಈಗ ಶೇಕಡ 14-15ರಷ್ಟು ಮಾತ್ರ ಇದೆ. ಈಗಿರುವುದನ್ನು ಸಾಗುವಳಿಗೆ ಕೊಟ್ಟರೆ ಅರಣ್ಯವನ್ನು ಹೆಚ್ಚಿಸುವುದಕ್ಕೆ ಮತ್ತು ಮರಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಸಹಾಯಕವಾಗುವುದಿಲ್ಲ. ಅಂಥ ಪರಿಸ್ಥಿತಿ ಬರುತ್ತದೆ. ಇದಕ್ಕೆ ನೀವೇ ಕಾರಣ. ಕಾಲು ಶತಮಾನದಿಂದ ಕುರುಚಲು ಗಿಡ ಬೆಳೆದಿರುವ ಪ್ರದೇಶದಲ್ಲಿ ಸಸಿ ನೆಟ್ಟಿದ್ದೀರಾ? ಇಷ್ಟು ಲಕ್ಷ ಖರ್ಚುಮಾಡುತ್ತೇವೆಂದು ಹೇಳುತ್ತೀರಿ. ನೀವು ಜವಾಬು ಕೊಡುವಾಗ ಇಂಥ ಕಡೆ ಇಂಥ ಪ್ಲಾಂಟೇಷನ್ ಮಾಡಿದ್ದೇವೆ, ನೋಡಿದ್ದೀರಾ ಎಂದು ಕೇಳಬಹುದು. ಅದರ ಗತಿ ಏನಾಗಿದೆಯೆಂಬುದನ್ನು ಕಾಲಾವಕಾಶವಿದ್ದರೆ ಪ್ರಸ್ತಾಪ ಮಾಡಬಲ್ಲೆ. ಒಟ್ಟಿನಲ್ಲಿ ಅರಣ್ಯವೆಂದು ಹೇಳುವ ಪ್ರದೇಶವೆಷ್ಟಿದೆಯೋ ಅಲ್ಲಿ ಸುವ್ಯವಸ್ಥಿತವಾದ ರೀತಿಯಲ್ಲಿ ಪ್ರತಿಯೊಂದು ಜಾಗದಲ್ಲೂ ಸರಿಯಾದ ಅರಣ್ಯಕ್ಕೆ ಲಾಯಖ್ಖಾದ ಗಿಡ ಬೆಳೆಸಲು ವ್ಯವಸ್ಥೆಮಾಡಬೇಕು. ಎಷ್ಟು ಲಕ್ಷ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ; ಪುನಃ ವಾಪಸು ಬರುತ್ತದೆ; ಬಾಕಿ ಇಲಾಖೆಯ ಹಾಗಲ್ಲ. ಲಕ್ಷಾಂತರ ಮರಗಳನ್ನು ಬೆಳೆಸಿದರೆ 50 ವರ್ಷಗಳಲ್ಲಿ 40 ರಷ್ಟು ಉತ್ಪತ್ತಿ ಕೊಡುತ್ತದೆ. ಈ ಕೆಲಸ ಮಾಡುತ್ತಿಲ್ಲ ಎಂಬುದೇ ನನ್ನ ವಾದ. ಮರಗಳನ್ನು ಸಾಕಷ್ಟು ಬೆಳೆಸಿಲ್ಲದಿರುವಾಗ ಅರಣ್ಯದ ಜಮೀನನ್ನು ವ್ಯವಸಾಯಕ್ಕಾಗಿ ಹನುಮಯ್ಯನವರು ಮತ್ತು ಇತರರು ಕೇಳುವಾಗ 'ಡಾಗ್ ಇನ್ ದಿ ಮ್ಯಾಂಜರ್' ಪಾಲಿಸಿಯನ್ನು ಅನುಸರಿಸುವುದು ಸರಿಯೆ? ಸರ್ಕಾರದವರು ಮರಗಳನ್ನು ಬೆಳೆಸುವುದೂ ಇಲ್ಲ, ಜಮೀನು ಕೇಳಿದವರಿಗೆ ಕೊಡುವುದೂ ಇಲ್ಲ, ಇದು ಯಾವ ನೀತಿ? ಮರಗಳನ್ನು ಬೆಳೆಸಬೇಕೆಂಬುದು ಅವರ ಮನಸ್ಸಿನಲ್ಲಿ ಇದುವರೆಗೆ ಇರಲಿಲ್ಲವೆಂದು ಕಾಣುತ್ತದೆ. ಇನ್ನೂ ನಾಲ್ಕು ಲಕ್ಷ ರೂಪಾಯಿಗಳು ಖರ್ಚಾದರೂ ಎಲ್ಲಿ ಅರಣ್ಯವಿದೆ, ಎಲ್ಲಿ ಗಿಡಗಳನ್ನು ಹಾಕಿ ಬೆಳೆಸಬೇಕು ಎಂಬುದನ್ನು ಪರಿಶೀಲಿಸಿ ಅರಣ್ಯದಲ್ಲಿ ತಕ್ಕಷ್ಟು ಗಿಡಮರಗಳನ್ನು ಬೆಳೆಸಿದ್ದರೆ, ಮಾನ್ಯ ಸದಸ್ಯರ ಕಣ್ಣಿಗೆ ಕಾಣುವ ಹಾಗೆ ಆ ಕೆಲಸ ಮಾಡಿದ್ದರೆ ಯಾರುತಾನೆ ಅರಣ್ಯ ಪ್ರದೇಶವನ್ನು ವ್ಯವಸಾಯಕ್ಕೆ ಕೊಡಿ ಎಂದು ಕೇಳುತ್ತಾರೆ? ಅರಣ್ಯ ಬೆಳೆಸಿಯೇ ತೀರಬೇಕೆಂದು ಹೇಳಿ ಆ ರೀತಿ ಕೆಲಸ ನಡೆಸುತ್ತಿಲ್ಲ. ಆದ್ದರಿಂದಲೇ ಜನರು ಕೇಳುವುದು. ನಾಳೆ ಬೇಕಾದಷ್ಟು ಗಿಡಹಾಕಿದರೆ ಜಮೀನು ಕೊಡಬೇಕೆಂದು ಅರ್ಜಿ ಸಹ ಬರುವುದಿಲ್ಲ. ಕುರುಚಲು ಗಿಡಬೆಳೆಸಿ ಜಮೀನನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದಲ್ಲ. ಮತ್ತು ಜಮೀನು ಕೇಳುವಾಗ ಅರಣ್ಯವೇ ಆಗಬೇಕೆಂದು ಹೇಳುವುದು ಸರಿಯಲ್ಲ. ಏಕೆಂದರೆ ಅರಣ್ಯದ ವಿಸ್ತೀರ್ಣ ಕಡಮೆಯಿರುವಾಗ ಅದನ್ನು ಬೆಳೆಸಬೇಕೆಂದು ಒತ್ತಾಯಮಾಡುವುದು ಸರಿಯೇ ವಿನಾ ಅರಣ್ಯ ಸಾಗುವಳಿಗೆ ಕೊಡಿ ಎಂದು ಕೇಳುವುದು ಸರಿಯಲ್ಲ. 50 ವರ್ಷಗಳಾದಮೇಲೆ ಇದೇ ಪರಿಸ್ಥಿತಿಯಿದ್ದರೆ ಬಹಳ ಕಷ್ಟವಾಗುತ್ತದೆ. ಈಗ ಮರಗಿಡಗಳನ್ನು ಹೆಚ್ಚಾಗಿ ಬೆಳೆಸಿದರೆ ಮುಂದೆ ಅದರ ಫಲ ಅನುಭವಿಸಬಹುದು. ಒಂದೇ ದಿವಸದಲ್ಲಿ ಬೆಳೆಸುವುದಕ್ಕಾಗುವುದಿಲ್ಲ. ಅದಕ್ಕೆ ಕಾಲಾವಕಾಶ ಬೇಕು. ಜಮೀನುಬೇಕೆಂದು ಕೇಳುವುದೇನೋ ಸರಿಯೆ. ಆದರೆ ಅರಣ್ಯದಲ್ಲೇಬೇಕೆಂದು ಕೇಳಬಾರದು. ಒಟ್ಟಿನಲ್ಲಿ ಎಲ್ಲಾದರೂ ಜಮೀನು ಕೊಡಿ, ಟೆನೆನ್ಸಿ ಬಿಲ್ಲಿನ ವಿಚಾರ ಮಾತನಾಡುವಾಗ ಅಭಿಪ್ರಾಯ ಕೊಡಲು ಸಾಧ್ಯವಿದೆ. ಅರಣ್ಯವನ್ನೇ ಕೊಡಬೇಕೆಂದಲ್ಲ. ಜನರೂ ಕೂಡ ಬೇಸಾಯ ಮಾಡುವವರು ಜಮೀನಿರುವ ಕಡೆ ಹೋಗಿ ಮಾಡಬೇಕೇ ವಿನಾ ನಮ್ಮ ಹತ್ತಿರಕ್ಕೇ ಜಮೀನು ಬರಬೇಕು ಎಂದು ಹೇಳುವುದು ಸರಿಯಲ್ಲ. ಭೂಮಿಯನ್ನು ಕೇಳಲಿ; ಕೇಳುವುದು ನ್ಯಾಯ. ಆದರೆ ಜನರು, ಭೂಮಿ ಬೇಕಾದವರು ಎಲ್ಲರೂ ಸೇರಿ ಭೂಮಿಯಿರುವಕಡೆ ಹೋಗಿ ಠಾಣ್ಯಹಾಕಿ ಅಲ್ಲೇ ವ್ಯವಸಾಯ ಮಾಡುವುದು ಸೂಕ್ತ. ಇದಕ್ಕೆ ತಕ್ಕ ವಾತಾವರಣ ಸರ್ಕಾರ ಕಲ್ಪಿಸಿಲ್ಲ.

4-30 P.M.

ಇದಕ್ಕೆ ತಕ್ಕ ವಾತಾವರಣವನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಸರ್ಕಾರದವರಲ್ಲಿ land reclamation policy ಎಂಬುದು ಇವೊತ್ತಿಲ್ಲ. ಇವೊತ್ತಿನ ದಿವಸ ಸಾಗುವಳಿಗೆ ಲಾಯಖ್ಖಾದ ಜಮೀನುಗಳನ್ನು ಸಾಗುವಳಿಗೆ ತರುವುದಕ್ಕೆ ಏನು reclamation policy ಯನ್ನಿಟ್ಟುಕೊಂಡಿದ್ದೀರಿ? ಏನೂ ಇಲ್ಲ! ಕೇಳಿದವರಿಗೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರೆ ಕೆಲವರಿಗೆ ಸಿಕ್ಕುತ್ತದೆ, ಕೆಲವರಿಗೆ ಸಿಕ್ಕುವುದಿಲ್ಲ. ಅದಕ್ಕೆ ಬದಲು ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಿಕೊಟ್ಟು ವ್ಯವಸಾಯಕ್ಕೆ ಸಹಾಯ ಮಾಡಿದರೆ ವಾಸ್ತವವಾಗಿ ಎಲ್ಲಿ ಜಮೀನಿದೆಯೋ ಅಲ್ಲಿಗೆ ಹೋಗಿ ಜನ ನೆಲಸುವುದಕ್ಕೆ ಅನುಕೂಲವಾಗುತ್ತದೆ. ಇವೊತ್ತು ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಐನೂರು-ಸಾವಿರ ಮನೆಗಳನ್ನು ಕಟ್ಟಿಸಿ ಬೆಂಗಳೂರು ಸಿಟಿಗೆ ಎಲ್ಲಾ ಅನುಕೂಲಗಳನ್ನೂ ಮಾಡುವುದಕ್ಕೆ ಸಿದ್ಧರಾಗಿದ್ದೀರಿ. ಅದೇ ರೀತಿ

ಭೂ ವ್ಯವಸಾಯದ ವಿಷಯದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಮಾಡಿ ಸಾಧನೆ ಸಲಕರಣೆಗಳನ್ನು ಏರ್ಪಡಿಸಿ ಭೂಮಿಯನ್ನು ಕೊಟ್ಟರೆ ಆಗ್ಗೆ ತಮ್ಮನ್ನು ಅರಣ್ಯವನ್ನು ಬಿಟ್ಟುಕೊಡಿ ಎಂದು ಯಾರೂ ಕೇಳುವುದಕ್ಕೆ ಬರುವುದೇ ಇಲ್ಲ. ಇವೊತ್ತು ಅರಣ್ಯ ಪ್ರದೇಶವನ್ನು ಸಾಗುವಳಿಗೆ ಬಿಡಬೇಕೆಂದು ಏನು ಬೇಡಿಕೆ ಬಂದಿದೆಯೋ ಅದು ಸರಿಯಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ. ಆದ್ದರಿಂದ ನನ್ನ ಸಲಹೆಯೇನೆಂದರೆ, ನಮ್ಮ ಜನರಿಗೆ ಯಾರಾರಿಗೆ ಭೂಮಿಯಿಲ್ಲ, ಅವರಿಗೆ ಬೇಕಾದ ಸಂಪತ್ ಸಲಕರಣೆಗಳನ್ನು ಕೊಟ್ಟು ಒಂದು land reclamation policy ಯನ್ನು ಜಾರಿಗೆ ತನ್ನಿ. ಮತ್ತು ಅರಣ್ಯ ಎಲ್ಲೆಲ್ಲಿದೆ ಅಲ್ಲಿ ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡು, ಈ ಹಣವನ್ನು ಸದ್ವಿನಿಯೋಗಮಾಡಿ ಮೂಲೆ ಮೂಲೆಯಲ್ಲೂ ಅರಣ್ಯ ಸಂಪತ್ತು ಬೆಳೆಸಬೇಕೆಂದು ಕೋರುತ್ತೇನೆ.

ಇನ್ನೊಂದು ವಿಷಯ ಅರ್ಥವಾಗಲಿಲ್ಲ, ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. Forest ಇಲಾಖೆಗೆ ಸಂಬಂಧಪಟ್ಟಂತೆ ಮೂರನೆಯ ಪುಟದಲ್ಲಿ sowing and planting ಎಂಬುದಕ್ಕಾಗಿ 3,916 ರೂಪಾಯಿಗಳನ್ನು ಒದಗಿಸಿರುವಂತೆ ಕಾಣುತ್ತದೆ. ಸಿಂಕೋನಾ ಗಿಡಗಳನ್ನು ನೆಡುವುದಕ್ಕೆ, sow ಮಾಡುವುದಕ್ಕೆ ಮತ್ತು ನೋಡಿಕೊಳ್ಳುವುದಕ್ಕೆ, 3,916 ರೂಪಾಯಿಗಳ ಖರ್ಚು ಮತ್ತು 8,184 ಸಿಬ್ಬಂದಿ ಖರ್ಚು! ವಾಸ್ತವವಾಗಿ ಬೀಜ ಹಾಕುವುದಕ್ಕೆ ಬೆಳೆಸುವುದಕ್ಕೆ ಇರುವ ಮೊಬಲಗು 3,200 ರೂಪಾಯಿ ಆದರೆ ಸಿಬ್ಬಂದಿ ಸಂಬಳ ತುಟ್ಟಿಭತ್ಯ, ಹೈಪ್ರೈಸ್ ಅಲೋಯನ್ಸ್‌ಗಳು 8,184 ರೂಪಾಯಿಗಳಿಗೆ ಬರುತ್ತದೆ. ಇದರ ಅರ್ಥವೇನೋ ನನಗೆ ಗೊತ್ತಾಗುವುದಿಲ್ಲ. ಇದರಿಂದೇನು ವ್ಯಕ್ತವಾಗುತ್ತದೆಂದರೆ, ಒಂದು ರೂಪಾಯಿ ಕೆಲಸಕ್ಕೆ ಎರಡು ರೂಪಾಯಿನ ಸಿಬ್ಬಂದಿ. ದೇಶಕ್ಕೆ ಒಂದು ರೂಪಾಯಿನ ಪ್ರಯೋಜನವನ್ನುಂಟುಮಾಡಬೇಕಾದರೆ ಎರಡು ರೂಪಾಯಿಗಳನ್ನು ಖರ್ಚುಮಾಡುವ ನೀತಿ ಸರಿಯೇ? ಇದನ್ನು ಸರಿಮಾಡುವುದಕ್ಕೆ ಸಾಧ್ಯವಿಲ್ಲವೇ?

ನಾಲ್ಕನೆಯ ಪುಟದಲ್ಲಿ 'Afforestation of barren areas' ಎಂದು ಹೇಳಿ ಬಂಜರು ಬಿದ್ದಿರುವ ಭಾಗಗಳಲ್ಲಿ ಮತ್ತೆ ಕಾಡು ಬೆಳೆಸುವುದಕ್ಕೆ 1,46,500 ರೂಪಾಯಿಗಳನ್ನು ಒದಗಿಸಿದೆ. ಈ ಪೈಕಿ 'Formation, sowing and planting'ಗಿಗಾಗಿ 72,000 ರೂಪಾಯಿಗಳನ್ನೂ maintenance ಗಾಗಿ 28,000 ರೂಪಾಯಿಗಳನ್ನೂ ಕೊಡಬೇಕಾಗುತ್ತದೆಂದು ಲೆಕ್ಕ ಹಾಕಿದೆ. ಉಳಿದ 46,000 ರೂಪಾಯಿಗಳು ಸಿಬ್ಬಂದಿ ಖರ್ಚಿಗಾಗಿ ಎಂದು ಹೇಳಿದೆ. ಈ ಪ್ರಕಾರ ಒಂದು ಲಕ್ಷ ರೂಪಾಯಿಗಳ ಪ್ರಯೋಜನ ಹೊಂದುವುದಕ್ಕೆ 46½ ಸಾವಿರ ರೂಪಾಯಿಗಳನ್ನು ಸಿಬ್ಬಂದಿಗಾಗಿಯೇ ಖರ್ಚುಮಾಡುವುದು ಸರಿಯೇ ಎಂದು ನಾವು ಪ್ರಶ್ನಿಸಬೇಕಾಗಿದೆ. ಸಾಮಾನ್ಯವಾಗಿ ನೋಡಿದ್ದರಲ್ಲಿ ಇಂಥವು ಒಂದೆರಡು ಸಿಕ್ಕಿವೆ. ಇನ್ನೂ ಒಳಹೊಕ್ಕು ಪೂರ್ತಿ ನೋಡಿದರೆ ಇನ್ನೂ ಏನಾದರೂ ಸಿಕ್ಕುತ್ತವೆಯೋ ಗೊತ್ತಿಲ್ಲ. ಅದೇನೇ ಆಗಲಿ, ಈ ನೀತಿ ಸರಿಯಲ್ಲ. ನೀವು ಖರ್ಚುಮಾಡುವ ಹಣ ಸದ್ವಿನಿಯೋಗವಾಗಬೇಕು. ಜನರಿಗೆ ಎಲ್ಲಿ ಜಮೀನಿದೆಯೋ ಅಲ್ಲಿ ಕೊಡಬೇಕು. ಅರಣ್ಯ ಸಂಪತ್ತು ಬೆಳೆಯಬೇಕು.

*Dr. R. NAGAN GOWDA (Minister for Agriculture).—In the short time that is provided for me I shall try to meet as many points that have been raised by the Hon'ble Members as possible. I must at the outset thank the members for the very deep interest they have shown.

ಶ್ರೀ ಶಿವನಂಜೇಗೌಡ.—ಸ್ವಾಮಿ, ಕನ್ನಡದಲ್ಲಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಆರ್. ನಾಗನಗೌಡ.—ಮಾನ್ಯ ಅಧ್ಯಕ್ಷರೇ, ಈ ಅರಣ್ಯಶಾಖೆಯ ವಿಚಾರವಾಗಿ ನಮ್ಮ ಮಾನ್ಯ ಸದಸ್ಯರುಗಳೆಲ್ಲರೂ ಇಷ್ಟೊಂದು ಗಮನ ಮತ್ತು ಶ್ರದ್ಧೆಗಳನ್ನು ತೋರಿಸಿರುವುದಕ್ಕಾಗಿ ನಾನು ಮೊದಲನೆಯದಾಗಿ ಅವರೆಲ್ಲರಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ—ನನಗೆ ಮಾತನಾಡಲು ಕೊಟ್ಟಿರತಕ್ಕ ಕಾಲಾವಕಾಶ ಎಷ್ಟಿದೆಯೋ ಅಷ್ಟರಲ್ಲೇ ಎಷ್ಟು ವಿಷಯಗಳನ್ನು ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ವಿಷಯಗಳನ್ನು ನಾನು ತಮ್ಮ ಮುಂದಿಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು ಮಾತನಾಡುತ್ತ ನಮ್ಮ ಅರಣ್ಯ ಖಾತೆಯಿಂದ ಬರತಕ್ಕಂಥ ಲಾಭದ ವಿಷಯವಾಗಿ ಹೆಚ್ಚು ಪ್ರಸ್ತಾಪಮಾಡಿದ್ದಾರೆ. ಅವರು ತಮ್ಮ ಭಾಷಣದಲ್ಲಿ ನಮ್ಮ ಈ ಅರಣ್ಯ ಖಾತೆಯ ಪ್ರತಿಯೊಂದು ಬಾಬಿನಲ್ಲೂ ಆದಾಯ ವರ್ಷೇ ವರ್ಷೇ ಕಮ್ಮಿಯಾಗುತ್ತ ಬರುತ್ತಿದೆ ಎಂದು ಹೇಳಿದರು. ಆದರೆ ಈಗ ನಾನು ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ತಂದಿದ್ದೇನೆ. ಅವುಗಳನ್ನು ತಮ್ಮೆಲ್ಲರ ಮುಂದೆ ಇಡಲಿಚ್ಛಿಸುತ್ತೇನೆ:—1951-52 ರಲ್ಲಿ ಅರಣ್ಯ ಖಾತೆಯ ವರಮಾನ 82 ಲಕ್ಷ ರೂಪಾಯಿಗಳಿತ್ತು. 1952-53ರ ರಲ್ಲೂ 82 ಲಕ್ಷವೇ ಇತ್ತು. 1953-54 ರಲ್ಲಿ ಇದು 100 ಲಕ್ಷಕ್ಕೆ ಏರಿದೆ. ಹೀಗೆ ಇಲ್ಲಿಯವರೆಗೆ ಬರುತ್ತಿರುವ ಆದಾಯದ ಲೆಕ್ಕವನ್ನು ನೋಡಿದರೆ ನಮ್ಮ ಈ ಅರಣ್ಯ ಖಾತೆಯಿಂದ ವರ್ಷಕ್ಕೆ ಸರಾಸರಿ 93 ಲಕ್ಷ ರೂಪಾಯಿಗಳ ಆದಾಯ ಬರುತ್ತಿದೆ ಯೆಂಬುದಾಗಿ ಕಂಡುಬರುತ್ತದೆ. ಇವು ಕೇವಲ ಫೆಬ್ರವರಿ ಆಖೈರ್‌ವರೆಗಿನ ಅಂಕಿಅಂಶಗಳು ಮಾತ್ರ. ಇದು ಗ್ರಾಸ್ ಇನ್‌ಕಂ. ನಾವು 1953-54 ಮತ್ತು 1954-55 ರಲ್ಲಿ—39 ಲಕ್ಷದಿಂದ ಹಿಡಿದು 42 ಲಕ್ಷ ಟನ್ ತನಕ ಟಿಂಬರನ್ನು ಹೊರಗಡೆ ರಫ್ತುಮಾಡಿದ್ದೇವೆ.—ಆದರೆ ಆ ಮಾನ್ಯ ಸದಸ್ಯರು ತಮ್ಮ ಅರಣ್ಯ ಖಾತೆಯನ್ನು ಕೊಡಗಿನ ಅರಣ್ಯ ಖಾತೆಯೊಡನೆ ಹೋಲಿಸಿ, ನಮ್ಮ ಅರಣ್ಯ ಖಾತೆಯಿಂದ ಬರತಕ್ಕ ಆದಾಯ ಬಹಳ ಕಮ್ಮಿಯಾಗಿದೆ ಎಂದು ಹೇಳಿದ್ದಾರೆ. ಆದರೆ ಕೊಡಗಿನಲ್ಲಿರತಕ್ಕ ಅರಣ್ಯ ಪ್ರದೇಶ 11,150 ಚದರ ಮೈಲಿಗಳು. ನಮ್ಮ ದೇಶದಲ್ಲಿರತಕ್ಕಂಥ ಅರಣ್ಯ ಪ್ರದೇಶ 54,000 ಚದರ ಮೈಲಿಗಳು. ಆದ್ದರಿಂದ ನಮ್ಮ ಆದಾಯ ಕೊಡಗಿನ ಆದಾಯದ ಐದರಷ್ಟಿರಬೇಕು ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ನಮ್ಮಲ್ಲಿರುವ ಅರಣ್ಯದ ಬಹು ಭಾಗ ಮೈದಾನ ಪ್ರದೇಶದಲ್ಲಿದೆ. ಆದುದರಿಂದ ಇದನ್ನು ಕೊಡಗಿನ ಅರಣ್ಯದೊಡನೆ ಹೋಲಿಸುವುಕ್ಕಾಗುವುದಿಲ್ಲ. ನಮ್ಮ ಮಲೆನಾಡಿನಲ್ಲಿರತಕ್ಕ ಅರಣ್ಯವನ್ನು ನಾವು ತೆಗೆದುಕೊಂಡು ಕೊಡಗಿನ ಅರಣ್ಯಕ್ಕೆ ಹೋಲಿಸಿ ನೋಡಿದರೆ—ನಮ್ಮ ಮಲೆನಾಡು ಅರಣ್ಯದಿಂದ ಬರತಕ್ಕಂಥ ಆದಾಯ ಆ ಕೊಡಗಿಗಿಂತಲೂ ಜಾಸ್ತಿಯಾಗಿರುತ್ತದೆ; ಇಲ್ಲವೇ ಅದರಷ್ಟೇ ಆದರೂ ಬರುತ್ತದೆ. ಆದರೆ ಈಗ ಹೀಗೆ ವಿಂಗಡಿಸಿ ತೋರಿಸುವುದಕ್ಕೆ ನನ್ನಲ್ಲಿ ಅಂಕಿಅಂಶಗಳಿರುವುದಿಲ್ಲ. ಆದರೆ ನಮ್ಮ ಅರಣ್ಯ ಖಾತೆಯಿಂದ ಹೆಚ್ಚಿನ ಲಾಭ ಬಾರದೆ ಇರುವುದಕ್ಕೆ ಕಾರಣಗಳು ಬೇರೆ ಇವೆ. ನಮ್ಮ ಅರಣ್ಯದ

ಡಾ|| ಆರ್. ನಾಗನಗೌಡ.)

ಬಹು ಭಾಗ ಮೈದಾನ ಪ್ರಾಂತ್ಯದಲ್ಲಿದೆ. ಅಲ್ಲಿ ಮಳೆ ಬೀಳುವುದು ಬಹಳ ಕಡಮೆ. ಸಾಮಾನ್ಯವಾಗಿ ಅಲ್ಲಿ ಮಳೆಯೇ ಇಲ್ಲ ಎಂದು ಹೇಳಬಹುದು. ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದ ಹಾಗೆಯೇ ಶ್ರೀ ಹುಚ್ಚೇಗೌಡರು ಮಾತನಾಡಿದ್ದಾರೆ. ಅವರು ಮತ್ತೊಂದು ಅಂಶವನ್ನು ಈ ಸಾಫ್ಟ್ ವುಡ್ಡಿನ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ನಾವು ಆ ಕಂಪೆನಿಗೆ ಮೊದಲು ಸ್ಥಾಪನೆಯಾಗತಕ್ಕಂಥ ಕಾಲದಲ್ಲಿ ಸ್ವಲ್ಪ ರಿಯಾಯಿತಿ ದರದಮೇಲೆಯೇ ಮರವನ್ನು ಸರಬರಾಯಿ ಮಾಡಿದೆವು. ಆದರೆ ಆಗ ಇದ್ದಂಥವರು ಈ ಮ್ಯಾಚ್ ಫ್ಯಾಕ್ಟರಿಗೆ ಮುಂದೆ ಸೇರಿಕೊಳ್ಳಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡು ಆ ಕಂಪೆನಿಗೆ ಹಾಗೆ ಕಡಮೆ ದರದಲ್ಲಿ ಈ soft-woodನ್ನು ಸರಬರಾಯಿ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ನಾವು ಮೊದಲು ಈ ಪ್ಲೈವುಡ್ ಫ್ಯಾಕ್ಟರಿಗೆ 1943 ರಲ್ಲಿ ಒಂದು ಕ್ಯೂಬಿಕ್ ಫುಟ್ಟಿಗೆ ಒಂದಾಣೆಯಂತೆ ರಿಯಾಯಿತಿಮಾಡಿ ಮಾರಾಟ ಮಾಡುವುದಾಗಿ ಅವರಿಗೆ ಒಂದು ಅನುಕೂಲ ಮಾಡಿ ಕೊಟ್ಟಿದ್ದೇವೆ. ಆ ಅಗ್ರಿಮೆಂಟ್ ಈ ವರ್ಷಕ್ಕೆ ಆಖೈರಾಗಬಹುದು ಎಂದು ಕಾಣುತ್ತದೆ. ಆದರೆ ಆ ದಿನಸ ಹೀಗೆ ಒಂದು ರಿಯಾಯಿತಿ ರೇಟನ್ನು ಹಾಕಿ ಕೊಟ್ಟಿದ್ದವರು ನಿನ್ನೆ ವರ್ಷ ತಾನೆ ಈ ಕಂಪೆನಿಗೆ ಒಬ್ಬ ಸದಸ್ಯರಾಗಿ ಸೇರಿಕೊಂಡಿದ್ದಾರೆ. ಹೀಗೆ ಇವರು ಮುಂದೆ ಹತ್ತು ವರ್ಷಗಳು ಕಳೆದನಂತರ ನಾನು ಈ ಕಂಪೆನಿಗೆ ಒಬ್ಬ ಸದಸ್ಯನಾಗಿ ಸೇರುತ್ತೇನೆಂಬ ಮುಂದಾಲೋಚನೆ ಇಟ್ಟುಕೊಂಡು ಇಲ್ಲಿಗೆ ಹತ್ತು ವರ್ಷಗಳ ಕೆಳಗೆ ಹಾಗೆ ಒಂದು ರಿಯಾಯಿತಿ ದರದಲ್ಲಿ ಅದನ್ನು ಕೊಟ್ಟಿದ್ದಾರೆಂದು ಊಹಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹಾಗೆ ಹೇಳತಕ್ಕದ್ದು ಸರಿಯಾಗಿಲ್ಲ ಎಂದು ಕಾಣುತ್ತದೆ.

ಇನ್ನು ಬಿದಿರು ಬೊಂಬುಗಳು, ಮತ್ತು ಗಂಧದಮರ ಇವುಗಳಿಂದ ಲಾಭ ಬರುವುದಿಲ್ಲವೆಂದು ಹೇಳಿದರು. ಹೋದವರ್ಷ ಬಿದಿರಿನಿಂದ 1,65,000 ರೂಪಾಯಿ ಮತ್ತು ಈ ವರ್ಷ 1,20,000 ರೂಪಾಯಿ ಬಂತು. ಕಾಗದದ ಕಾರ್ಖಾನೆಯಿಂದ ಸೀನಿಯೊರೇಜ್ ಮಾತ್ರ ವಸೂಲು ಮಾಡಿದ್ದೇವೆ. ಗಂಧದ ಮರಕ್ಕೆ 22 ಲಕ್ಷ ರೂಪಾಯಿ ಖರ್ಚು ಮಾಡಿ 23 ಲಕ್ಷ ಪಡೆದಿದ್ದೇವೆಂದು ಹೇಳಿದರು . . . .

ಶ್ರೀ ಬಿ. ಹುಚ್ಚೇಗೌಡ.—ಬಿದಿರನ್ನು ಸಾಗಿಸುವುದಕ್ಕೆ ಎರಡು ಲಕ್ಷ ರೂಪಾಯಿ ಕೊಟ್ಟು ಅದರ ಬೆಲೆ ಎರಡೂವರೆ ಲಕ್ಷ ತೆಗೆದುಕೊಳ್ಳುವುದಕ್ಕೆ ಬದಲು ನೀವೇ ಏಕೆ ಮಾಡಬಾರದು ?

ಡಾ|| ಆರ್. ನಾಗನಗೌಡ.—ಬಿದಿರಿಗೆ ಸೀನಿಯೋರೇಜ್ ಮಾತ್ರ ತೆಗೆದುಕೊಳ್ಳುತ್ತಿದ್ದೆವು. Cost of transport and cutting charges ಮತ್ತು ಇತರ ಖರ್ಚುಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಕಬ್ಬಿಣದ ಕಾರ್ಖಾನೆಯಿಂದ ಇದ್ದಿಲಿಗೆ ನಾಲ್ಕಾಣೆಯಂತೆ ಕಟ್ಟಿಗೆಗೆ ಎಂಟು ಆಣೆಯಂತೆ ಸೀನಿಯೋರೇಜ್ ತೆಗೆದುಕೊಳ್ಳುತ್ತಿದ್ದೇವೆ. ನಾವೇ ಇದ್ದಿಲು ಮಾಡಿಕೊಳ್ಳುತ್ತಿದ್ದೇವೆ . . . .

ಶ್ರೀ ಬಿ. ಎಂ. ಶೀನಪ್ಪ (ಕಬ್ಬಳ್ಳಿಪೇಟೆ).—ಈ ದರ ನಿಗದಿಯಾದದ್ದು ಯಾವ ಇಸವಿಯಲ್ಲಿ ?

ಡಾ|| ಆರ್. ನಾಗನಗೌಡ.—ಕೆಲವು ವರ್ಷಗಳಾಗಿವೆ; ಇಂಥವರ್ಷವೆಂದು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಂ. ಶೀನಪ್ಪ.—ಸುಮಾರು ಇಪ್ಪತ್ತು ವರ್ಷ ಆಗಿದೆಯೇ ?

ಡಾ|| ಆರ್. ನಾಗನಗೌಡ.—ಈಗ ಆ ವಿವರಗಳು ನನ್ನಲ್ಲಿಲ್ಲ; ಕೆಲವು ವರ್ಷಗಳಾಗಿವೆ.

ಶ್ರೀ ಬಿ. ಎಂ. ಶೀನಪ್ಪ.—ಬಹಳ ವರ್ಷಗಳಾಗಿದ್ದರೆ ಈ ದರಗಳನ್ನು "ರಿವೈಸ್" ಮಾಡುವುದಕ್ಕಾಗುವುದಿಲ್ಲವೇ ?

ಡಾ|| ಆರ್. ನಾಗನಗೌಡ.—ಯೋಚನೆ ಮಾಡೋಣ. ಅಡ್ವಾನ್ಸುಗಳು ಬಹಳವಾಗಿ ನಿಂತಿವೆ ಎಂದು ಶ್ರೀ ಹುಚ್ಚೇಗೌಡರೂ ಬಸಪ್ಪನವರೂ ಹೇಳಿದರು. ಎಷ್ಟು ಅಡ್ವಾನ್ಸ್ ಕೊಟ್ಟಿದೆ ಎಷ್ಟು ಬರುವುದಿದೆ ಎಷ್ಟು ಬಾಕಿ ನಿಂತಿದೆ ಎಂಬ ವಿವರಗಳನ್ನೆಲ್ಲಾ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಸರ್ಕಾರದವರ ಅಭ್ಯಂತರವೇನೂ ಇಲ್ಲ. ಈ ಅಡ್ವಾನ್ಸುಗಳನ್ನೆಲ್ಲಾ ವಸೂಲು ಮಾಡುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಜರುಗಿಸಿದ್ದೇವೆ. ಈ ಅಡ್ವಾನ್ಸುಗಳನ್ನು ಕೊಟ್ಟವರ ಪೈಕಿ ಒಬ್ಬರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಅಲ್ಲಿಂದ ವರ್ಗವಾಗಿ ಮೈದಾನಕ್ಕೆ ಬಂದಿದ್ದರು. ಅವರು ಯಾರು ಯಾರಿಗೆ ಯಾವ ಯಾವ ಸಂದರ್ಭಗಳಲ್ಲಿ ಕೊಟ್ಟರು ಎಂಬುದನ್ನೆಲ್ಲಾ ಪರಿಶೀಲಿಸಿ ಅದನ್ನು ವಸೂಲು ಮಾಡುವುದಕ್ಕಾಗಿ ಮತ್ತೆ ಅವರನ್ನು ಆ ಪ್ರದೇಶಕ್ಕೆ ಹಾಕಿದ್ದೇವೆ . . . .

Sri K. HANUMANTHAIYA (Chief Minister).—Anyhow, as the Hon'ble Members have suggested, I will look into the matter as it is a matter worth investigating; under the excuse of looking after the proper collections of advance amounts, they go again and again and do the same thing. It has come to my notice. I will do the needful.

ಡಾ|| ಆರ್. ನಾಗನಗೌಡ.—"ಸ್ಲೀಪರ್ಸ್" ಸರಬರಾಯಿಯ ವಿಷಯದಲ್ಲಿ ಟೆಂಡರ್ ಕರೆಯದೆ ಮಾಡಿದ್ದಾರೆಂದು ಹೇಳಿದರು. ಇದು ನಿಜವಲ್ಲ. ಟೆಂಡರ್ ಕರೆದೇ ಕೊಡಲಾಗಿದೆ. ಟೆಂಡರ್ ಕರೆಯದೆ ಆ ಕೆಲಸವಾಗಿಲ್ಲ.

ಶಿವಮೊಗ್ಗದಲ್ಲಿ ಈಗಿರುವ ಕನ್ಸರ್ವೇಟರವರ ಕಛೇರಿ ಆವಶ್ಯಕವಿಲ್ಲವೆಂದು ಶ್ರೀ ಟಿ. ಸಿ. ಬಸಪ್ಪನವರು ಹೇಳಿದರು. ಈಗ ಸಂಸ್ಥಾನದ ಅರ್ಧಕ್ಕಿಂತ ಹೆಚ್ಚು ಅರಣ್ಯ ಭಾಗವನ್ನು ಅವರು ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ ಭದ್ರಾವತಿ ಮತ್ತು ಇತರ ಮಲೆನಾಡು ಪ್ರದೇಶವನ್ನು ನೋಡಿಕೊಳ್ಳುವುದಕ್ಕೆಂದೇ ಅವರಿಗೆ ಆ ಕೆಲಸ ಕೊಟ್ಟು ಅಲ್ಲಿಟ್ಟಿದ್ದೇವೆ.

Transfer of timber ಅಮಾನಿಯಾಗಿ ಕೆಲಸ ಮಾಡುವ ವಿಚಾರದಲ್ಲಿ ನಾನು ನಿನ್ನೆಯೇ information ಕೊಟ್ಟಿದ್ದೇನೆ. ಅದನ್ನು tender call for ಮಾಡಿ ಕೊಟ್ಟಿದ್ದೇವೆ. 1953-54ರಲ್ಲಿ ಯಾವತ್ತೂ ಕೆಲಸ ಆಗಲಿಲ್ಲ; 1954-55ರಲ್ಲಿ ಇನ್ನೂ ಕೆಲವು ಉಳಿದಿತ್ತು. ಅದು ಸ್ವಲ್ಪ ಕೆಲಸವಿದ್ದದ್ದರಿಂದ ಈ ವರ್ಷ ನಾವು ಅಮಾನಿ ಮೇಲೆ ಮಾಡಿದ್ದೇವೆ.

Sri T. C. BASAPPA.—Rates?

ಡಾ|| ಆರ್. ನಾಗನಗೌಡ.—ಈ ವರ್ಷ Tender call for ಮಾಡಲಿಲ್ಲ, ಕೆಲಸ ವಿಶೇಷವಿರಲಿಲ್ಲ, ಅದಕ್ಕೋಸ್ಕರ tender call for ಮಾಡಲಿಲ್ಲ.

Sri T. C. BASAPPA.—Rates were higher.

Dr. R. NAGAN GOWDA.—Since no tenders were called for, the rates obtained in the years prior to that were

the rates that have been sanctioned. ತಾವು ಇನ್ನೊಂದು ವಿಷಯ ಹೇಳಿದಿರಿ. ಇನ್ನುಮೇಲೆ tenders ಸರ್ಕಾರದವರೇ confirm ಮಾಡಬೇಕು ಎಂದು. ಆ ವಿಷಯವನ್ನು ವಿಚಾರಿಸುತ್ತೇನೆ.

Sri T. C. BASAPPA.—What about bamboo supply during 1954-55?

ಡಾ॥ ಆರ್. ನಾಗನಗೌಡ.—ಇದನ್ನು ಅಮಾನಿಯಿಂದ ಮಾಡಿದ್ದೇವೆ. ಏಕೆಂದರೆ ಕೆಲವು advances ಇದ್ದವು. ಅವನ್ನು ವಸೂಲು ಮಾಡುವುದಕ್ಕಾಗಿ ಅಮಾನಿಯಿಂದ ಮಾಡಿಸಿದ್ದೇವೆ. ಇದು ಇನ್ನೂ investigation ನಲ್ಲಿ correspondence ನಲ್ಲಿ ಇದೆ. That is still pending with the Government. ಶ್ರೀ ಶ್ರೀನಿವಾಸ ಅಯ್ಯಂಗಾರ್‌ರವರು ತಲಕಾಡಿನಲ್ಲಿ sand dunes ವಿಷಯ ಹೇಳಿದರು. ಈ ಪ್ಲಾಂಟೇಷನ್ ಬಹಳ ಚೆನ್ನಾಗಿದೆ, ಈಗ ಪ್ಲಾಂಟೇಷನ್ indiscriminate ಆಗಿ ಕತ್ತರಿಸುತ್ತಿದ್ದಾರೆ ಎಂದು ಹೇಳಿದರು. Indiscriminate ಆಗಿ ಕತ್ತರಿಸುವುದನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ. 'Afforestation scheme ಬಹಳ slow, provision is too inadequate and we should make provision' ಎಂದು ಹೇಳಿದ್ದಾರೆ. ಅದೇ ವಿಷಯವಾಗಿ ಶ್ರೀ ಸಿದ್ದಪ್ಪನವರು, ಚೆನ್ನಬಸಪ್ಪನವರು ಮೊದಲಾದ ಇತರ ಮಹನೀಯರು ಸಹ ಹೇಳಿದ್ದಾರೆ ಮತ್ತು ಈಗ afforestation ಬಗ್ಗೆ 2,27,000 ರೂಪಾಯಿ ಇಟ್ಟಿರುವುದು ಸಾಕೇ ಎಂದು ಕೇಳಿದ್ದಾರೆ. ಕೆಲವರು afforestation ಗೆ ಈ ಹಣ ಬಹಳ ಕಡಿಮೆ ಆಯಿತು ಎಂದು ಹೇಳಿದ್ದಾರೆ, ಮತ್ತೆ ಕೆಲವರು ಇದರಿಂದ ಏನು ಕೆಲಸ ಮಾಡುತ್ತೀರಿ ಎಂದು ಕೇಳಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಷ್ಟು ಲಕ್ಷ ರೂಪಾಯಿಗಳಿಗೆ ಪ್ರತಿಫಲ ಬರುತ್ತದೆಯೇ ಎನ್ನುವುದನ್ನು ತಿಳಿದುಕೊಂಡಿದ್ದೀರಾ?

ಡಾ॥ ಆರ್. ನಾಗನಗೌಡ.—ಈಗ ನಮ್ಮ 20 ಲಕ್ಷ ಎಕರೆ forest ನಲ್ಲಿ ಸಾಧಾರಣವಾಗಿ 4-5 ಲಕ್ಷ ಎಕರೆಯಷ್ಟು re-afforest ಮಾಡಿಸಿಕೊಳ್ಳುವ ಸ್ಥಿತಿಯಲ್ಲಿದೆ ಎಂದು ನನ್ನ ಅಭಿಪ್ರಾಯ. Afforestation work ಅನೇಕ ಸ್ಥಳಗಳಲ್ಲಿ ನಾವು ಈಗ ಮಾಡುತ್ತಿದ್ದೇವೆ. ಶ್ರೀ ಚನ್ನಬಸಪ್ಪನವರು ಅಡವಿಯೊಳಗೆ ಹೋಗಿ ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿದರು. ನಾನೂ ಸಹ ಅನೇಕ ಅಡವಿಗಳಿಗೆ ಹೋಗಿ ನೋಡಿದ್ದೇನೆ. ಈಗ afforestation economical ಆಗಿ, cheap ಆಗಿ ಮಾಡುವುದಕ್ಕೆ ಸಾಧ್ಯವೇ ಎಂದು ಕೆಲವು experiments ಜರುಗಿಸುತ್ತಿದ್ದಾರೆ. ಈಗ ನಮ್ಮಲ್ಲಿ ಇಷ್ಟು ವಿಶೇಷವಾದ ಭೂಮಿ afforestation ಗೆ ಇರುವಾಗ ಎಕರೆಗೆ 50-60 ರೂಪಾಯಿ ಹಿಡಿದರೆ ಅದನ್ನೆಲ್ಲಾ afforest ಮಾಡುವುದು ಬಹಳ ಕಷ್ಟವಾಗುತ್ತದೆ. ಆದಕಾರಣ most economical ಆಗಿ, ಬಹಳ ಕಡಿಮೆ ದರದಲ್ಲಿ ಅದನ್ನು afforestation ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಈಗ ಜಂಗಮಕೋಟೆಯಲ್ಲಿ ಒಂದು experiment ಜರುಗಿಸುತ್ತಿದ್ದೇವೆ. ಹರಿಹರದ ಆಚೆ ಕಡೆ ದುರ್ಗಾವತಿ ಹತ್ತಿರ ಒಂದು ಜರುಗಿಸುತ್ತಿದ್ದೇವೆ. ಕೆಲವರು 50 ರೂಪಾಯಿ ಬೇಕಾಗುತ್ತದೆಂದೂ, ಕೆಲವರು 30 ರೂಪಾಯಿ ಬೇಕಾಗುತ್ತದೆಂದೂ ಕೆಲವರು 17-18-20 ರೂಪಾಯಿಗಳ ಒಳಗೆ ಸಹ ಮಾಡಬಹುದೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಇನ್ನೂ ಕಡಿಮೆ ದರದಲ್ಲಿ ಮಾಡಬಹುದು ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಎಕರೆ ಒಂದಕ್ಕೆ ಎಷ್ಟು ಖರ್ಚಾಗುತ್ತಿದೆ?

ಡಾ॥ ಆರ್. ನಾಗನಗೌಡ.—ಇದುವರೆಗೂ trench mound system ಮೇಲೆ 54-55 ರೂಪಾಯಿವರೆಗೂ, ಕೆಲವು ಭಾಗದಲ್ಲಿ 40 ರೂಪಾಯಿವರೆಗೂ ಆಗಿದೆ. ಈಗ ಇತರ ಭಾಗಗಳಲ್ಲಿ ಅದನ್ನು ಇನ್ನೂ ಕಡಿಮೆ rate ನಲ್ಲಿ ಮಾಡುವುದಕ್ಕೆ ಸಾಧ್ಯವಿದೆ ಎಂದು ಕಂಡುಬರುತ್ತದೆ.

ಆದಕಾರಣ ಇದರಲ್ಲಿ ಹೆಚ್ಚು ಗಮನ ಕೊಡುತ್ತಾ ಇದ್ದೇವೆ. ಇನ್ನೊಂದು ಸಂದರ್ಭ ಹೇಳಬೇಕೆಂದರೆ ಇಂಡಿಯಾ ಸರ್ಕಾರದವರು ಸಾಯಿಲ್ ಕನ್‌ಸರ್ವೇಷನ್ ಎಂದು ಒಂದು ಏರ್ಪಾಡು ಇಟ್ಟುಕೊಂಡಿದ್ದಾರೆ, ಅದರಲ್ಲಿ ಕೇವಲ ಅಫಾರಿಸ್ಟೇಷನ್‌ಗಾಗಿ ದುಡ್ಡು ಖರ್ಚುಮಾಡಿದರೆ ಇಷ್ಟು ದುಡ್ಡು ಗ್ರಾಂಟು ಮೂಲಕವಾಗಿ ಕೊಡುತ್ತೇವೆ ಎಂದು ಹೇಳಿ ಒಂದು ಪ್ರೋಗ್ರಾಂ ಇಟ್ಟುಕೊಂಡಿದ್ದಾರೆ. ಇನ್ನು ಕೆಲವು ವಿಷಯದಲ್ಲಿ ಅರ್ಧ ಗ್ರಾಂಟು ಕೊಡುತ್ತೇವೆ ಎಂದು ಹೇಳುತ್ತಾರೆ. ಎರಡು ಲಕ್ಷ ಇಪ್ಪತ್ತೇಳು ಸಾವಿರ ರೂಪಾಯಿಗಳು ಇದೆಯಲ್ಲ ಅದಕ್ಕೆ ಸರಿಸಮಾನವಾಗಿ ಸರ್ಕಾರ ಗ್ರಾಂಟ್ ಕೊಡಬೇಕೆಂದು ಕೇಳುತ್ತಾ ಇದ್ದೇವೆ. ಈಗ ಫಾರ್ಮೇಷನ್ ಮತ್ತು ಸೋಯಿಂಗ್‌ಗೆ ಎಪ್ಪತ್ತೆರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಶ್ರೀಮಾನ್ ಚನ್ನಬಸಪ್ಪನವರಿಗೇ ಗೊತ್ತಿದ್ದಹಾಗೆ, ಸಿಬ್ಬಂದಿಗೂ ಕೂಡ ಕೊಡಬೇಕಾಗುತ್ತದೆ. ಅಫಾರಿಸ್ಟೇಷನ್ ಮಾಡಿದಮೇಲೆ ಅದನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿ ಬೇಕಾಗುತ್ತದೆ. ಆದಕಾರಣ ಸಿಬ್ಬಂದಿಗೆ ನಲವತ್ತೆರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಅದೇ ಸಿಬ್ಬಂದಿ ಇಟ್ಟುಕೊಂಡು ಇನ್ನೂ ಹೆಚ್ಚಿಗೆ ಅಫಾರಿಸ್ಟೇಷನ್ ಮಾಡುವುದಕ್ಕೆ ಸಾಧ್ಯವಾದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಂಕೋನ ಎಷ್ಟು ಎಕರೆಯಲ್ಲಿ ಇದೆ?

ಡಾ॥ ಆರ್. ನಾಗನಗೌಡ.—ನಲವತ್ತು ಎಕರೆಯಲ್ಲಿ ಬೆಳೆದಿದ್ದಾರೆ. ಇದನ್ನು ಎಕ್ಸ್‌ಪೆರಿಮೆಂಟಲ್ ಆಗಿ ಮಾಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಒಬ್ಬರು ಫಾರೆಸ್ಟ್ ರೇಂಜರ್ ಏಕೆ ಬೇಕು ಎಂಬುದನ್ನು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ಅವರು ಸಿಂಕೋನ ಪ್ಲಾಂಟೇಷನ್ ಮತ್ತು ಇತರ ಭಾಗಗಳಲ್ಲಿಯೂ ಸಹ ಕೆಲಸ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ವಿಚಾರಿಸುತ್ತೇನೆ. ಶ್ರೀಮಾನ್ ಶಿವರುದ್ರಪ್ಪನವರು ಹುಣಸೂರಿನಲ್ಲಿರುವ ಕೊಡಗಿನ ಮರದ ಡಿಪೋವನ್ನು ಮೈಸೂರಿಗೆ ಟ್ರಾನ್ಸ್‌ಫರ್ ಮಾಡಬೇಕೆಂದಿದ್ದಾರೆ ಎಂದು ಹೇಳಿದರು. ಆ ವಿಷಯದಲ್ಲಿ ಇನ್ನೂ ಕಾಗದ ಪತ್ರ ಜರುಗುತ್ತಿದೆ. ಯಾವ ತೀರ್ಮಾನಕ್ಕೂ ಬಂದಿಲ್ಲ. ಮತ್ತು ಇನ್ನೊಂದು ವಿಷಯ ಮಾನ್ಯ ಸದಸ್ಯರು ಹೇಳಿದರು—ಎತ್ತು ಗಾಡಿಗಳಲ್ಲಿ ಸೌದೆ ಸಾಗಿಸಲು ಲೈಸೆನ್ಸ್ ಕೊಡುತ್ತಿಲ್ಲ ಎಂದು ಹೇಳಿದರು. ಪರ್ಮಿಟ್ ಕೊಡೋಣ. ಪರ್ಮಿಟ್ ಇಲ್ಲದೆಯೇ ಎಷ್ಟೋ ಸಾಗಿಸುತ್ತಿರುವಾಗ ಪರ್ಮಿಟ್ ಕೊಟ್ಟರೆ ತಾನೆ ಏನು? ಆದರೆ . . . .

ಶ್ರೀ ಎಚ್. ಎಂ. ಚನ್ನಬಸಪ್ಪ.—ಲಾರಿಗಳಲ್ಲಿ ಸಾಗಿಸಲು ಪರ್ಮಿಟ್ ಕೊಡುತ್ತಾ ಇಲ್ಲವೇ? ಕೊಡುತ್ತಾ ಇದ್ದೀರಿ.

ಡಾ॥ ಆರ್. ನಾಗನಗೌಡ.—ಲಾರಿಗಳವರಿಗೆ ಕೂಪ್ಸ್ ಎಂದು ಹೇಳಿ ಕೊಟ್ಟಿರುತ್ತದೆ. ಅವರು ಅಲ್ಲಿಂದ ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇವರಿಗೂ ಅದೇ ರೀತಿ ಕೂಪ್ಸ್ ಮಾಡಿ ಕೊಡಿ.

ಡಾ॥ ಆರ್. ನಾಗನ ಗೌಡ.—ಆ ರೀತಿ ಕೊಟ್ಟರೆ ಏನಾಗುತ್ತದೆ ಎಂದರೆ ಅವರು ಆ entire area ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು ಹತ್ತು ಎಕರೆ ಇದ್ದರೆ ಅಷ್ಟನ್ನೂ ತೆಗೆದುಕೊಳ್ಳುವುದಕ್ಕೆ ಅವರಿಗೆ ಯೋಗ್ಯತೆ ಇರುವುದಿಲ್ಲ. ಆ ರೀತಿ ಯೋಗ್ಯತೆ ಇದ್ದು ತೆಗೆದುಕೊಂಡರೆ ಕೂಪ್ಸ್ ಕೊಡುವುದಕ್ಕೆ ಆಕ್ಷೇಪಣೆ ಇಲ್ಲ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ತಾವು ಈಗ ಹೇಳುವುದು ಹಸಿ ಸೌದೆ ಕಾಡಿನಲ್ಲಿ ತೆಗೆದುಕೊಂಡು ಹೋಗಲು ಅವಕಾಶ ಕೊಟ್ಟರೆ ಹೆಚ್ಚಾಗಿ ಕದ್ದುಕೊಂಡು ಹೋಗುತ್ತಾರೆ ಎಂತಲೇ? ಈಗ ರಹದಾರಿ ಪಡೆದು ಒಣ ಸೌದೆ ತರಲು ಎಂಟಾಣೆಯೋ ಏನೋ ಕೊಟ್ಟರೆ ಅವಕಾಶ ಕೊಡಲು ಕಾನೂನಿದೆ. ಒಣಸೌದೆ ತರಲು ಕಾಡಿನಲ್ಲಿ ಸಿಕ್ಕುತ್ತಿಲ್ಲ, ರಹದಾರಿ ತೆಗೆದುಕೊಂಡು ಹೋದರೂ ತರಲು ಅವಕಾಶವಿಲ್ಲ, ಸರ್ಕಾರದವರು ಬೇಕಾದರೆ ಹೆಚ್ಚು ಹಣ ತೆಗೆದುಕೊಂಡು ಹಸಿಸೌದೆ ತರಲು ಏಕೆ ಅವಕಾಶ ಕೊಡಬಾರದು ಎಂದು ಈಗ ಶಿವರುದ್ರಪ್ಪನವರು ಮತ್ತು ಇತರರು ಕೇಳುತ್ತಿದ್ದಾರೆ. ಜನರಿಗೆ ಬಹಳ ಕಷ್ಟವಾಗಿರುವುದರಿಂದ ಇದನ್ನು ಪುನಃ ಪರಿಶೀಲಿಸಬೇಕು.

ಡಾ॥ ಆರ್. ನಾಗನ ಗೌಡ.—ಪರಿಶೀಲನೆ ಮಾಡುತ್ತೇವೆ. ಈಗ ಯಾವ ಸೌದೆ ಕಡಿಯಲು ಅವಕಾಶ ಕೊಟ್ಟಿರುತ್ತದೆಯೋ ಅದನ್ನು ವಿಂಗಡಿಸಿ ತೆಗೆದುಕೊಳ್ಳುವುದಿಲ್ಲ. ಒಂದು ಗ್ರಾಮದವರಿಗೆ ಕೂಪ್‌ಕೊಟ್ಟರೆ ಪರ್ಮಿಟ್ ಕೊಡಲು ಸಹಾಯವಾಗುತ್ತದೆ. ಶ್ರೀ ನಾರಾಯಣರೆಡ್ಡಿಯವರು ಮತ್ತು ಇತರರು ಕೋಲಾರ ಜಿಲ್ಲೆಯಲ್ಲಿ ಕೂಪ್ ಕೊಡಕೂಡದೆಂದು ಒತ್ತಾಯ ಮಾಡಿ ಹೇಳಿದರು. ಹೋದವರ್ಷ ಈ ವಿಷಯ ವಿಚಾರ ಮಾಡುವುದಾಗಿ ಹೇಳಿದ್ದೆ. ಈಗ ಹಿಂದಿನ ವರ್ಷ ಏನು ಕೊಟ್ಟಿದ್ದೆವೋ ಅದಕ್ಕಿಂತ ಬಹಳ ಕಡಮೆ ಪ್ರದೇಶ ಕೊಟ್ಟಿದ್ದೇವೆ. ಆ ಪ್ರದೇಶದಲ್ಲಿ ಫಾರೆಸ್ಟನ್ನು ಹೆಚ್ಚಾಗಿ ಬೆಳೆಸಬೇಕು, ಮುತುವರ್ಜಿ ವಹಿಸಬೇಕು, ಶ್ರದ್ಧೆವಹಿಸಬೇಕು ಎಂದೇನು ಹೇಳುತ್ತಿದೆಯೋ ಅದರಂತೆ ಮಾಡಲು ಯೋಚನೆಮಾಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಕೂಪುಗಳನ್ನು ನಿಲ್ಲಿಸಿದರೆ ಸೌದೆ ಒದಗಿಸುವುದು ಹೇಗೆ? ಫಾರೆಸ್ಟನ್ನು ಬೆಳೆಸಬೇಕೆಂಬ ಅಭಿಪ್ರಾಯ ಮಾನ್ಯ ಸದಸ್ಯರಲ್ಲೇನಿದೆಯೋ ನಮ್ಮಲ್ಲೂ ಅದೇ ಅಭಿಪ್ರಾಯವಿದೆ. ಮಾನ್ಯ ಸದಸ್ಯರು ಹೇಳಿದಂತೆ ಅರಣ್ಯವನ್ನು ಹೆಚ್ಚಿಸಲು ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿಸಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ಮೈದಾನದಲ್ಲಿ ಹೆಚ್ಚು ಜಮೀನಿರುವವರು ಕೆಲವು ಭಾಗದಲ್ಲಿ ಫಾರೆಸ್ಟ್ ಬೆಳೆಸಬೇಕೆಂದು ಕಾನೂನು ಮಾಡಿದರೆ ಫಾರೆಸ್ಟ್ ಹೆಚ್ಚುತ್ತದೆ.

ಡಾ॥ ಆರ್. ನಾಗನಗೌಡ.—ಹಾಗೆ ಮಾಡಬೇಕೆಂದು ಈಗ ಇಂಡಿಯಾ ಸರ್ಕಾರದವರೂ ಮತ್ತು ನಮ್ಮ ಸಂಸ್ಥಾನದ ಸರ್ಕಾರದವರೂ ಬಹಳ ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಜನರು ಗಿಡ ಬೆಳೆಸುವುದಿಲ್ಲ. ನಿಜವಾಗಿಯೂ ಬೆಳೆಸಿದರೆ ನಾಲ್ಕಾರು ವರ್ಷಗಳಲ್ಲಿ ಎಷ್ಟೋ ಬೆಳೆಸಬಹುದು. ಅಡವಿ ಬೆಳೆಸಿರಿ ಎಂದು ಭೂಮಿ ಕೊಟ್ಟರೂ ಆ ಕೆಲಸವನ್ನು ಅವರು ಮಾಡುವುದೇ ಇಲ್ಲ.

ಇನ್ನೊಂದು. ಫಾರೆಸ್ಟ್ ಜಮೀನನ್ನು ವ್ಯವಸಾಯಕ್ಕೆ ಕೊಡಬೇಕೆಂದು ಕೆಲವರು ಹೇಳಿದ್ದಾರೆ; ಕೆಲವರು ಕೂಡದೆಂದು ಹೇಳಿದ್ದಾರೆ. ಕಳೆದ 1947 ನೆಯ ಇಸವಿಯಿಂದ ಹದಿನಾರು ಸಾವಿರ ಎಕರೆ ಫಾರೆಸ್ಟ್ ಕೊಟ್ಟಿದ್ದೇವೆ.

5 P.M.

ಹಾಲಿ ನಮ್ಮಲ್ಲಿ ಲೆಕ್ಕ ನೋಡಿದರೆ ನಮಗೆ ಶೇಕಡ ಹದಿನೈದರಷ್ಟು ಮಾತ್ರ ಅರಣ್ಯವಿದೆ. ಅದೂ ಮಲೆನಾಡಿನಲ್ಲೇ ಹೆಚ್ಚು ಭಾಗವಿದೆ. ಮೈದಾನ ಪ್ರದೇಶದಲ್ಲಿ ನೋಡುವುದಾದರೆ ಶೇಕಡ ಎಂಟರಷ್ಟು ಮಾತ್ರ ಇದೆ. ಇಂಥ ಸಂದರ್ಭದಲ್ಲಿ ನಾವು ಅರಣ್ಯದ ಜಮೀನುಗಳನ್ನು ಸಾಗುವಳಿಗೆ ಕೊಡುವುದು ನ್ಯಾಯವಲ್ಲವೆಂದು ರೈತರಾದಂಥ ಜನರೆಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ಒಂದುವೇಳೆ ಕೊಟ್ಟುಬಿಟ್ಟರೆ ಮತ್ತೆ ಅದನ್ನು ಬಿಡಿಸಿ ಕೊಳ್ಳಬೇಕೆಂದರೆ ಆಗುವುದಿಲ್ಲ. ಕಾಡನ್ನು ಆಮೇಲೆ ಬೆಳೆಸುವುದು ಕಷ್ಟವಾಗುತ್ತದೆಂದು ಎಲ್ಲರೂ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಶಿವನಂಜೇಗೌಡ.—ಅಡವಿ ಬೆಳೆಸುವುದಕ್ಕೆ ಆಗದೆ ಉಳಿಯುವುದನ್ನು ಮಾತ್ರ ಕುರುಚಲು ಗಿಡ ಬೆಳೆಸುವುದಕ್ಕೆ ಬಿಡುವುದರ ಬದಲು ಕೊಡಬೇಕೆಂದು ಹೆಳುತ್ತಿದ್ದೇನೆ. ಅಷ್ಟೆ.

ಡಾ॥ ಆರ್. ನಾಗನಗೌಡ.—ಶ್ರೀಮಾನ್ ಶಿವನಂಜೇಗೌಡರಂಥವರು ಈ ಮಾತು ಹೇಳುವುದು ಆಶ್ಚರ್ಯವಾಗಿರುತ್ತದೆ. ಅಡವಿ ಹೆಚ್ಚಿಗೆ ಬೆಳೆಸಬೇಕೆಂದು ಎಲ್ಲರೂ ಹೇಳುತ್ತಿರುವ ಕಾಲದಲ್ಲಿ ನೀವು ಹೀಗೆ ಹೇಳುವುದೇ! ಒಂದು ನಿದರ್ಶನ ಹೇಳುತ್ತೇನೆ. ನಾನು ಈಚೆಗೆ ಒಮ್ಮೆ ಮಲೆ ಬೆನ್ನೂರಿಗೆ ಹೋಗಿದ್ದೆ. ನಾನು ಇಪ್ಪತ್ತು ವರ್ಷಗಳ ಕೆಳಗೆ ಅಲ್ಲಿಗೆ ಹೋಗಿದ್ದಾಗ ಹುಲಿ ಚಿರತೆಗಳಿಂದ ಕೂಡಿದ ದೊಡ್ಡ ಕಾಡಿತ್ತು. ಅಂಥಾದ್ದು ಈ ಹೊತ್ತು ಅಲ್ಲಿ ಅಡವಿ ಇರುವಂತೆಯೇ ಕಾಣುವುದಿಲ್ಲ. ಅಲ್ಲಿನ ಜನರನ್ನು ಕೇಳಿದರೆ ಹಿಂದೆ ಹಾಗಿತ್ತು, ಈಗ ಎಲ್ಲಾ ಹೋಗಿದೆ ಎನ್ನುತ್ತಾರೆ. ಈ ಪ್ರಕಾರ ಕಾಡುಗಳನ್ನು ನಾವು ಕಾಪಾಡಿಕೊಂಡು ಬರದೆ ಹೋದರೆ ಕಾಲಕ್ರಮದಲ್ಲಿ ಅವೆಲ್ಲಾ ಹೋಗುತ್ತವೆ.

Mr. SPEAKER.—The question is:

"That a sum not exceeding Rs. 44,30,000 be granted to the Government to defray the charges which will come in course of payment during the year ending 31st day of March 1956, in respect of 'Forest'."

The motion was adopted.

Mr. SPEAKER.—The question is:

"That sums not exceeding the sums specified in the motions for demands for Grants for the year 1955-56 and included in the list distributed to members be granted to the Government to defray the charges which will come in course of payment during the year ending 31st day of March 1956 in respect of demands, 30, 33, 34 and 36."

The motion was adopted.

(As directed by the SPEAKER, the motions adopted are reproduced below):

DEMAND No. 30—FAMINE RELIEF.

54. Famine Relief.

"That a sum not exceeding Rs. 10,00,000 be granted to the Government to defray the charges which will come in course of payment during the year ending 31st day of March 1956, in respect of 'Famine Relief'."

DEMAND No. 33.—STATIONERY AND PRINTING.

56. Stationery and Printing.

"That a sum not exceeding Rs. 22,82,000 be granted to the Government to defray the charges which will come in course of payment during the year ending 31st day of March 1956, in respect of 'Stationery and Printing'."

DEMAND No. 34.—MISCELLANEOUS.

57. Miscellaneous.

"That a sum not exceeding Rs. 27,06,100 be granted to the Government to defray the charges which will come in course of payment during the year ending 31st day of March 1956, in respect of 'Miscellaneous'."

DEMAND No. 36.—WORKING EXPENSES (FOREST).

X. Forest—3. (1) Wood Preservation Plant—Working Expenses and Seigniorage.

"That a sum not exceeding Rs. 5,02,000 be granted to the Government to defray the charges which will come in course of payment during the year ending 31st day of March 1956, in respect of 'X. Forest—3 (1) Wood Preservation Plant—Working Expenses and Seigniorage'."

Mr. SPEAKER.—The House will now rise and meet at 12 o'clock tomorrow.

The House adjourned at Five Minutes Past Five of the Clock to meet again at 12 of the clock the next day.